**ಸಂಪುಟ: 05 ಸಂಚಿಕೆ: 272 ಪುಟಗಳು: 08 ಮಂಗಳವಾರ 16 ಡಿಸೆಂಬರ್ 2025**

www.udayavahini.in  epaper.udayavahini.in  Udaya vahini news  Udaya vahini news  Udayavahini news youtube  udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696  +91 8035841833  ₹5

**ಮುಂಜಾನೆ ಮಾತು**

ಮನುಷ್ಯನ ಉದ್ಯೋಗಕ್ಕೂ ಆದರ್ಶಕ್ಕೂ ಪರಸ್ಪರ ಹೊಂದಿಕೆ ಬಾರದೆ ಹೋದಲ್ಲಿ ಜೀವನದಲ್ಲಿ ಸುಖ ಸಿಗಲಾರದು

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


# ರಾಜ್ಯದ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೊರ ರಾಜ್ಯದವರ ದರ್ಬಾರ್!

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೊರ ರಾಜ್ಯದವರ ದರ್ಬಾರ್ ಜೋರಾಗಿದೆ. ಸಿಬ್ಬಂದಿಯ ಭಾಷಾ ಸಮಸ್ಯೆಯಿಂದಾಗಿ ಕನ್ನಡಿಗ ಗ್ರಾಹಕರಿಗೆ ಸಮಸ್ಯೆ ಉಂಟಾಗುತ್ತಿದೆ. ವ್ಯವಹಾರಿಕ ಭಾಷೆಯ ಸಮಸ್ಯೆಯಿಂದಾಗಿ ಸಿಬ್ಬಂದಿ ಮತ್ತು ಗ್ರಾಹಕರ ನಡುವೆ ಸಂಘರ್ಷ ನಡೆದ ಪ್ರಸಂಗವೂ ಇತ್ತೀಚೆಗೆ ನಡೆಯುತ್ತಿದೆ.

**ಹಿಂದಿ ಬಾರದ ಕನ್ನಡಿಗನಿಗೆ ಗೆಟ್‌ಔಟ್ ಎಂದಿದ್ದ ಸಿಬ್ಬಂದಿ:** ಇತ್ತೀಚೆಗೆ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೆ. ಎಂ. ದೊಡ್ಡಿಯಲ್ಲಿ ಬ್ಯಾಂಕ್ ಅಧಿಕಾರಿಯೊಬ್ಬರು ತನ್ನೊಂದಿಗೆ ವ್ಯವಹರಿಸಬೇಕೆಂದರೆ ನೀವು ಹಿಂದಿ ಕಲಿಯಬೇಕು ಎಂದು ಗ್ರಾಹಕರೊಂದಿಗೆ ಉದ್ಧಟತನ ಪ್ರದರ್ಶನ ಮಾಡಿದ್ದರು. ತಾನು ಕನ್ನಡ ಮಾತನಾಡಲಾರೆ ಎಂದು ಹಠಕ್ಕೆ ಬಿದ್ದಿದ್ದ ಬ್ಯಾಂಕ್ ಸಿಬ್ಬಂದಿ ವಿರುದ್ಧ ಸ್ಥಳೀಯರು ತರಾಟೆಗೆ ತೆಗೆದುಕೊಂಡಿದ್ದರು. ಬ್ಯಾಂಕ್ ಸಿಬ್ಬಂದಿ ಕನ್ನಡದಲ್ಲಿ ವ್ಯವಹಾರ ಕಡ್ಡಾಯ ನಿಯಮ ಹೊರತಾಗಿಯೂ ಸಮಸ್ಯೆ ಈಗಲೂ ಜೀವಂತವಿದೆ.

**ಬೆಂಗಳೂರಿನಲ್ಲಿ ಬ್ಯಾಂಕ್ ಸಿಬ್ಬಂದಿ ದರ್ಪ:** ಇತ್ತೀಚೆಗೆ ಬೆಂಗಳೂರಿನ ಎಸ್‌ಬಿಐ ಬ್ಯಾಂಕ್ ಶಾಖೆಯಲ್ಲೂ ಮ್ಯಾನೇಜರ್ ಗ್ರಾಹಕರೊಂದಿಗೆ ಕನ್ನಡದಲ್ಲಿ ಮಾತನಾಡಲು ನಿರಾಕರಿಸಿದ್ದ ಪ್ರಸಂಗ ನಡೆದಿತ್ತು.



'ನಾನು ಕನ್ನಡ ಮಾತನಾಡುವುದಿಲ್ಲ' ಎಂದು ಹೇಳುವ ಮೂಲಕ ದರ್ಪ ಮೆರೆದಿದ್ದರು. ಈ ವಿಡಿಯೋ ವೈರಲ್ ಆಗಿತ್ತು. ಕನ್ನಡ ಹೋರಾಟಗಾರರು ಸಿಬ್ಬಂದಿ ವರ್ತನೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಸಾಮಾಜಿಕ ಜಾಲತಾಣದಲ್ಲೂ ಆಕ್ರೋಶ ವ್ಯಕ್ತವಾಗಿತ್ತು. ಬಳಿಕ ಸಿಬ್ಬಂದಿ ತನ್ನ ವರ್ತನೆಗೆ ಕ್ಷಮೆ ಕೋರಿದ್ದರು.

**ಬ್ಯಾಂಕ್ ಸಂಖ್ಯೆ ಎಷ್ಟು: ● ರಾಷ್ಟ್ರೀಕೃತ ಬ್ಯಾಂಕ್ - 12 , ಶಾಖೆಗಳು - 5,693 ● ಖಾಸಗಿ ಬ್ಯಾಂಕ್ - 34, ಶಾಖೆಗಳು - 3,967 ● ಒಟ್ಟು - 46 - ಶಾಖೆಗಳು - 9,660**

**ಕನ್ನಡಿಗರು ಹಾಗೂ ಹೊರ ರಾಜ್ಯದವರ ಸಂಖ್ಯೆ**

**● ಕನ್ನಡಿಗರು - 53,291 ● ಹೊರ ರಾಜ್ಯದವರು - 47,419**

**ಸಮಯ ಮಿತಿ**

**ಬ್ಯಾಂಕ್‌ಗಳಲ್ಲಿ ಕೆಲಸ ನಿರ್ವಹಿಸುವ ಹೊರ ರಾಜ್ಯದ ನೌಕರರು ರಾಜ್ಯದ ಆಡಳಿತ ಭಾಷೆಯನ್ನು ಎಷ್ಟು ಅವಧಿಯಲ್ಲಿ ಕಲಿಯಬೇಕು ಎಂಬ ಬಗ್ಗೆ ಆರ್‌ಬಿಐ ಯಾವುದೇ ನಿಯಮ ರೂಪಿಸಿಲ್ಲ. ಹೀಗಿದ್ದರೂ ಕನ್ನಡ ಕಲಿಯಲು ನೌಕರರ ಪಾತ್ರದ ಆಧಾರದಲ್ಲಿ 2-3 ತಿಂಗಳು ಹಾಗೂ 6 ರಿಂದ 1 ವರ್ಷ ಎಂದು ಕೆಲವು ಬ್ಯಾಂಕ್‌ಗಳು ಸಮಯ ನಿಗದಿಪಡಿಸಿವೆ.**

**ಯಾವ ಬ್ಯಾಂಕ್‌ನಲ್ಲಿ ಎಷ್ಟು ಕನ್ನಡ, ಕನ್ನಡೇತರ ಸಿಬ್ಬಂದಿ**

**● ಆಕ್ಸಿಸ್ ಬ್ಯಾಂಕ್ ● ಕನ್ನಡಿಗರು - 2,217 ● ಹೊರ ರಾಜ್ಯದವರು - 1,477**

**ಬ್ಯಾಂಕ್ ಆಫ್ ಇಂಡಿಯಾ**

**● ಕನ್ನಡಿಗರು - 524 ● ಹೊರ ರಾಜ್ಯದವರು - 840**

**ಬ್ಯಾಂಕ್ ಆಫ್ ಮಹಾರಾಷ್ಟ್ರ**

**● ಕನ್ನಡಿಗರು - 155 ● ಹೊರ ರಾಜ್ಯದವರು - 301**

**ಕೆನರಾ ಬ್ಯಾಂಕ್**

**● ಕನ್ನಡಿಗರು- 6,433 ● ಹೊರ ರಾಜ್ಯದವರು - 4,298**

**ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ**

**● ಕನ್ನಡಿಗರು - 311 ● ಹೊರ ರಾಜ್ಯದವರು - 440**

**ಸಿಟಿ ಯೂನಿಯನ್ ಬ್ಯಾಂಕ್**

**● ಕನ್ನಡಿಗರು - 145 ● ಹೊರ ರಾಜ್ಯದವರು - 194**

**ಫೆಡರಲ್ ಬ್ಯಾಂಕ್**

**● ಕನ್ನಡಿಗರು - 612 ● ಹೊರ ರಾಜ್ಯದವರು - 373**

**ಐಸಿಐಸಿಐ ಬ್ಯಾಂಕ್**

**● ಕನ್ನಡಿಗರು - 4,118 ● ಹೊರ ರಾಜ್ಯದವರು - 3,146**

**ಇಂಡಿಯನ್ ಓಯಸೀಸ್ ಬ್ಯಾಂಕ್**

**● ಕನ್ನಡಿಗರು - 403 ● ಹೊರ ರಾಜ್ಯದವರು - 658**

ರಾಜ್ಯದಲ್ಲಿ ಇರಬೇಕೆಂದರೆ ಅನ್ಯಭಾಷಿಕರು ಕನ್ನಡವನ್ನು ಕಲಿಯಲೇಬೇಕು ಎಂದು ವಾಟಾಳ್ ನಾಗರಾಜ್ ಘಂಟಾಘೋಷವಾಗಿ ತಿಳಿಸಿದ್ದಾರೆ.

**ಕನ್ನಡ ಕಲಿಯಲು ಕ್ರಮ ಏನು**

ಬ್ಯಾಂಕ್‌ನಲ್ಲಿ ಗ್ರಾಹಕರೊಂದಿಗೆ ವ್ಯವಹರಿಸುವ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಕನ್ನಡ ಕಲಿಸಲು ಸರ್ಕಾರ ಆದೇಶ ನೀಡಿದೆ. ಎಲ್ಲಾ ಬ್ಯಾಂಕ್‌ಗಳಲ್ಲಿ ಕಡ್ಡಾಯವಾಗಿ ತ್ರಿಭಾಷಾ ಸೂತ್ರ ( ಕನ್ನಡ, ಹಿಂದಿ ಹಾಗೂ ಇಂಗ್ಲಿಷ್) ಸ್ವರೂಪದಲ್ಲಿ ಸೇವೆ ಒದಗಿಸಲು ಸೂಚಿಸಲಾಗಿದೆ.

ಕಡ್ಡಾಯ ಮತ್ತು ನಿಯಮಿತ ಕನ್ನಡ ಕಲಿಕಾ ತರಗತಿಗಳನ್ನು ಕೆಲವು ಬ್ಯಾಂಕ್‌ಗಳು ನಡೆಸುತ್ತವೆ. ಹಲವು ಬ್ಯಾಂಕ್‌ಗಳು ಆನ್ ಲೈನ್ ಕಲಿಕಾ ತರಬೇತಿ ಕಾರ್ಯಕ್ರಮ ನಡೆಸುತ್ತವೆ.

## ಸರ್ಕಾರಿ ಗೌರವದೊಂದಿಗೆ ಶಾಮನೂರು ಅಂತ್ಯಕ್ರಿಯೆ

• **ಉದಯವಾಹಿನಿ, ದಾವಣಗೆರೆ**

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ನಗರದ ಅನೆಕೊಂಡದ ಕಲ್ಲೇಶ್ವರ ರೈಸ್ ಮಿಲ್ ಆವರಣದಲ್ಲಿ ನೆರವೇರಿತು. ಸಿರಿಗೆರೆ ಮಠದ ಶಿವಮೂರ್ತಿ ಶಿವಚಾರ್ಯ ಸ್ವಾಮೀಜಿ, ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ, ಉಜ್ಜಯಿನಿ ಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮೀಜಿ, ಪಂಚಮಸಾಲಿ ಗುರುಪೀಠದ ವಚನಾಂದ ಸ್ವಾಮೀಜಿ ಸೇರಿದಂತೆ ಅನೇಕ ಮಠಧೀಶರು ಭಾಗಿಯಾಗಿದ್ದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಸಹಕಾರ ಸಚಿವ ಶಿವಾನಂದ ಪಾಟೀಲ, ಸಾಂಖ್ಯಿಕ ಸಚಿವ ಡಿ. ಸುಧಾಕರ್, ವಸತಿ ಸಚಿವ ಜಮೀರ್ ಅಹಮ್ಮದ್, ಅರಣ್ಯ ಸಚಿವ ಈಶ್ವರ್ ಖಂಡ್ರೆ, ವಿಧಾನಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಸೇರಿದಂತೆ ಅನೇಕರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

## ಬೆಳಗಾವಿ ಅಧಿವೇಶನವನ್ನು ಒಂದು ವಾರ ವಿಸ್ತರಿಸಿ: ಆರ್.ಅಶೋಕ ಪತ್ರ

• **ಉದಯವಾಹಿನಿ, ಬೆಂಗಳೂರು**

ಸುವರ್ಣಸೌಧದಲ್ಲಿ ನಡೆಯುತ್ತಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನವನ್ನು ಒಂದು ವಾರಗಳ ಕಾಲ ವಿಸ್ತರಿಸಬೇಕೆಂದು ಕೋರಿ ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮನವಿ ಮಾಡಿದ್ದಾರೆ. ಈ ಕುರಿತು ಪತ್ರ ಬರೆದಿರುವ ಅವರು, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಸದಸ್ಯರು ಪ್ರಸ್ತಾಪ ಮಾಡಿರುವ ಹಲವು ಗಂಭೀರ ವಿಷಯಗಳಿಗೆ ಮುಖ್ಯಮಂತ್ರಿ ಮತ್ತು ಸಚಿವರು ಇನ್ನೂ ಉತ್ತರ ನೀಡಬೇಕಿದೆ. ಇದರ ಜೊತೆಗೆ ರಾಜ್ಯದಲ್ಲಿ ಕುಸಿದಿರುವ ಕಾನೂನು ಸುವ್ಯವಸ್ಥೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುದಾನ ಬಳಕೆಯ ಕಳಪೆ ಸಾಧನೆ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಚರ್ಚಿಸಲು ಮಾನ್ಯ ಸದಸ್ಯರುಗಳಿಗೆ ಇನ್ನೂ ಸಾಕಷ್ಟು ಸಮಯಾವಕಾಶದ ಅಗತ್ಯವಿದೆ. ಈ ನಿಟ್ಟಿನಲ್ಲಿ ನನ್ನ ಮನವಿಯನ್ನು ಪರಿಗಣಿಸಿ, ಸಭಾಧ್ಯಕ್ಷರು ವಿಧಾನಮಂಡಲದ ಅಧಿವೇಶನವನ್ನು ಒಂದು ವಾರಗಳ ವಿಸ್ತರಣೆ ಮಾಡುತ್ತಾರೆ ಎನ್ನುವ ವಿಶ್ವಾಸವಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಬೆಳೆ ವಿಮೆ ಬಿಜೆಪಿ ಪ್ರಾಯೋಜಿತ ಗೋಲ್ಮಾಲ್: ಈಶ್ವರ ಖಂಡ್ರೆ

• **ಉದಯವಾಹಿನಿ, ಬೀದರ್**

ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಗೆ ಸಂಬಂಧಿಸಿದಂತೆ ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ಮತ್ತು ಕೇಂದ್ರದ ಮಾಜಿಸಚಿವರೂ ಆದ ಬಿಜೆಪಿ ಮುಖಂಡ ಭಗವಂತ ಖೂಬಾ ನಡುವೆ ಆರೋಪ-ಪ್ರತ್ಯಾರೋಪ, ಪರಸ್ಪರ ಟೀಕೆ ಟಿಪ್ಪಣಿ ಹೆಚ್ಚಿದೆ. ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಯಡಿ ರೈತರು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಪಾವತಿಸಿರುವ ಕಂತಿನ ಹಣ ಎಷ್ಟು ಈವರೆಗೆ ರೈತರಿಗೆ ನೀಡಿರುವ ಪರಿಹಾರ ಎಷ್ಟು ಎಂಬುದರ ಬಗ್ಗೆ ಕೇಂದ್ರ ಸರ್ಕಾರ ಶ್ವೇತಪತ್ರ ಹೊರಡಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಆಗ್ರಹಿಸಿದ್ದಾರೆ.

ಸದನದಲ್ಲಿ ಬೆಳೆ ವಿಮೆ ಯೋಜನೆ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದಾಗಿ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಯೋಜನೆ ಬಗ್ಗೆ ಶ್ವೇತಪತ್ರ ಹೊರಡಿಸಿದರೆ ಖಾಸಗಿ ವಿಮಾ ಕಂಪನಿಗಳಿಗೆ ಕೇಂದ್ರ ಸರ್ಕಾರ ಹೇಗೆ ಲಾಭ ಮಾಡಿಕೊಡುತ್ತಿದೆ ಎಂಬುದು ಬಟಾ ಬಯಲಾಗಲಿದೆ ಎಂದಿದ್ದಾರೆ. ದೇಶದಾದ್ಯಂತ ಬೆಳೆ ವಿಮೆ ಯೋಜನೆ ಜಾರಿಯಾದ ದಿನದಿಂದ ಈವರೆಗೆ ವಿಮಾ ಕಂಪನಿಗಳು ಉದ್ಧಾರ ಆಗಿದೆಯೇ ಹೊರತು ರೈತರಲ್ಲ. ಇದೊಂದು ಬಿಜೆಪಿ ಪ್ರಾಯೋಜಿತ ಪಕ್ಕಾ ಗೋಲ್ಮಾಲ್ ಯೋಜನೆ ಎಂದು ಆರೋಪಿಸಿದ್ದಾರೆ.

# ಒಂದು ಮೊಟ್ಟೆಯ ಕಥೆ

**ಮೊಟ್ಟೆಗಳಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆ ಆರೋಪ**

**ಈ ಹಿಂದೆ ನಡೆಸಿದ ಪರೀಕ್ಷೆಗಳಲ್ಲಿ ಮೊಟ್ಟೆ ಹಾನಿಕಾರಕ ಅಂಶಗಳು ಕಂಡುಬಂದಿಲ್ಲ. ಆದರೆ, ಈ ಹೊಸ ಆರೋಪಗಳ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮೊಟ್ಟೆಗಳ ಮಾದರಿಗಳನ್ನು ಸಂಗ್ರಹಿಸಿ, ಲ್ಯಾಬ್‌ಗಳಲ್ಲಿ ಕೂಲಂಕುಷ ಪರೀಕ್ಷೆ ನಡೆಸುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಒಂದು ವೇಳೆ ಪರೀಕ್ಷೆಯಲ್ಲಿ ಕ್ಯಾನ್ಸರ್ ಕಾರಕ ಅಂಶಗಳು ಪತ್ತೆಯಾದರೆ, ಮೊಟ್ಟೆ ಉತ್ಪಾದಕರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು**

**-ದಿನೇಶ್ ಗುಂಡೂರಾವ್**
**ರಾಜ್ಯ ಆರೋಗ್ಯ ಸಚಿವ**



**ಮೊಟ್ಟೆಯಲ್ಲಿ ಕ್ಯಾನ್ಸರ್ ಅಂಶದ ವದಂತಿ**

**200ಕ್ಕೂ ಹೆಚ್ಚು ಸ್ಯಾಂಪಲ್ ಪರೀಕ್ಷೆಗೆ ರವಾನೆ**

### ಅಗತ್ಯ ಕಂಡರೆ ಮೊಟ್ಟೆ ಪರೀಕ್ಷೆ

• **ಉದಯವಾಹಿನಿ, ಬೆಂಗಳೂರು**

ಪ್ರೋಟೀನ್ ಮೂಲವಾಗಿರುವ ಮೊಟ್ಟೆ ಅನೇಕರಿಗೆ ಬಹುಪ್ರಿಯವಾಗಿದೆ. ಕೇವಲ ನಾನ್ ವೆಜಿಟೇರಿಯನ್ಸ್ ಮಾತ್ರವಲ್ಲದೇ ಕೆಲ ವೆಜಿಟೇರಿಯನ್ಸ್ ಕೂಡ ಮೊಟ್ಟೆಯನ್ನು ಸೇವನೆ ಮಾಡುವುದುಂಟು. ಆದರೆ ಇದೀಗ ಮೊಟ್ಟೆ ಪ್ರಿಯರಿಗೆ ಶಾಕಿಂಗ್ ನ್ಯೂಸ್ ಎದುರಾಗಿದೆ. ಮೊಟ್ಟೆಯಲ್ಲಿ ಕ್ಯಾನ್ಸರ್ ಅಂಶ ಪತ್ತೆಯಾಗಿರುವ ಬಗ್ಗೆ ಸುದ್ದಿ ಬೆಳಕಿಗೆ ಬಂದಿದೆ.

ಜನಪ್ರಿಯ ಎಬ್ರಾಂಡ್‌ನ ಮೊಟ್ಟೆಗಳಲ್ಲಿ ಕ್ಯಾನ್ಸರ್‌ಕಾರಕ ಅಂಶ ಪತ್ತೆಯಾಗಿದೆ. ಮೊಟ್ಟೆಗಳಲ್ಲಿ ನೈಟ್ರೋಫ್ಯೂರಾನ್ ಎಂಬ ಔಷಧದ ಕಣಗಳು ಕಂಡುಬಂದಿದ್ದು, ಇದು ಡಿಎನ್‌ಎಯಿಂದ ಸಂತಾನೋತ್ಪತ್ತಿ ಅಂಗಗಳು ಮತ್ತು ರೋಗನಿರೋಧಕ ವ್ಯವಸ್ಥೆಗೆ ಎಲ್ಲದಕ್ಕೂ ಹಾನಿ ಮಾಡುತ್ತದೆ. ಅಲ್ಲದೇ ಇದು ಕ್ಯಾನ್ಸರ್‌ನಂತಹ ಅಪಾಯಕಾರಿ ಕಾಯಿಲೆಗಳಿಗೂ ಕಾರಣವಾಗಬಹುದು ಎನ್ನುವ ಸುದ್ದಿ ಹರಿದಾಡುತ್ತಿದ್ದು, ಇದು ಮೊಟ್ಟೆ ಪ್ರಿಯರಿಗೆ ಆಘಾತವನ್ನುಂಟು ಮಾಡಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಜೋರಾಗಿ ನಡೆಯುತ್ತಿದೆ.

ಆರು ತಿಂಗಳ ಹಿಂದೆ ಆಹಾರ ಸುರಕ್ಷತಾ ಇಲಾಖೆ ನಡೆಸಿದ ಪರೀಕ್ಷೆಗಳಲ್ಲಿ ಮೊಟ್ಟೆಗಳಲ್ಲಿ ಯಾವುದೇ ಹಾನಿಕಾರಕ ವಸ್ತುಗಳು ಕಂಡುಬಂದಿಲ್ಲ. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಆಯುಕ್ತ ಶ್ರೀನಿವಾಸ್ ಅವರು ಆ ಸಮಯದಲ್ಲಿ ಪ್ರಯೋಗಾಲಯ ವರದಿಗಳು ಮೊಟ್ಟೆಗಳು ಸೇವನೆಗೆ ಸುರಕ್ಷಿತವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದಿನ ವರದಿಗಳ ಆಧಾರದ ಮೇಲೆ ಆಹಾರ ಸುರಕ್ಷತಾ ಇಲಾಖೆಯು ಮೊಟ್ಟೆಗಳು ಸುರಕ್ಷಿತವೆಂದು ಹೇಳಿದೆ. ಇದೀಗ ಆರೋಪ ಕೇಳಿ ಬಂದ ಹಿನ್ನೆಲೆ ಹೊಸ ಪರೀಕ್ಷೆಗಳಿಗೆ ಆದೇಶಿಸಲಾಗಿದೆ ಎಂದು ಹೇಳಿದ್ದಾರೆ.

ಮೊಟ್ಟೆ ಸ್ಯಾಂಪಲ್ ಪಡೆಯಲಾಗಿದೆ; ಏಕೆಂದರೆ ಮೊಟ್ಟೆ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಅದಕ್ಕಾಗಿ ಗೊಂದಲ ಇದ್ದರೆ, ನಾವು ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ಇಲಾಖೆಗೆ ಹೇಳಿದ್ದೇನೆ. ಈಗಾಗಲೇ ಕಂಪನಿಯ ಮೊಟ್ಟೆ ಸ್ಯಾಂಪಲ್ ಪಡೆಯಲಾಗಿದೆ. ಟೆಸ್ಟ್ ಮಾಡಿದ ನಂತರ ಈ ವಿಚಾರವನ್ನು ತಮ್ಮ ಮುಂದೆ ಇಡುವೆ. ಸದ್ಯಕ್ಕೆ ಇದರ ಬಗ್ಗೆ ಆತಂಕ ಪಡುವುದು ಬೇಡ ಎಂದು ತಿಳಿಸಿದರು.ಕಳೆದ ಸೆಪ್ಟೆಂಬರ್ - ಅಕ್ಟೋಬರ್ ತಿಂಗಳಿನಲ್ಲಿ 125 ಮೊಟ್ಟೆಯ ಸ್ಯಾಂಪಲ್ ಟೆಸ್ಟ್ ಮಾಡಿದ್ದೇವೆ. ಅದರಲ್ಲಿ 123 ಮೊಟ್ಟೆಯ ಸ್ಯಾಂಪಲ್ ಗುಣಮಟ್ಟ ಸರಿಯಿದೆ. ಒಂದು, ಎರಡು ಮೊಟ್ಟೆಯ ಸ್ಯಾಂಪಲ್ ಮಾತ್ರ ಸರಿಯಿಲ್ಲ ಎಂದು ಬಂದಿತ್ತು. ಇದರಿಂದ ಯಾವುದೋ ಸುದ್ದಿ ಕೇಳಿ ಆತಂಕ, ಭಯಕ್ಕೆ ಒಳಗಾಗುವುದು ಬೇಡ ಎಂದು ಸಚಿವರು ಮನವಿ ಮಾಡಿದರು. ಮೊಟ್ಟೆ ತೆಗೆದುಕೊಳ್ಳುವುದು ಬೇಡ ಅಂತ ಹೇಳಬಾರದು. ಸದ್ಯ ಸಮಾಧಾನವಾಗಿ ಇರೋಣ, ವರದಿಯು ಬರಲಿ. ಆರೋಪಿತ ಕಂಪನಿಯದ್ದು ಏನಾದರೂ ಇದೆಯಾ, ಇಲ್ವಾ ಅಂತ ತಿಳಿಯೋಣ. ರಿಪೋರ್ಟ್ ಬರಬೇಕು ಎಂದು ಗುಂಡೂರಾವ್ ಸ್ಪಷ್ಟಪಡಿಸಿದರು.

**ಯಾರೂ ಭಯಪಡುವ ಅಗತ್ಯವಿಲ್ಲ**

**1** ಮೊಟ್ಟೆಯಲ್ಲಿ ಕ್ಯಾನ್ಸರ್ ಅಂಶ ಪತ್ತೆಯಾಗಿರುವ ಬಗ್ಗೆ ಸುದ್ದಿ ಬೆಳಕಿಗೆ

**2** ಎಲ್ಲಾ ಬ್ರ್ಯಾಂಡ್ ಮೊಟ್ಟೆ ಟೆಸ್ಟ್‌ಗೆ ಸೂಚನೆ

**3** ಎಚ್ಚೆತ್ತ ಆರೋಗ್ಯ ಇಲಾಖೆ, ಮೊಟ್ಟೆ ಟೆಸ್ಟ್‌ಗೆ ಸೂಚನೆ!

**ಮೊಟ್ಟೆ ಬಗ್ಗೆ ಆಹಾರ ತಜ್ಞರು ಹೇಳಿದ್ದೇನು**

**ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆ ಚರ್ಚೆ ವಿಚಾರ ಜನರ ಆತಂಕಕ್ಕೆ ಕಾರಣವಾಗಿದೆ. ಈ ಬಗ್ಗೆ ಆಹಾರ ತಜ್ಞೆ ಡಾ. ಕೀರ್ತಿ ಕಿರಿಸಾವೆ ಮಾತನಾಡಿದ್ದು, ಎಲ್ಲಾ ಮೊಟ್ಟೆಯೂ ಹಾನಿಕಾರಕ ಅಲ್ಲ, ಮೊಟ್ಟೆಯಲ್ಲಿ ಆ್ಯಂಟಿಬಯೋಟಿಕ್ ಕಂಡು ಬಂದಿದೆ ಅಂತ ಸುದ್ದಿ ಆಗ್ತಾ ಇದೆ, ಕೋಳಿಗೆ ಯಾವುದಾದ್ರೂ ಕಾಯಿಲೆ ಬಂದಿದ್ರೆ, ಆ್ಯಂಟಿಬಯೋಟಿಕ್ ನೀಡ್ತಾರೆ, ಇದರಿಂದ ಮೊಟ್ಟೆಯಲ್ಲಿ ಸೇರೋ ಸಾಧ್ಯತೆ ಇದೆ. ಸದ್ಯ ಒಂದು ಕಂಪನಿಯ ಮೊಟ್ಟೆಯಲ್ಲಿ AoZ ಅಂಶ ಕಂಡು ಬಂದಿದೆ. ಶೇ.1 ರಷ್ಟು ಅಂಚು ಬಳಸೋಕೆ FSSAI ಮಾನ್ಯತೆ ಇದೆ. ಅಂದ್ರೆ, 0.7 ಮೈಕ್ರೋಗ್ರಾಂ ಒಂದು ಕೆಜಿ ಮೊಟ್ಟೆಯಲ್ಲಿ ಕಂಡು ಬಂದ್ರೆ, ತೊಂದರೆ ಇಲ್ಲ ಅಂತ ಇದೆ. ಎಲ್ಲೆಡೆ ನೈಟ್ರೋಫ್ಯೂರನ್ ಬ್ಯಾನ್ ಆಗಿದೆ. ಭಾರತದಲ್ಲೂ ಈ ಅಂಶ ಬ್ಯಾನ್ ಮಾಡಲಾಗಿದೆ.**

**AoZ ಹೈಡೋಸ್‌ನಲ್ಲಿ ಮನುಷ್ಯನ ದೇಹ ಸೇರಿದ್ರೆ, ತೊಂದರೆ ಆಗುತ್ತೆ. ಪ್ರಾಣಿಗಳ ಮೇಲಿನ ಅಧ್ಯಯನ ಪ್ರಕಾರ ಪ್ರಾಣಿಗಳ ಮೇಲಿನ ಕೆಲ ಅಂಶ ಪರಿಣಾಮ ಬೀರಬಹುದು. ಆದರೆ ಈ ಅಂಶ ಮನುಷ್ಯನ ದೇಹದ ಮೇಲೆ ಯಾವುದೇ ಅಧ್ಯಯನ ಆಗಿಲ್ಲ ಎಂದು ಆಹಾರ ತಜ್ಞೆ ಡಾ. ಕೀರ್ತಿ ಕಿರಿಸಾವೆ ಹೇಳಿದ್ರು.**

**ಖಾಲಿ ಇರುವ ವೈದ್ಯ, ಸಿಬ್ಬಂದಿ ಹುದ್ದೆ ತಿಂಗಳಲ್ಲಿ ಭರ್ತಿ**

**ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರು, ಕರ್ತವ್ಯ ವೈದ್ಯಾಧಿಕಾರಿಗಳು, ನರ್ಸ್‌ಗಳು ಹಾಗೂ ಫಾರ್ಮಾಸಿಸ್ಟ್ ಹುದ್ದೆಗಳನ್ನು ಒಂದು ತಿಂಗಳೊಳಗೆ ಭರ್ತಿ ಮಾಡಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಈಗಾಗಲೇ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಕೈಗೊಳ್ಳುವ ಕಾರ್ಯಕ್ರಮದಡಿ 1,500 ವೈದ್ಯರನ್ನು ನೇಮಿಸಲಾಗಿದೆ. ಖಾಲಿ ಇರುವ 337 ತಜ್ಞ ವೈದ್ಯರು, 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲಾಗುತ್ತಿದೆ ಎಂದು ತಿಳಿಸಿದರು.**

**ಹಿಂದಿನ ಪರೀಕ್ಷಾ ವರದಿಗಳು**

**ಮೊಟ್ಟೆಗಳ ಗುಣಮಟ್ಟ ಪರೀಕ್ಷೆಯ ಹಿಂದಿನ ಪ್ರಯತ್ನಗಳ ಕುರಿತು ಸಚಿವರು ಮಾಹಿತಿ ನೀಡಿದರು. 'ಈ ಹಿಂದೆ ನಾವು 124 ಮೊಟ್ಟೆ ಸ್ಯಾಂಪಲ್‌ಗಳನ್ನು ತೆಗೆದುಕೊಂಡು ಟೆಸ್ಟ್ ಮಾಡಿದ್ದೆವು. ಆ 124ರಲ್ಲಿ 123 ಮೊಟ್ಟೆಗಳ ಗುಣಮಟ್ಟ ಚೆನ್ನಾಗಿತ್ತು. ಒಂದು ಮೊಟ್ಟೆಯ ಗುಣಮಟ್ಟ ಮಾತ್ರ ಚೆನ್ನಾಗಿರಲಿಲ್ಲ. ಆದರೆ, ಈಗಿನ ವಿಡಿಯೋ ವೈರಲ್ ಹಿನ್ನೆಲೆಯಲ್ಲಿ ಮತ್ತೊಮ್ಮೆ ಎಚ್ಚೆತ್ತುಕೊಂಡಿದ್ದೇವೆ. ವಿಶೇಷವಾಗಿ ವೈರಲ್ ವಿಡಿಯೋದಲ್ಲಿ ಉಲ್ಲೇಖಿಸಲಾದ 'ಎಗ್ಗೋಜ್' ಕಂಪನಿಯ ಮೊಟ್ಟೆಗಳ ಮಾದರಿಗಳನ್ನು ಸಹ ಪಡೆದು ಟೆಸ್ಟಿಂಗ್‌ಗೆ ಕಳುಹಿಸಲಾಗಿದೆ' ಎಂದು ತಿಳಿಸಿದರು. ಸದ್ಯ ಸ್ಯಾಂಪಲ್‌ಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದರು.**

# ಜಕ್ಕೂರು ವಿಮಾನ ತರಬೇತಿ ಶಾಲೆ ಮೈಸೂರಿಗೆ ಸ್ಥಳಾಂತರಕ್ಕೆ ಸರ್ಕಾರ ಯೋಜನೆ!

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ 1949 ರಲ್ಲಿ ಜವಾಹರಲಾಲ್ ನೆಹರು ಉದ್ಘಾಟಿಸಿದ್ದ ಜಕ್ಕೂರು ವಿಮಾನ ಹಾರಾಟ ತರಬೇತಿ ಶಾಲೆಯನ್ನು ಸ್ಥಳಾಂತರಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ. ಇದು ರಾಜಕೀಯವಾಗಿ ಮಹತ್ವದ ತಿರುವು ಪಡೆದುಕೊಂಡಿದೆ.

ಸ್ಥಳಾಂತರವಾದರೆ ಜಕ್ಕೂರು ಏರೋಡ್ರೋಮ್‌ನಲ್ಲಿ ವಿಮಾನ ಹಾರಾಟ ಕಾರ್ಯಾಚರಣೆಗಳು ಸ್ಥಗಿತಗೊಳ್ಳುವ ಸಾಧ್ಯತೆಯಿದೆ. ಇದರಿಂದ ಉತ್ತರ ಬೆಂಗಳೂರಿನ ರಿಯಲ್ ಎಸ್ಟೇಟ್ ಬೆಳವಣಿಗೆಗೆ ಅನುಕೂಲವಾಗಲಿದೆ. ಈ ಹಿತಾಸಕ್ತಿಯಿಂದ ಸ್ಥಳಾಂತರಕ್ಕೆ ಸರ್ಕಾರ ಮುಂದಾಗಿದೆ ಎಂದು ಹೇಳಲಾಗುತ್ತಿದೆ.

**ರಿಯಲ್ ಎಸ್ಟೇಟ್‌ಗೆ ಹೇಗೆ ಅನುಕೂಲ:** ಶಾಲೆಯನ್ನು ಸ್ಥಳಾಂತರಿಸುವ ಮೂಲಕ, ಸರ್ಕಾರ ಕಟ್ಟಡಗಳ ಎತ್ತರ ನಿರ್ಬಂಧಗಳನ್ನು ಸಡಿಲಗೊಳಿಸಲು





ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಮುಕ್ತ ಜಾಗವನ್ನು ಒದಗಿಸಲು ಸರ್ಕಾರ ಯೋಜಿಸಿದೆ. ಈ ಬಗ್ಗೆ ನವೆಂಬರ್ 2025 ರಲ್ಲಿ, ರಾಜ್ಯ ಸರ್ಕಾರವು ನಾಗರಿಕ ವಿಮಾನಯಾನ ಮಹಾನಿರ್ದೇಶಕರಿಗೆ ಪತ್ರ ಬರೆದು, ಸರ್ಕಾರಿ ಹಾರಾಟ ತರಬೇತಿ ಶಾಲೆಯನ್ನು ಜಕ್ಕೂರಿನಿಂದ ಸಿಎಂ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾದ ಮೈಸೂರು ಏರೋಡ್ರೋಮ್‌ಗೆ ಸ್ಥಳಾಂತರಿಸುವ ಸಾಧ್ಯತೆ ಪರಿಶೀಲಿಸುತ್ತಿರುವುದಾಗಿ ತಿಳಿಸಿದೆ ಎಂದು ಡೆಕ್ಕನ್ ಹೆರಾಲ್ಡ್ ವರದಿ ಮಾಡಿದೆ.

**ಕಟ್ಟಡಗಳ ಎತ್ತರ 45 ಮೀಟರ್ ನಿರ್ಬಂಧ**

**ರಿಯಲ್ ಎಸ್ಟೇಟ್ ಡೆವಲಪರ್‌ಗಳು ಬಹಳ ಹಿಂದಿನಿಂದಲೂ ವಿಮಾನಯಾನ ಸುರಕ್ಷತಾ ನಿಯಮಗಳು ಎತ್ತರದ ಕಟ್ಟಡಗಳ ನಿರ್ಮಾಣವನ್ನು ತೀವ್ರವಾಗಿ ನಿರ್ಬಂಧಿಸಿವೆ ಎಂದು ದೂರು ನೀಡುತ್ತಿದ್ದಾರೆ. ಏರೋಡ್ರೋಮ್‌ನ 2.7 ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಯೋಜನೆಗಳಿಗೆ ಹಾರಾಟ ಶಾಲೆಯಿಂದ 'ನೋ ಆಬ್ಜೆಕ್ಷನ್ ಸರ್ಟಿಫಿಕೇಟ್' (ಎನ್‌ಒಸಿ) ಅಗತ್ಯವಿದೆ. ಹಾರಾಟ ಮಾರ್ಗದ ಸಮೀಪದಲ್ಲಿ ಕಟ್ಟಡಗಳ ಎತ್ತರವನ್ನು ಸುಮಾರು 45 ಮೀಟರ್‌ಗಳಿಗೆ ನಿರ್ಬಂಧಿಸಲಾಗಿದೆ.**

ಈ ಪ್ರಸ್ತಾವವನ್ನು ವಿವರವಾಗಿ ಪರಿಶೀಲಿಸಲು ಸರ್ಕಾರವು ತಜ್ಞರ ಸಮಿತಿಯೊಂದನ್ನು ಸಹ ರಚಿಸಿದೆ. ಈ ಸಮಿತಿಯು ಈ ತಿಂಗಳ ಆರಂಭದಲ್ಲಿ ಸಭೆ ನಡೆಸಿದೆ ಎಂದು ವರದಿಯಾಗಿದೆ. ವಿಶೇಷವೆಂದರೆ, ಸೆಪ್ಟೆಂಬರ್‌ನಲ್ಲಿ ಹಾರಾಟ ಶಾಲೆಗೆ ಭೇಟಿ ನೀಡಿದ್ದ ಸಿದ್ದರಾಮಯ್ಯ, ಜಕ್ಕೂರಿನಲ್ಲಿರುವ 200 ಎಕರೆಗೂ ಹೆಚ್ಚು ಜಾಗವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸುಮಾರು ಮೂರು ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡು ರನ್‌ವೇಯನ್ನು ವಿಸ್ತರಿಸುವ ಕಲ್ಪನೆಯನ್ನು ಬೆಂಬಲಿಸಿದ್ದರು. ಏರೋಡ್ರೋಮ್‌ನಲ್ಲಿ ಹಾರಾಟ ತರಬೇತಿ ಕಾರ್ಯಾಚರಣೆಗಳು ಮುಂದುವರಿಯಬೇಕು ಎಂದು ನ್ಯಾಯಾಲಯ ನಿರ್ದೇಶಿಸಿದೆ ಎಂಬುದನ್ನು ಅವರು ಹೇಳಿದ್ದರು ಆದರೆ, ಎರಡು ತಿಂಗಳ ನಂತರ, ಸರ್ಕಾರ ತನ್ನ ನಿಲುವನ್ನು ಬದಲಾಯಿಸಿದೆ.

# ರಾಹುಲ್ ಗಾಂಧಿ - ಡಿಕೆಶಿ ದೆಹಲಿಯಲ್ಲಿ 2 ನಿಮಿಷದ ಭೇಟಿ

## ■ ಯಾವುದೇ ಖಚಿತ ಭರವಸೆ ಕೊಡದ ರಾಹುಲ್ ಗಾಂಧಿ, ಶೀಘ್ರದಲ್ಲೇ ಪರಿಹಾರ ಎಂದ ರಾಹುಲ್

• **ಉದಯವಾಹಿನಿ, ಬೆಂಗಳೂರು**

ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಆಯೋಜಿಸಿದ್ದ ವೋಟ್ ಚೋರಿ ಅಭಿಯಾನದಲ್ಲಿ ಕರ್ನಾಟಕ ರಾಜ್ಯದ ಬಹಳಷ್ಟು ನಾಯಕರು ಭಾಗವಹಿಸಿದ್ದರು. ಅಲ್ಲೂ ಕೂಡಾ, ಎರಡು ಬಣಗಳ ನಡುವೆ ಶಕ್ತಿ ಪ್ರದರ್ಶನ ನಡೆದಿದೆ. ಇಬ್ಬರು ನಾಯಕರಿಗೆ ಪ್ರತ್ಯೇಕವಾದ ಜೈಕಾರ ಬಿದ್ದಿದೆ.

'ಮುಂದಿನ ಮುಖ್ಯಮಂತ್ರಿ ಡಿಕೆ ಶಿವಕುಮಾರ್', 'ಸಿದ್ದರಾಮಯ್ಯ ಐದು ವರ್ಷ ಸಿಎಂ' ಎನ್ನುವ ಘೋಷಣೆ ದೆಹಲಿಯಲ್ಲಿ ಮೊಳಗಿದೆ. ಕಾಂಗ್ರೆಸ್ ಹೈಕಮಾಂಡ್ ಸೂಚನೆಯ ಮೇರೆಗೆ, ಇಬ್ಬರು ನಾಯಕರು ಬ್ರೇಕ್ ಫಾಸ್ಟ್ ಮೀಟಿಂಗ್ ನಡೆಸಿದ್ದರು. ಬೆಳಗಾವಿ ಅಧಿವೇಶನದ ವೇಳೆ, ಬಣ ರಾಜಕೀಯ ಮತ್ತೆ ತಿರುವನ್ನು ಪಡೆದುಕೊಂಡಿತ್ತು.

ದೆಹಲಿಯಲ್ಲಿ, ವೋಟ್ ಚೋರಿ ರ್‍ಯಾಲಿಯಲ್ಲಿ ಭಾಗವಹಿಸಲು ಬಂದಿದ್ದ ನಾಯಕರುಗಳಿಗೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಇಂದಿರಾ ಭವನದಲ್ಲಿ ಭೋಜನಕೂಟ ಆಯೋಜಿಸಿದ್ದರು. ವಿಮಾನ ವಿಳಂಬವಾದ ಹಿನ್ನಲೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಇದರಲ್ಲಿ ಭಾಗವಹಿಸಿರಲಿಲ್ಲ.

ಈ ಔತಣಕೂಟದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಭಾಗವಹಿಸಿದ್ದರು. ಇದರಲ್ಲಿ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ರಣದೀಪ್ ಸುರ್ಜೇವಾಲ ಸೇರಿದಂತೆ, ಹಲವು ಪ್ರಮುಖ



ಕಾಂಗ್ರೆಸ್ ನಾಯಕರು ಭೋಜನಕೂಟದಲ್ಲಿ ಇದ್ದರು. ಆವೇಳೆ, ರಾಹುಲ್ ಗಾಂಧಿ, ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ.

ಎರಡು ನಿಮಿಷದಷ್ಟು ಹೊತ್ತು ರಾಹುಲ್ ಗಾಂಧಿ, ಡಿಕೆ ಶಿವಕುಮಾರ್ ಅವರ ಜೊತೆ ಮಾತುಕತೆ ನಡೆಸಿದ್ದಾರೆ. ಉಭಯ ಕುಶಲೋಪರಿಯ ನಂತರ, ರಾಜ್ಯದ ಗೊಂದಲಗಳನ್ನು ಶೀಘ್ರದಲ್ಲೇ ಬಗೆಹರಿಸುವುದಾಗಿ, ರಾಹುಲ್, ಡಿಕೆಶಿಗೆ ಹೇಳಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಆದರೆ, ಯಾವ ಗೊಂದಲ ಎನ್ನುವುದನ್ನು ನಿರ್ದಿಷ್ಟವಾಗಿ ರಾಹುಲ್ ಉಲ್ಲೇಖಿಸಿಲ್ಲ ಎಂದು ವರದಿಯಾಗಿದೆ.

**ಅಡ್ಡಗೋಡೆ ಮೇಲೆ ದೀಪವಿಟ್ಟತೇ ಹೈಕಮಾಂಡ್**

ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದೀರಿ, ಏನು ಮಾತುಕತೆ ಆಯಿತು ಎನ್ನುವ ಮಾಧ್ಯಮಗಳ ಪ್ರಶ್ನೆಗೆ ಡಿಕೆ ಶಿವಕುಮಾರ್, ಅದನ್ನೆಲ್ಲಾ ನಿಮ್ಮ ಮುಂದೆ ಹೇಳಲು ಸಾಧ್ಯವೇ ಎಂದು ಮರು ಪ್ರಶ್ನಿಸಿದ್ದಾರೆ. ಬೆಳಗಾವಿಯ ಚಳಿಗಾಲದ ಅಧಿವೇಶನದ ನಂತರ, ಕುರ್ಚಿ ಕಿತ್ತಾಟಕ್ಕೆ ತೆರೆಯು ಬೀಳಬಹುದು ಎನ್ನುವುದು ಕಾಂಗ್ರೆಸ್ಸಿಗರ ನಿರೀಕ್ಷೆಯಾಗಿದೆ. ಭೋಜನಕೂಟದ ನಂತರ ಡಿಕೆ ಶಿವಕುಮಾರ್, ಎಐಸಿಸಿ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರನ್ನು ಭೇಟಿಯಾಗಿದ್ದಾರೆ. ಕಳೆದ ಎರಡು ಬಾರಿ ದೆಹಲಿಗೆ ಹೋಗಿದ್ದಾಗ, ರಾಹುಲ್ ಗಾಂಧಿಯವರನ್ನು ಭೇಟಿಯಾಗಲು ಡಿಕೆಶಿ ಪ್ರಯತ್ನಿಸಿದ್ದರು. ಆದರೆ, ಅದು ಸಾಧ್ಯವಾಗಿರಲಿಲ್ಲ. ರಾಹುಲ್ ಜೊತೆಗಿನ ಮಾತುಕತೆಯ ಮುನ್ನ, ಅಲ್ಲೇ ಇದ್ದ ಸೋನಿಯಾ ಗಾಂಧಿಯ ಜೊತೆಗೂ, ಡಿಕೆಶಿ ಮಾತುಕತೆ ನಡೆಸಿದ್ದಾರೆ.

ನಾನು ದೆಹಲಿಗೆ ಬಂದಾಗ ಎಲ್ಲರನ್ನೂ ಭೇಟಿ ಮಾಡಬೇಕು. ಸುರ್ಜೇವಾಲ ಅವರನ್ನು, ಮಲ್ಲಿಕಾರ್ಜುನ ಖರ್ಗೆ ಸಾಹೇಬರನ್ನು, ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಬೇಕು. ನಿನ್ನೆ ಇಂದಿರಾ ಭವನದಲ್ಲಿ ನಡೆದ ಭೋಜನ ಕೂಟದಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರನ್ನೂ ಭೇಟಿ ಮಾಡಿದ್ದೆ'' ಎಂದು ಡಿಕೆ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

**ಹೈಕಮಾಂಡ್ ನಿರ್ಧಾರಕ್ಕಾಗಿ ಕಾಯಬೇಕು**

**ಎಲ್ಲವನ್ನೂ ಶ್ರೀಘ್ರದಲ್ಲೇ ಬಗೆಹರಿಸಲಾಗುವುದು ಎನ್ನುವ ಮೂಲಕ ರಾಹುಲ್ ಗಾಂಧಿ, ಕರ್ನಾಟಕದ ನಾಯಕರುಗಳಿಗೆ ಹೈಕಮಾಂಡ್ ನಿರ್ಧಾರಕ್ಕಾಗಿ ಕಾಯಬೇಕು ಎನ್ನುವ ಸಂದೇಶವನ್ನೂ ರವಾನಿಸಿದ್ದಾರೆ ಎಂದೂ ವ್ಯಾಖ್ಯಾನಿಸಲಾಗುತ್ತಿದೆ. ಎರಡು ನಿಮಿಷದ ಭೇಟಿಯ ವೇಳೆ, ಡಿಕೆಶಿ, ಯಾವ ವಿಚಾರವನ್ನು ಪ್ರಸ್ತಾಪ ಮಾಡದಿದ್ದರೂ, ಅವರಾಗಿಯೇ ಈ ಮಾತನ್ನು ಡಿಸಿಎಂಗೆ ಹೇಳಿರುವುದು ಕುತೂಹಲಕ್ಕೆ ಕಾರಣವಾಗಿದೆ.**

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹13,538/Gram24ct ₹12,410/Gram22ct | ಬೆಳ್ಳಿ: ₹203.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

## ಪಾಕ್ ವಿವಿಯಲ್ಲಿ ಸಂಸ್ಕೃತ

ಸಂಸ್ಕೃತ ವೇದ ಶಾಸ್ತ್ರ ಆಗಮ ಪುರಾಣ ರಾಮಾಯಣ ಮಹಾಭಾರತ ಭಗವದ್ಗೀತೆ ಎಂದರೆ ಭಾರತದಲ್ಲಿ ಹಿಂದುಗಳಲ್ಲಿ ಕಿಡಿಕಾರುವುದುಂಟು. ಜಾತಿಪದ್ಧತಿ – ಅಸ್ಪೃಶ್ಯತೆ ಮುಖ್ಯ ಕಾರಣ. ಈ ಒಂದು ಕಾರಣಕ್ಕೆ ಸಂಸ್ಕೃತದ ಅಪಾರ ಜ್ಞಾನರಾಶಿಯಿಂದಲೇ ದೂರ ಉಳಿಯುವುದು, ಬಳಿಯಿರುವ ಭಾಗ್ಯವನ್ನು ಆಚೆ ನಿಲ್ಲಿಸಿ ಬಾಗಿಲು ಹಾಕಿದಂತೆ. ಆದರೆ ಭಾರತದ ಹಿಂದುಗಳ ಶತ್ರು ಎಂದೇ ಪರಿಗಣಿತ ಪಾಕಿಸ್ತಾನದ ಲಾಹೋರ್ ವಿಶ್ವವಿದ್ಯಾಲಯದಲ್ಲಿ ಇದೀಗ ಸಂಸ್ಕೃತ ಭಾಷೆಯ ಕಲಿಕೆಯನ್ನು ಆರಂಭಿಸಲಾಗಿದೆ. ಮಹಾಭಾರತ ಭಗವದ್ಗೀತೆಯ ಭಾಗಗಳನ್ನು ಒಳಗೊಂಡ ಸಂಸ್ಕೃತ ಶ್ಲೋಕಗಳನ್ನು ಬೋಧಿಸಲಾಗುತ್ತಿದೆ.

ಕಲಿಕೆಗೆ ವಿದ್ಯಾರ್ಥಿಗಳು ಮತ್ತು ವಿದ್ವಾಂಸರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಆರಂಭದ ಹಿಂದಿರುವ ವ್ಯಕ್ತಿ ಫಾರ್ಮನ್ ಕ್ರಿಶ್ಚಿಯನ್ ಕಾಲೇಜಿನ ಸಮಾಜಶಾಸ್ತ್ರದ ಪ್ರಾಧ್ಯಾಪಕ ಶಾಹಿದ್ ರಶೀದ್. ಸಂಸ್ಕೃತ ವ್ಯಾಕರಣ ಅಷ್ಟಾಧ್ಯಾಯಿಯ ಕರ್ತೃ ಪಾಣಿನಿ(ಕ್ರಿ. ಪೂ. 350)ಯ ಜನ್ಮಸ್ಥಳ ಸಲಾತುರ ಶಲಾತುರ ಹಲಾಥುರ ಹಲಾಹುರ ಲಾಹುರ ಎಂದಾಗಿದೆ ಎನ್ನುತ್ತಾನೆ ಪ್ರಸಿದ್ಧ ಇತಿಹಾಸಜ್ಞ ಹೂ – ಎನ್ತಾ ್ಸಂಗ್. ಸಂಸ್ಕೃತ ಭಾಷೆ ನಮ್ಮದು ಕೂಡಾ. ಇದು ಯಾವುದೇ ಒಂದು ಧರ್ಮಕ್ಕೆ ಸೀಮಿತವಲ್ಲ ಎನ್ನುತ್ತಾರೆ ಪ್ರೊ. ರಶೀದ್.

# 369 ವಾರ್ಡ್‌ಗಳ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಅರ್ಜಿ ಸ್ವೀಕಾರ ಆರಂಭ


## ಜನರ ಉತ್ಸಾಹ ಮುಂದಿನ ಚುನಾವಣೆಗಳಿಗೆ ನಾಂದಿ; ಮತ ಕಳ್ಳತನ ವಿರುದ್ಧದ ಹೋರಾಟ ಮುಂದುವರಿಕೆ ಎಂದ ಡಿಕೆಶಿ

• **ಉದಯವಾಹಿನಿ, ಬೆಂಗಳೂರು**

ಜಿಬಿಎ ಚುನಾವಣೆಗೆ ಸೋಮವಾರದಿಂದ ಅರ್ಜಿ ಸ್ವೀಕಾರ ಮಾಡಲಾಗುವುದು. ಮೀಸಲಾತಿ ಇನ್ನು ಅಂತಿಮವಾಗಿಲ್ಲವಾದರೂ 369 ವಾರ್ಡ್‌ಗಳಲ್ಲಿ ಸ್ಪರ್ಧಿಸಲು ಯಾರಿಗೆಲ್ಲಾ ಆಸಕ್ತಿ ಇದೆ ಎಂದು ತಿಳಿಯಲು ಅರ್ಜಿ ಕರೆಯಲಾಗಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ತಿಳಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಶಿವಕುಮಾರ್ ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು. ನಿನ್ನೆ ಸಚಿವರ ಜೊತೆ ಚರ್ಚಿಸಿ ಈ ಅರ್ಜಿ ಜೊತೆಗೆ ಪಡೆಯುವ ಹಣವನ್ನು ಪಕ್ಷದ ಕಟ್ಟಡ ನಿಧಿಗೆ ಬಳಸಲು ತೀರ್ಮಾನಿಸಿದ್ದು, ಸಾಮಾನ್ಯವರ್ಗಕ್ಕೆ 50 ಸಾವಿರ ಹಾಗೂ ಮಹಿಳೆಯರು ಹಾಗೂ ಪರಿಶಿಷ್ಟ ಸಮುದಾಯದವರಿಗೆ 25 ಸಾವಿರ ರೂ. ನಿಗದಿಪಡಿಸಲಾಗಿದೆ. ಆನ್ಲೈನ್ ಅರ್ಜಿ ಹಾಕಲು ಅವಕಾಶ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮತ ಕಳ್ಳತನ ವಿರುದ್ಧದ ಹೋರಾಟ ಇಲ್ಲಿಗೆ ಮುಗಿಯುವುದೇ ಎಂದು ಕೇಳಿದಾಗ, ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಲು ಮತ ಕಳ್ಳತನ ವಿರುದ್ಧ ನಾವು ಆರಂಭಿಸಿರುವ ಹೋರಾಟ ಮುಂದುವರಿಯಲಿದೆ. ಪ್ರತಿ ಕ್ಷೇತ್ರದಲ್ಲಿ ನಾವು ಲೀಗಲ್ ಬ್ಯಾಂಕ್ ಸ್ಥಾಪಿಸುತ್ತೇವೆ. ನಮ್ಮ ಪಕ್ಷದ ಪರ ಇರುವ ವಕೀಲರನ್ನು ಇದರಲ್ಲಿ ಸೇರಿಸಲಾಗುವುದು. ಇವರು ನಮ್ಮ ಕಾರ್ಯಕರ್ತರಿಗೆ ಕಾನೂನು ಸಲಹೆ ನೀಡಲಾಗುವುದು. ಜಿ.ಸಿ.ಚಂದ್ರಶೇಖರ್ ಅವರು ಬಿಎಲ್ ಎ ಗುರುತಿನ ಚೀಟಿ ನೀಡಲು ತಯಾರು ಮಾಡಿಕೊಂಡಿದ್ದಾರೆ.



ಉದಯವಾಹಿನಿ ಚಿತ್ರ

ಡಿಸಿಎಂ ಡಿಕೆ ಶಿವಕುಮಾರ್ ಹೇಳಿಕೆ

ಎಐಸಿಸಿಯಿಂದ ಒಪ್ಪಿಗೆ ಪಡೆಯಲು ತೆಗೆದುಕೊಂಡು ಹೋಗಲಾಗುವುದು. ನಾವು ಇಡೀ ದೇಶದಲ್ಲಿಯೇ ಅತಿ ಹೆಚ್ಚು ಸಹಿ ಸಂಗ್ರಹ ಮಾಡಿದ್ದೇವೆ.

**ನನ್ನನ್ನು ನೋಡಿದರೆ ನಮ್ಮ ನಾಯಕರು ಕುಶಲೋಪರಿ ವಿಚಾರಿಸುತ್ತಾರೆ:** ಹೈಕಮಾಂಡ್ ನಾಯಕರ ಭೇಟಿ ಬಗ್ಗೆ ಕೇಳಿದಾಗ ನಮ್ಮ ನಾಯಕರಿಗೆ ನನ್ನನ್ನು ನೋಡಿದ ತಕ್ಷಣ ಅರ್ಥವಾಗುತ್ತದೆ. ನನ್ನ ಕುಶಲೋಪರಿ ವಿಚಾರಿಸುತ್ತಾರೆ.

ಇದು ಸೌಹಾರ್ದಯುತ ಭೇಟಿ, ವೈಯಕ್ತಿಕ ಭೇಟಿ ಅಲ್ಲ. ಇದರ ಹೊರತಾಗಿ ಬೇರೆ ವಿಚಾರಗಳನ್ನು ನಿಮ್ಮ ಮುಂದೆ ಬಹಿರಂಗಪಡಿಸಲು ಆಗುವುದಿಲ್ಲ. ಅದರ ಅವಶ್ಯಕತೆ ಇಲ್ಲ ಎಂದರು.

ಬಹಳ ವರ್ಷಗಳ ನಂತರ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ್ದೀರಿ ಎಂದು ಕೇಳಿದಾಗ, ಇದು ಸುಳ್ಳು, ನಾವು ಭೇಟಿಯಾಗಿದ್ದಾಗ ಹೇಳಿಕೊಳ್ಳುವುದಿಲ್ಲ ಎಂದರು. ಹೈಕಮಾಂಡ್ ನಾಯಕರನ್ನು ವೈಯಕ್ತಿಕವಾಗಿ ಭೇಟಿ ಮಾಡುತ್ತೀರಾ ಎಂದು ಕೇಳಿದಾಗ, ದೆಹಲಿ ಪೊಲೀಸರ ನೋಟೀಸ್‌ಗೆ ಉತ್ತರ ನೀಡಬೇಕು. ನಾಯಕರ ಭೇಟಿ ಬಗ್ಗೆ ನೋಡೋಣ. ನಿಮಗೆ ತಿಳಿಸುತ್ತೇನೆ ಎಂದರು.

> **ಇಂದಿನ ಪ್ರತಿಭಟನೆಯಲ್ಲಿ ಜನರಲ್ಲಿ ಇದ್ದ ಉತ್ಸಾಹ 2028 ಹಾಗೂ 2029ರ ಚುನಾವಣೆಗೆ ನಾಂದಿಯಾಡಿದೆ. ಈ ದೇಶಕ್ಕೆ ಕಾಂಗ್ರೆಸ್ ಅನಿವಾರ್ಯತೆ ಇದೆ ಎಂದು ಪಕ್ಷ ಉಳಿಸಿಕೊಳ್ಳಲು ಕಾರ್ಯಕರ್ತರು ಸಜ್ಜಾಗಿದ್ದಾರೆ. ಇದರಿಂದ ಸಂತೋಷವಾಗಿದೆ, ನನ್ನ ಆತ್ಮಸ್ಥೈರ್ಯ ಹೆಚ್ಚಿಸಿದೆ. ಅಧಿಕಾರ ಸಿಗದ ಕಾರ್ಯಕರ್ತರು ಕೂಡ ತಮ್ಮ ಹಣದಲ್ಲಿ ಈ ಪ್ರತಿಭಟನೆಗೆ ಆಗಮಿಸಿದ್ದಾರೆ. ನಗರ ಭಾಗದಲ್ಲಿ ಮತ ಕಳ್ಳತನ ಹೆಚ್ಚಾಗಿದೆ ಎಂದು ಕೇಳಿದಾಗ, ಆಳಂದ ಕ್ಷೇತ್ರದಲ್ಲಿ ಹಳ್ಳಿಗಳಲ್ಲಿ ಹೊರ ರಾಜ್ಯಗಳ ಫೋನ್ ನಂಬರ್ ಬಳಸಿ ಮತದಾರರ ಹೆಸರು ತೆಗೆಸಲಾಗಿದೆ ಎಂದು ತಿಳಿಸಿದರು.**

## ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ

• **ಉದಯವಾಹಿನಿ, ಬೆಂಗಳೂರು**

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಡಿಸೆಂಬರ್ 18, ಗುರುವಾರ ಸಂಜೆ 5–15ಕ್ಕೆ ಶ್ರೀಮತಿ ದೀಪಾ ಸುಧೀಂದ್ರ ಅವರ ನಿರ್ದೇಶನದಲ್ಲಿ ಮಾರ್ಗಂ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಿದೆ ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು–41



ಉದಯವಾಹಿನಿ ಚಿತ್ರ

## ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕ: 4 ವರ್ಷಗಳಲ್ಲಿ ಒಂದೇ ಸಾಹಿತ್ಯ ಸಮ್ಮೇಳನ


• **ಉದಯವಾಹಿನಿ, ಬೆಂಗಳೂರು**

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಘಟಕದಿಂದ ಸೂಕ್ತ ಅನುದಾನ, ಸಹಕಾರ ಹಾಗೂ ಪ್ರೋತ್ಸಾಹ ಸಿಗದ ಕಾರಣ ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕವು ನಾಲ್ಕು ವರ್ಷಗಳ ಅವಧಿಯಲ್ಲಿ ಕೇವಲ ಒಂದೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿದೆ. ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿದ್ದ ಎಂ. ಪ್ರಕಾಶಮೂರ್ತಿ ನೇತೃತ್ವದ ಕಾರ್ಯಕಾರಿ ಸಮಿತಿ ನಾಲ್ಕು ವರ್ಷಗಳನ್ನು ಪೂರ್ಣಗೊಳಿಸಿದೆ. ಅಗತ್ಯ ಅನುದಾನ ಸೇರಿ ಆಡಳಿತಾತ್ಮಕ ಸಂಗತಿಗಳಿಗೆ ಕಸಾಪ ಕೇಂದ್ರ ಘಟಕದ ಜತೆಗೆ ನಿರಂತರ ಸಂಘರ್ಷದಿಂದಾಗಿ ರಾಜಧಾನಿಯಲ್ಲಿ 17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಾಕಾರವಾಗಿಲ್ಲ. 16ನೇ ಜಿಲ್ಲಾ ಸಾಹಿತ್ಯ ಸಮ್ಮೇಳವು 2023ರ ಮಾರ್ಚ್ ತಿಂಗಳಲ್ಲಿ ವಸಂತನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದಿತ್ತು. ಲೇಖಕಿ ಎಚ್.ಎಸ್. ಶ್ರೀಮತಿ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು. ಕಸಾಪ ಕೇಂದ್ರ ಘಟಕವು ಅಗತ್ಯ ಅನುದಾನ ನೀಡದಿರುವುದು ಹಾಗೂ ಕೋಶಾಧಿಕಾರಿ ನೇಮಕಾತಿ ರದ್ದುಪಡಿಸಿದ ಪರಿಣಾಮ, ಆ ಸಮ್ಮೇಳನದ ವೆಚ್ಚವನ್ನು ಪೂರ್ಣ ಪ್ರಮಾಣದಲ್ಲಿ ಭರಿಸಲು ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕಕ್ಕೆ ಈವರೆಗೂ ಸಾಧ್ಯವಾಗಿಲ್ಲ. ಅನುದಾನ ಕಡಿತ: 15ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2021ರ ಮಾರ್ಚ್ ತಿಂಗಳಿನಲ್ಲಿ ಹೆಬ್ಬಾಳದಲ್ಲಿ ನಡೆಸಲಾಗಿತ್ತು. ಕೋವಿಡ್ ಕಾರಣ 2022ರಲ್ಲಿ ಸಮ್ಮೇಳನ ನಡೆದಿರಲಿಲ್ಲ.

## ನಕಲಿ ಸಹಿ ಮಾಡಿ ವಂಚನೆ: ಮೂವರ ವಿರುದ್ಧ ಎಫ್‌ಐಆರ್

• **ಉದಯವಾಹಿನಿ, ಬೆಂಗಳೂರು**

ಅಪರಾಧಿಕ ಒಳಸಂಚು ರೂಪಿಸಿ ಸ್ಥಿರಾಸ್ತಿ ಖರೀದಿಸಿದಲ್ಲದೆ, ಚೆಕ್‌ಗಳ ಮೇಲೆ ನಕಲಿ ಸಹಿ ಮಾಡಿ ವಂಚಿಸಿರುವ ಆರೋಪದಡಿ ಮೂವರ ವಿರುದ್ಧ ಇಲ್ಲಿನ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೊತ್ತನೂರು ನಿವಾಸಿ ತೇಜಸ್ವಿ ಮರಿಯಪ್ಪ ಅವರು ನೀಡಿದ ದೂರಿನ ಮೇರೆಗೆ ಅಕ್ರಮ್ಯಾಕ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ರಜತ್ ವೆಂಕಟೇಶ್, ಸ್ನೇಹ ರಾಕೇಶ್, ಮಧ್ಯವರ್ತಿ ರಾಬಿನ್ ಫ್ರಾನ್ಸಿಸ್ ವಿರುದ್ಧ ಪ್ರಕರಣ ದಾಖಲಾಗಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



ಬನಶಂಕರಿಯ ಇಂಡಸ್ಟ್ರಿಯಲ್ ಲೇಔಟ್‌ನಲ್ಲಿ ದೂರುದಾರ ತೇಜಸ್ವಿ ಮರಿಯಪ್ಪ ಅವರು ಕಟ್ಟಡ ಹೊಂದಿದ್ದಾರೆ. ಆ ಕಟ್ಟಡವನ್ನು ರಾಬಿನ್ ಫ್ರಾನ್ಸಿಸ್ ಮೂಲಕ ರಜತ್ ವೆಂಕಟೇಶ್, ಸ್ನೇಹ ರಾಕೇಶ್ ಅವರಿಗೆ ರೂ.17.50 ಕೋಟಿಗೆ 2022ರಲ್ಲಿ ಮಾರಾಟ ಮಾಡಿದ್ದರು. ಖಾಸಗಿ ಬ್ಯಾಂಕ್‌ನ ನಾಲ್ಕು ಚೆಕ್‌ಗಳನ್ನು ಆರೋಪಿಗಳು ನೀಡಿದ್ದರು. ಹೀಗಾಗಿ, ಶಾಂತಿನಗರದ ಉಪ ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ಆಸ್ತಿ ಮಾರಾಟ ಕುರಿತು ಸೇಲ್ ಡೀಡ್ ಮಾಡಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. 'ಆರೋಪಿಗಳು ನೀಡಿದ್ದ ಚೆಕ್ ಬೌನ್ಸ್ ಆಗಿತ್ತು. ಆಗ ಹಣ ನೀಡುವಂತೆ ಕೇಳಿದಾಗ ಆರೋಪಿಗಳು ವಿನಾಕಾರಣ ಮುಂದೂಡುತ್ತಾ ಹೋದರು. ಹಣ ಕೊಡುವಂತೆ ಮತ್ತೊಮ್ಮೆ ಪ್ರಶ್ನೆ ಮಾಡಿದಾಗ ಜೀವ ಬೆದರಿಕೆ ಹಾಕಿದ್ದಾರೆ. ಹೀಗಾಗಿ ಕಟ್ಟಡ ಖರೀದಿಸಿ ವಂಚಿಸಿದ ಮೂವರ ವಿರುದ್ಧ ಕಾನೂನು ಕ್ರಮಕ್ಕೈಗೊಳ್ಳಲು ತೇಜಸ್ವಿ ಮರಿಯಪ್ಪ ಕೋರಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಅಡುಗೆ ಅನಿಲ ಸೋರಿಕೆಯಿಂದ ಅವಘಡ: ಇಬ್ಬರಿಗೆ ಗಾಯ

• **ಉದಯವಾಹಿನಿ, ಬೆಂಗಳೂರು**

ಬೈಯಪ್ಪನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಬ್ಬಯ್ಯರೆಡ್ಡಿ ಪಾಳ್ಯದ ಮನೆಯೊಂದರಲ್ಲಿ ಮುಂಜಾನೆ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸಂಭವಿಸಿದ ಬೆಂಕಿ ಅವಘಡದಿಂದ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅಬ್ಬಯ್ಯರೆಡ್ಡಿ ಪಾಳ್ಯದ ನಿವಾಸಿಗಳಾದ ಹನುಮಂತಪ್ಪ (70) ಹಾಗೂ ಮಂಜುನಾಥ್ (34) ಗಾಯಗೊಂಡವರು. ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯ ವಿಭಾಗಕ್ಕೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು. ಮನೆಯಲ್ಲಿ ಐದು ಮಂದಿ ವಾಸಿಸುತ್ತಿದ್ದರು. ರಾತ್ರಿ ಎಲ್ಲರೂ ಮನೆಯಲ್ಲೇ ಊಟ ಮಾಡಿ ಮಲಗಿದ್ದರು.

ಬೆಳಿಗ್ಗೆ ಕೆಲಸಕ್ಕೆ ತೆರಳಲು ಮಂಜುನಾಥ್ ಅವರು ಬೇಗ ಎದ್ದಿದ್ದರು. ಅಡುಗೆ ಸಿಲಿಂಡರ್‌ನಿಂದ ಅನಿಲ ಸೋರಿತ ಆಗಿದ್ದು, ಅವರ ಗಮನಕ್ಕೆ ಬಂದಿರಲಿಲ್ಲ. ಸ್ಟ್ ಆನ್ ಮಾಡಲು ಹೋದಾಗ ಬೆಂಕಿ ಹೊತ್ತಿಕೊಂಡಿದೆ. ಆಗ ಇಬ್ಬರು ಗಾಯಗೊಂಡಿದ್ದಾರೆ. ಮನೆಯಲ್ಲಿದ್ದ ಪೀಠೋಪಕರಣ ಹಾಗೂ ಬಟ್ಟೆಗಳು ಭಸ್ಮವಾಗಿವೆ ಎಂದು ಪೊಲೀಸರು ಹೇಳಿದರು. ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಿರಿಯರ ಅನುಭವ ಕಿರಿಯರಿಗೆ ಮಾರ್ಗದರ್ಶನ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೆ.ಆರ್.ಪುರ**

ಪತ್ರಕರ್ತರಿಗೆ ಸಮಾಜದಲ್ಲಿ ಮಹತ್ವದ ಸ್ಥಾನವಿದ್ದು, ಅವರಿಗೆ ಹೊಣೆಗಾರಿಕೆಯೂ ದೊಡ್ಡದಿದೆ. ಹಿರಿಯ ಪತ್ರಕರ್ತರು ಕಿರಿಯರಿಗೆ ಮಾದರಿಯಾಗಿ ಇರುವ ಅಗತ್ಯ ಇದೆ ಎಂದು ಸಮಾಜಸೇವಕಿ ತೃಪ್ತಿ ರವಿ ರೆಡ್ಡಿ ತಿಳಿಸಿದರು.

ಮಹದೇವಪುರ ಕ್ಷೇತ್ರದ ಬೆಳ್ಳಂದೂರು ರಸಗಂಗ ಹೋಟೆಲ್‌ನಲ್ಲಿ ಸ್ಟೈಲ್ ಅಂಡ್ ಟ್ರೆಂಡ್ಜ್ ಹಮ್ಮಿಕೊಂಡಿದ ಕ್ಷೇತ್ರದ ಪತ್ರಿಕಾ ದಿನಾಚರಣೆ ಅಂಗವಾಗಿ ಪತ್ರಕರ್ತರಿಗೆ ಸನ್ಮಾನ, ಸಾರ್ವಜನಿಕರಿಗೆ ಉಚಿತ ಹೆಲ್ಮೆಟ್ ವಿತರಣೆ ಹಾಗೂ ಸಂಚಾರ ನಿಯಮ ಅರಿವು ಮೂಡಿಸು ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು. ನಿವೃತ್ತ ಪೊಲೀಸ್ ಅಧಿಕಾರಿ ದೇವರಾಜ್ ಮಾತನಾಡಿ, ಧೈರ್ಯ ಮತ್ತು ಸತ್ಯಕ್ಕೆ ನಿಷ್ಠರಾಗಿ ನಡೆಯುವುದು ಪತ್ರಿಕಾ ರಂಗಕ್ಕೆ ಪ್ರವೇಶಿಸುವವರು ಮೈಗೂಡಿಸಿಕೊಳ್ಳಬೇಕಾದ ಗುಣಗಳು. ತಮ್ಮ ಸ್ಥಾನಮಾನಕ್ಕೆ ಧಕ್ಕೆ ಬರದಂತೆ ಪತ್ರಕರ್ತರು ಕಾರ್ಯ ನಿರ್ವಹಿಸುವುದು ಅಗತ್ಯವಾಗಿದೆ ಎಂದರು. ಸಂಚಾರ ನಿಮಯ ಪಾಲಿಸಿ ಜೀವ ರಕ್ಷಿಸಿಕೊಳ್ಳಿ, ಪತ್ರಕರ್ತರಿಗೆ ಅಭದ್ರತೆ ಭಾವನೆ ಮೂಡಿದರೆ ಅವರಿಂದ ಸಮರ್ಪಕ ಕೆಲಸ ನಿರೀಕ್ಷಿಸುವುದು ಸಾಧ್ಯವಿಲ್ಲ ಎಂದರು. ಇದೇ ವೇಳೆ ಪೂ.ತಾ. ಪತ್ರಕರ್ತರಿಗೆ ಸನ್ಮಾನಿಸಿ ಗೌರವ ಸಲ್ಲಿಸಿದರು.

ಎಚ್.ಎ.ಎಲ್ ಹಾಗೂ ಎಚ್.ಎಸ್.ಆರ್ ಲೇಔಟ್‌ನ ಸಂಚಾರಿ ವಿಭಾಗದ ಅಧಿಕಾರಿಗಳಾದ ಹೇಮಾಲತಾ ಹಾಗೂ ನಾಗೇಂದ್ರ, ಪತ್ರಿಕೆ ಸಂಪಾದಕರಾದ ಮಹದೇವಗೌಡ, ಉಮೇಶ್, ನಸೀರ್ ಸೇರಿದಂತೆ ಮಿಡಿತ ಫೌಂಡೇಶನ್ ಸಂಸ್ಥೆ ಅಧ್ಯಕ್ಷ ಪರಿಸರ ಮಂಜು, ಸೌಮ್ಯ ಪವಾರ್, ಹೋಟೆಲ್‌ನ ಮುಖ್ಯಸ್ಥ ಸದನಂದಶೆಟ್ಟಿ, ಪತ್ರಕರ್ತರು ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಪರಪ್ಪನ ಅಗಹಾರ ಕೇಂದ್ರ ಕಾರಾಗೃಹದಲ್ಲಿ ಅವ್ಯವಸ್ಥೆ

• **ಉದಯವಾಹಿನಿ, ಬೆಂಗಳೂರು**

ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆ, ಕೈದಿಗಳಿಂದ ಮೊಬೈಲ್ ಬಳಕೆ, ಮದ್ಯ ಕುಡಿದು ನೃತ್ಯ ಮಾಡಿದ ವಿಡಿಯೋ ಹಾಗೂ ಜೈಲುಗಳಲ್ಲಿ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯು ಶೀಘ್ರದಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅತ್ಯಾಚಾರ, ಸರಣಿ ಕೊಲೆ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೋಸಹ ಜಾಲತಾಣದಲ್ಲಿ ಹರಿದಾಡಿತ್ತು. ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯ ಕಲ್ಪಿಸಿರುವ ಕುರಿತು ತೀವ್ರ ಚರ್ಚೆಯಾಗಿತ್ತು. ಗೃಹ ಸಚಿವ ಜಿ.ಪರಮೇಶ್ವರ ಅವರು ಕಾರಾಗೃಹ ಹಾಗೂ ಸುಧಾರಣೆಗಳ ಇಲಾಖೆ ಹಾಗೂ ಪೊಲೀಸರ ಸಭೆ ನಡೆಸಿದ್ದರು. ಸಭೆಯ ಬಳಿಕ ಜೈಲುಗಳಲ್ಲಿ ವ್ಯವಸ್ಥೆಯ ಸುಧಾರಣೆಗೆ ಉನ್ನತ ಮಟ್ಟದ ಸಮಿತಿ ರಚಿಸಿ ಆದೇಶಿಸಿದ್ದರು.



ಉದಯವಾಹಿನಿ ಚಿತ್ರ

ಕೈದಿಗಳಿಗೆ ರಾಜಾತಿಥ್ಯ ಕಲ್ಪಿಸಿರುವ ಕುರಿತು ತೀವ್ರ ಚರ್ಚೆ

ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದರು.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ ಅವರನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು. ಕೆಎಸ್‌ಆರ್‌ಪಿ ಐಜಿಪಿ ಸಂದೀಪ್ ಪಾಟೀಲ, ಎಸ್‌ಪಿಗಳಾದ ಅಮರನಾಥ್ ರೆಡ್ಡಿ, ರಿಷ್ಯಾಂತ್ ಅವರನ್ನು ಒಳಗೊಂಡ ಅಧಿಕಾರಿಗಳು ಹಾಗೂ ರಾಜ್ಯದ ವಿವಿಧ ಜೈಲುಗಳ ತನಿಖೆ ನಡೆಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಗಳನ್ನು ಸಮಿತಿಯ ಸಹ ಸದಸ್ಯರನ್ನಾಗಿ ನೇಮಿಸಲಾಗಿತ್ತು.

ಸಮಿತಿಯು ತಿಹಾರ್ ಜೈಲಿಗೆ ಭೇಟಿ ನೀಡಿ, ಅಲ್ಲಿನ ಅಧಿಕಾರಿಗಳ ಜತೆಗೆ ಚರ್ಚಿಸಿ ಕೈದಿಗಳಿಗೆ ನೀಡಿರುವ ಸೌಲಭ್ಯಗಳು ಹಾಗೂ ಸುಧಾರಣಾತ್ಮಕ ಅಂಶಗಳ ಬಗ್ಗೆ ಅಧ್ಯಯನ ನಡೆಸಿದೆ. ಜೈಲಿನ ಕೈಪಿಡಿ ಪ್ರಕಾರ ಕೈದಿಗಳಿಗೆ ಯಾವೆಲ್ಲಾ ಸೌಲಭ್ಯ ನೀಡಲಾಗುತ್ತಿದೆ? ಜೈಲಿನ ಆಡಳಿತ ಜಾರಿಗೆ ತಂದಿರುವ ಅಂಶಗಳ ಬಗ್ಗೆ, ಬಂದಿಗಳಿಗೆ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದಿದೆ.

ರಾಜ್ಯದಲ್ಲಿರುವ ಇತರೆ ಕೇಂದ್ರ ಕಾರಾಗೃಹಗಳು ಹಾಗೂ ಜಿಲ್ಲಾ ಕಾರಾಗೃಹಗಳಿಗೂ ಈ ಸಮಿತಿ ಭೇಟಿ ನೀಡಿ ಅಧ್ಯಯನ ನಡೆಸಿ, ಮಾಹಿತಿ ಸಂಗ್ರಹಿಸಿದೆ. ಪರಪ್ಪನ ಅಗ್ರಹಾರದ ಜೈಲಿಗೂ ಸಮಿತಿ ಭೇಟಿ ನೀಡಿ, ಅಧಿಕಾರಿಗಳು ಮತ್ತು ಸಿಬ್ಬಂದಿಯ ಹೇಳಿಕೆ ದಾಖಲಿಸಿಕೊಂಡಿದೆ. ಕೈದಿಗಳ ವಿಡಿಯೋ ಬಗ್ಗೆ ಪ್ರಾಥಮಿಕ ತನಿಖೆ ವರದಿಯನ್ನಾಧರಿಸಿ, ಪರಪ್ಪನ ಅಗ್ರಹಾರ ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ್ ಅವರನ್ನು ವರ್ಗಾಯಿಸಿ, ಜೈಲಿನ ಸೂಪರಿಂಟೆಂಡೆಂಟ್ ಇಮಾಮ್ ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಲಾಗಿತ್ತು. ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಜಾಗಕ್ಕೆ ಮೊದಲ ಬಾರಿಗೆ ಐಪಿಎಸ್ ಅಧಿಕಾರಿ ಅನ್ಶು ಕುಮಾರ್ ಅವರನ್ನು ನಿಯೋಜಿಸಿತ್ತು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಪೊಲೀಸ್ ಅಧೀಕ್ಷಕರು, ಮುಖ್ಯ ಅಧೀಕ್ಷಕರ ಕಚೇರಿ ಹಾಗೂ ಕಾರಾಗೃಹ ಅಧಿಕಾರಿಗಳು ಇತ್ತೀಚೆಗೆ ನಡೆಸಿದ ದಿಢೀರ್ ದಾಳಿಯ ವೇಳೆ 73 ಮೊಬೈಲ್‌ಗಳು.

ಚಾರ್ಜರ್, ಸಿಮ್ ಕಾರ್ಡ್ ಹಾಗೂ ನಗದು ವಶಪಡಿಸಿಕೊಂಡಿದ್ದರು. ಈ ಸಂಬಂಧ ಏಳು ಎಫ್ ಐಆರ್ ದಾಖಲಿಸಲಾಗಿದೆ.

## 40 ವರ್ಷಗಳಲ್ಲಿ ಮೊದಲ ಬಾರಿ ರಸ್ತೆ ಅಗೆತ; ವ್ಯಾಪಾರಿಗಳಿಂದ ಮಿಶ್ರ ಪ್ರತಿಕ್ರಿಯೆ

• **ಉದಯವಾಹಿನಿ, ಬೆಂಗಳೂರು**

ನಗರದ ಪ್ರತಿಷ್ಠಿತ ರಸ್ತೆಗಳಲ್ಲಿ ಎಂಜಿ ರಸ್ತೆ (ಮಹಾತ್ಮ ಗಾಂಧಿ ರಸ್ತೆ)ಯೂ ಒಂದು. ನಗರದ ಹಲವು ರಸ್ತೆಗಳಲ್ಲಿ ಜಲಮಂಡಳಿ ಕಾಮಗಾರಿಗಳು ನಡೆಯುತ್ತಿವೆ. ಈಗ ಎಂಜಿ ರಸ್ತೆಯಲ್ಲಿಯೂ ಕಾಮಗಾರಿ ನಡೆಸಲು ತೀರ್ಮಾನಿಸಲಾಗಿದೆ. 40 ವರ್ಷಗಳಲ್ಲಿ ಮೊದಲ ಬಾರಿಗೆ ಈ ರಸ್ತೆಯನ್ನು ಅಗೆಯಲಾಗುತ್ತದೆ.

ನಗರದ ವಾಣಿಜ್ಯ ಕಾರಿಡಾರ್ ಆಗಿರುವ ಎಂಜಿ ರಸ್ತೆಯನ್ನು ಅಗೆಯಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್ಬಿ) ಸಿದ್ಧತೆ ನಡೆಸುತ್ತಿರುವುದರಿಂದ, ಈ ಮಾರ್ಗದಲ್ಲಿ ವ್ಯವಹಾರಗಳು, ಕಚೇರಿ ಬಾಡಿಗೆದಾರರು ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ಅಡಚಣೆಗಯಾಗುವುದು ಖಚಿತ, ಪೈಪ್ ಹಾಕುವ ಸಮಯ ನಿಗದಿಯಾದರೆ ಪ್ರವೇಶಸಾಧ್ಯತೆ, ಸಂಚಾರ ದಟ್ಟಣೆ ಮತ್ತು ಮುಂದಾಗುವ ನಷ್ಟಗಳ ಬಗ್ಗೆ ಕಳವಳ ವ್ಯಕ್ತವಾಗುತ್ತಿದೆ.

ಕೆಲವು ವ್ಯಾಪಾರ ಮಾಲೀಕರು ಕೆಲಸ ಅತ್ಯಗತ್ಯ ಎಂದು ಹೇಳಿದ್ದಾರೆ. ಆದರೆ ಅದು ಸ್ಪಷ್ಟ ಸಮಯ ಮಿತಿ, ಪರಿಣಾಮಕಾರಿ ಸಂಚಾರ ಹಾಗೂ ಪ್ರವೇಶ ನಿರ್ವಹಣೆ ಇರಬೇಕು ಎಂದಿದ್ದಾರೆ. ಎಂಜಿ ರಸ್ತೆಯಲ್ಲಿರುವ ಬಿಹೆಚ್ ಐವಿಇ ಕೋ–ವರ್ಕಿಂಗ್ ಸ್ಪೇಸ್‌ನ ಮಾಲೀಕ ಶೇಶ್ ಪಾಪ್ಲಿಕರ್, ಮಾತನಾಡಿ, ಅಂತಹ ಮಹತ್ವದ ರಸ್ತೆಯಲ್ಲಿ ಮೂಲಸೌಕರ್ಯ ನವೀಕರಣಗಳು ಅಗತ್ಯವೆಂದು ಹೇಳಿದರು.



ಉದಯವಾಹಿನಿ ಚಿತ್ರ

ಎಂಜಿ ರಸ್ತೆ ಒಂದು ಪ್ರಮುಖ ವ್ಯಾಪಾರ ಕಾರಿಡಾರ್ ಆಗಿದೆ, ಮತ್ತು ಸಂಚಾರ ನಿರ್ವಹಣೆಯನ್ನು ಸರಿಯಾಗಿ ಯೋಜಿಸಿದರೆ, ವ್ಯವಹಾರವು ಸ್ಥಗಿತಗೊಳ್ಳುವುದಿಲ್ಲ ಎಂದು ಅವರು ಹೇಳಿದರು. ತಮ್ಮ ಬಳಕೆದಾರರಲ್ಲಿ ಹೆಚ್ಚಿನವರು ಮೆಟ್ರೋ ಮೂಲಕ ಪ್ರಯಾಣಿಸುತ್ತಾರೆ, ಇದು ರಸ್ತೆ ಮುಚ್ಚುವುದರಿಂದ ಆಗುವ ಪರಿಣಾಮವನ್ನು ಕಡಿಮೆ ಮಾಡುತ್ತದೆ ಎಂದು ಅವರು ಹೇಳಿದರು.

ಪ್ರಯಾಣಿಕರಿಗೆ ಈಗಾಗಲೇ ತೊಂದರೆ ಪ್ರಾರಂಭವಾಗಿದೆ ಎಂದು ಎಂಜಿ ರಸ್ತೆಯಲ್ಲಿರುವ ಕಚೇರಿಯೊಂದರಲ್ಲಿ ಕೆಲಸ ಮಾಡುವ ಆರ್ಯಮನ್ ಲಕ್ಷ್ಮಣನ್ ಹೇಳಿದ್ದಾರೆ. ಆದರೆ ರಸ್ತೆ ಮಾರ್ಗ ಬದಲಾವಣೆಗಳು ಅನಿರೀಕ್ಷಿತವಾಗಿಸಿದೆ ಎಂದು ಹೇಳಿದರು.

## ಜಿಬಿಎ ಆಡಳಿತ ತಿದ್ದುಪಡಿ ವಿಧೇಯಕಗೆ ವಾಪಸ್: ಜೆಡಿಎಸ್ ಒತ್ತಾಯ

• **ಉದಯವಾಹಿನಿ, ಬೆಂಗಳೂರು**


ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುವ ಸಂವಿಧಾನಕ್ಕೆ ವಿರೋಧಿಯಾಗಿದೆ. ಈ ಕೂಡಲೇ ವಿಧೇಯಕವನ್ನು ವಾಪಸ್ ಪಡೆಯಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಹೆಚ್.ಎಂ. ರಮೇಶಗೌಡ ಅವರು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು.

**ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು;** ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭ ಆಗುವ ರೀತಿಯಲ್ಲಿ ವಾರ್ಡ್ ವಿಂಗಡಣೆ ಮಾಡಿದೆ.

ಈ ವಿಂಗಡಣೆಯು ಸಾಕಷ್ಟು ನ್ಯೂನತೆಗಳಿಂದ ಕೂಡಿದೆ. ಬೆಂಗಳೂರು ಅಭಿವೃದ್ಧಿಗೆ ಮಾರಕವಾಗಿರುತ್ತದೆ. ಈ ವಿಧೇಯಕವನ್ನು ಹಿಂಪಡೆಯಬೇಕೆಂದು ಅವರು ಒತ್ತಾಯಿಸಿದರು. ರಾಜ್ಯ ಸರಕಾರವು ಸಂವಿಧಾನಕ್ಕೆ ವಿರೋಧವಾಗಿ ಜಿಬಿಎ ಕಾಯ್ದೆ ತಿದ್ದುಪಡಿ ಮಾಡಲು ವಿಧೇಯಕ ಮಂಡನೆ ಮಾಡಿರುವುದು ಖಂಡನೀಯ. ಕೊನೇ ಹಂತದಲ್ಲಿ ಬಿಲ್ ಮಂಡನೆ ಮಾಡಿ ಅಂಗೀಕಾರ ಪಡೆಯುವ ಹುನ್ನಾರವನ್ನು ಸರಕಾರ ನಡೆಸಿದೆ ಎಂದು ಅವರು ಆರೋಪಿಸಿದರು. ಚುನಾವಣೆ ನಡೆಸಲು ಹೊಸ ವಾರ್ಡ್‌ಗಳಿಗೆ ಕಾರ್ಪೋರೇಟರ್ ಗಳನ್ನ ನಾಮನಿರ್ದೇಶನ ಮಾಡಲು ಸಂವಿಧಾನವು ಸರಕಾರಕ್ಕೆ ಅವಕಾಶ ನಿಡುವುದಿಲ್ಲ.

74ನೇ ತಿದ್ದುಪಡಿ ಕಾಯ್ದೆ 1992ರಿಂದ ಸ್ಥಾಪಿಸಲ್ಪಟ್ಟ ಪುರಸಭೆಯನ್ನು ನಿಯಂತ್ರಿಸುವ ಮೂಲಭೂತ ತತ್ವವೆಂದರೆ ಎಲ್ಲಾ ವಾರ್ಡ್ ಪ್ರತಿನಿಧಿಗಳಿಗೆ ನೇರ ಚುನಾವಣೆಗೆ ಸ್ಪರ್ಧಿಸುವ ಅವಕಾಶವಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಒಟ್ಟಾರೆ ಸಂವಿಧಾನದ ವಿರುದ್ಧವಾಗಿ ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ ಮಂಡನೆ ಮಾಡಿದ್ದಾರೆ. 20 ಸಾವಿರ ಜನಸಂಖ್ಯೆಗೆ ಒಬ್ಬರಂತೆ ನಾಮನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ರಾಜ್ಯ ಸರ್ಕಾರ ವಿಧಾನ ಮಂಡಲದಲ್ಲಿ ಮಂಡನೆಯಾಗಿರುವ ಬಿಲ್ ಪ್ರಜಾಪ್ರಭುತ್ವದ ಕಗ್ಗೊಲೆ. ಈ ಕೂಡಲೇ ಬಿಲ್ಲನ್ನು ವಾಪಸ್ ಪಡೆಯಬೇಕು ಎಂದು ರಮೇಶಗೌಡ ಅವರು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.



### ಮೂಲ ಸಾಂವಿಧಾನಿಕ ಆದೇಶ (243R) ಕಾಯ್ದೆ

**ಪುರಸಭೆಯ ಎಲ್ಲಾ ಸ್ಥಾನವನ್ನು ಪ್ರದೇಶದ ಪ್ರಾದೇಶಿಕ ಕ್ಷೇತ್ರಗಳಿಂದ ನೇರ ಚುನಾವಣೆಯ ಮೂಲಕ ಆಯ್ಕೆ ಮಾಡಿದ ವ್ಯಕ್ತಿಗಳಿಂದ ತುಂಬಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ವಾರ್ಡ್ ಎಂದು ಕರೆಯಲಾಗುವುದು. ಇದು ಪ್ರತಿ ವಾರ್ಡ್‌ಗೆ ನೇರ ಚುನಾವಣೆಗೆ ಸಂವಿಧಾನದ ಆಧಾರದ ಮೇಲೆ ವಿಂಗಡಣೆ ಇದೆ ಎಂದು ಹೇಳಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಇನ್ನು 243R(2) ಕಾಯ್ದೆ ಪ್ರಕಾರ ರಾಜ್ಯ ಶಾಸಕಾಂಗವು ಕಾನೂನಿನ ಮೂಲಕ ಪ್ರಾತಿನಿಧ್ಯವನ್ನು ಒದಗಿಸಲು ಅನುಮತಿಸುತ್ತದೆ. ಹಾಗೆಯೇ ನಾಮನಿರ್ದೇಶಿತ ಸದಸ್ಯರು ಪುರಸಭೆಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ ಎಂದು 243R ಕಾಯ್ದೆಯ ನಿಬಂಧನೆಯು ಸ್ಪಷ್ಟವಾಗಿ ಹೇಳುತ್ತದೆ ಎಂದರು.**

# ಆನೇಕಲ್ ವ್ಯಾಪ್ತಿಯಲ್ಲಿ 332 ಸೈಟ್ ಹಂಚಿಕೆಗೆ ಗೃಹ ಮಂಡಳಿ ಸಜ್ಜು

## ರಾಜಾಪುರ ಬಡಾವಣೆಯಲ್ಲಿ ನಾನಾ ಅಳತೆಯ ನಿವೇಶನಗಳು ಲಭ್ಯ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಗೃಹ ಮಂಡಳಿಯು ರಾಜಧಾನಿಯಲ್ಲಿ ಅಭಿವೃದ್ಧಿಪಡಿಸಿರುವ ರಾಜಾಪುರ ಬಡಾವಣೆಯಲ್ಲಿನ 332 ನಿವೇಶನಗಳ ಹಂಚಿಕೆಗೆ ಮುಂದಾಗಿದೆ. ಅಲ್ಲದೆ, ಇಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ಶೇ.50ರ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ನೀಡುತ್ತಿದೆ. ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲೂಕು ವ್ಯಾಪ್ತಿಯಲ್ಲಿ ಗೃಹ ಮಂಡಳಿಯು ಸೂರ್ಯನಗರ ಹೆಸರಿನಲ್ಲಿ ವಿವಿಧ ಹಂತದಲ್ಲಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿದೆ. ನಿವೇಶನಗಳು ಮಾತ್ರವಲ್ಲದೆ, ವಿವಿಧ ರೀತಿಯ, ಅಳತೆಯ ಅತ್ಯಾಧುನಿಕ ಫ್ಲ್ಯಾಟ್‌ಗಳ ವಸತಿ ಸಮುಚ್ಚಯ ಯೋಜನೆಗಳನ್ನೂ ಹಮ್ಮಿಕೊಂಡಿದೆ.

ಸೂರ್ಯನಗರ 1ನೇ ಹಂತದಲ್ಲಿ ಸೂರ್ಯ ಡಿವೈನ್ ಸೂರ್ಯ ಶೈನ್, 4ನೇ ಹಂತದಲ್ಲಿ ಸೂರ್ಯ ನಿಸರ್ಗ ವ್ಯಾಲಿ ಹೀಗೆ ಅತ್ಯಾಧುನಿಕ ಮಾದರಿಯ ಫ್ಲ್ಯಾಟ್‌ಗಳನ್ನು ಒದಗಿಸುವ ಯೋಜನೆಗಳನ್ನು ಹಮ್ಮಿಕೊಂಡಿದೆ. ಇದಲ್ಲದೆ ನಿವೇಶನಗಳನ್ನೂ ಕಲ್ಪಿಸುತ್ತಿದ್ದು ಹಾಗೂ ಒಂದು ವರ್ಷದ ನಂತರ ಸೂರ್ಯನಗರ 2ನೇ ಹಂತದ ಮುಂದುವರಿದ ರಾಜಾಪುರ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ 30X40, 30X50 ಮತ್ತು 40X60 ಅಳತೆಯ 332 ನಿವೇಶನಗಳ ಹಂಚಿಕೆಗೆ ಮುಂದಾಗಿದೆ.

**2ನೇ ಹಂತದಲ್ಲಿ ಉಳಿಕೆ ನಿವೇಶನ ಹಂಚಿಕೆ:** ಸೂರ್ಯನಗರ 2ನೇ ಹಂತದ ಮುಂದುವರಿದ ರಾಜಾಪುರ ಬಡಾವಣೆಯನ್ನು ಸುಮಾರು 176 ಎಕರೆಯಲ್ಲಿ ಅಭಿವೃದ್ಧಿಪಡಿಸಿ ಮತ್ತು ವಿವಿಧ ಅಳತೆಯ ಸುಮಾರು 1100 ನಿವೇಶನಗಳನ್ನು ರಚಿಸಲಾಗಿತ್ತು.



ಉದಯವಾಹಿನಿ ಚಿತ್ರ

ಈ ನಿವೇಶನಗಳನ್ನು 2019ರಲ್ಲಿಯೇ ಹಂಚಿಕೆ ಮಾಡಲು ಮಂಡಳಿ ಮುಂದಾಗಿತ್ತು. ಆದರೆ ಮತ್ತು ಕಾನೂನು ತೊಡುಕು ಉಂಟಾದ ಹಿನ್ನೆಲೆಯಲ್ಲಿ ಪ್ರಕ್ರಿಯೆ ಮುಂದುವರಿಸಿರಲಿಲ್ಲ. ಬಳಿಕ ಕಳೆದ ವರ್ಷ ಮೊದಲ ಹಂತದಲ್ಲಿ 768 ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಎರಡನೇ ಹಂತದಲ್ಲಿ ಉಳಿಕೆ 332 ನಿವೇಶನಗಳ ಹಂಚಿಕೆಗೆ ಪ್ರಕ್ರಿಯೆ ಆರಂಭಿಸಿದೆ.

### ವಿವಿಧ ಆದಾಯ ಗುಂಪಿಗೆ ಹಂಚಿಕೆ

**ಹಂಚಿಕೆ ಮಾಡಲು ಉದ್ದೇಶಿಸಿರುವ ಉಳಿಕೆ ನಿವೇಶನಗಳನ್ನು ಆರ್ಥಿಕ ದುರ್ಬಲ ವರ್ಗ ಇಡಬ್ಲ್ಯುಎಸ್, ಕಡಿಮೆ ಆದಾಯ ಗುಂಪು ಎಲ್‌ಐಜಿ, ಮಧ್ಯಮ ಆದಾಯ ಗುಂಪು ಎಂಐಜಿ ಹಾಗೂ ಹೆಚ್ಚು ಆದಾಯ ಗುಂಪಿನ ಎಚ್‌ಐಜಿ ಆಧಾರದಲ್ಲಿ ಹಂಚಿಕೆ ಮಾಡಲು ನಿವೇಶನಗಳನ್ನು ನಿಗದಿಪಧಿಡಿಸಿದೆ. ಇದರಲ್ಲಿ ಕಡಿಮೆ ಆದಾಯ ಗುಂಪಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅರ್ಜಿದಾರರಿಗೆ ನೋಂದಣಿ ಶುಲ್ಕ ಮರುಪಾವತಿ ಮಾಡುವುದಿಲ್ಲ. ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿಗಳು–1983 ನಿಯಮ 9ರಂತೆ ಇ–ಲಾಟರಿ ಮೂಲಕ ನಿವೇಶನ ಹಂಚಿಕೆ ಮಾಡಲಾಗುವುದು. ಅನಿಯಮಿತ ನಿವೇಶನಗಳು ಸೇರಿಕೊಂಡಂತೆ ಇ–ಲಾಟರಿಗೆ ಪರಿಗಣಿಸಲಾಗುವುದು. ನಿವೇಶನಗಳನ್ನು ಒಂದೇ ಇಡಿಗಂಟಿನ (ಔಟ್‌ರೈಟ್ ಸೇಲ್) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು ಎಂಬ ಇನ್ನಿತರ ನಿಯಮಗಳನ್ನು ವಿಧಿಸಿದೆ.**

> **ಈ ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು ಇ–ಪೇಮೆಂಟ್ ಮೂಲಕ ಆರಂಭಿಕ ಠೇವಣಿ ಮೊತ್ತ ಪಾವತಿಸಿ, ಡಿ.31ರೊಳಗೆ ಮಂಡಳಿ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ**
> **–ಮಂಡಳಿಯ ಅಧಿಕಾರಿಯೊಬ್ಬರು**

**ಆದಾಯ ದೃಢೀಕರಣ ಅಗತ್ಯ:** ಆರ್ಥಿಕ ದುರ್ಬಲ ವರ್ಗದ ನಿವೇಶನಗಳನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುತ್ತಿರುವುದರಿಂದ ಅರ್ಜಿದಾರರು ಇತ್ತೀಚಿನ ತಮ್ಮ ಕುಟುಂಬದ ವಾರ್ಷಿಕ ವರಮಾನದ ಅಗತ್ಯ ದಾಖಲೆಯನ್ನು ಒದಗಿಸಬೇಕು. ನಗರ ಪ್ರದೇಶದ ಅರ್ಜಿದಾರರ ವಾರ್ಷಿಕ ವರಮಾನ 2 ಲಕ್ಷ ರೂ. ಮತ್ತು ಗ್ರಾಮೀಣ ಪ್ರದೇಶದ ಅರ್ಜಿದಾರರ ವಾರ್ಷಿಕ ವರಮಾನ 1.20 ಲಕ್ಷ ರೂ. ಮೀರಬಾರದು. ಇದಕ್ಕೆ ಸಂಬಂಧಪಟ್ಟಂತೆ ತಹಶೀಲ್ದಾರ್‌ರಿಂದ ಆದಾಯ ಪ್ರಮಾಣಪತ್ರ ಪಡೆದು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಬೇಕು.

# ಮತ್ತೆ ಉಲ್ಬಣಗೊಂಡ ಹುಲಿ ಚಿರತೆ ಹಾವಳಿ: ಜಾನುವಾರುಗಳ ಬಲಿ

• **ಉದಯವಾಹಿನಿ, ಗುಂಡ್ಲುಪೇಟೆ**



ಉದಯವಾಹಿನಿ ಚಿತ್ರ

ತಾಲ್ಲೂಕಿನ ಬೊಮ್ಮಲಾಪುರ, ಶಿವಪುರ, ದೇಪಾಪುರ, ಕೆಕೆ ಹುಂಡಿ ಗ್ರಾಮಸ್ಥರು ಹುಲಿ ಚಿರತೆ ಹಾವಳಿಯಿಂದ ಬೆಚ್ಚಿಬಿದ್ದಿದ್ದಾರೆ, ದೇಪಾಪುರ ಹಾಗೂ ಬೊಮ್ಮಲಾಪುರ ಗ್ರಾಮದಲ್ಲಿ ಹಸುಗಳ ಮೇಲೆ ಹುಲಿ ದಾಳಿ ನಡೆಸಿದ್ದ ಘಟನೆ ಮಾಸುವ ಮುನ್ನವೇ ಶಿವಪುರ ಹಾಗೂ ಕೆಕೆ ಹುಂಡಿ ಗ್ರಾಮದಲ್ಲಿ ಚಿರತೆ ದಾಳಿಗೆ ಕರುಗಳು ಬಲಿಯಾಗಿದ್ದು ಹೈನುಗಾರಿಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವಲಯಕ್ಕೆ ಸೇರಿದ ಕೆಕೆ ಹುಂಡಿ ಗ್ರಾಮದ ಆಸುಪಾಸಿನಲ್ಲೇ ಕೊಟ್ಟಿಗೆಗೆ ನುಗ್ಗಿದ ಚಿರತೆ ಪುಟ್ಟಮಾದೇಗೌಡ ಎಂಬವರಿಗೆ ಸೇರಿದ ಕರುಗಳನ್ನ ಬಲಿ ಪಡೆದಿದೆ, ಚಿರತೆ ದಾಳಿ ತೀವ್ರತೆಗೆ ಒಂದು ಕರು ಸಾವನ್ನಪ್ಪಿದ್ದರೆ ಮತ್ತೊಂದು ಕರು ಅಕ್ಷರಶಃ ಸಾವಿನಂಚಿಲ್ಲಿದೆ ಎಂದು ತಿಳಿದುಬಂದಿದೆ. ಇತ್ತ ಶಿವಪುರ ಗ್ರಾಮದ ಮಹೇಶ್ ಶಿವಪುರ ಗ್ರಾಮದ ಮಹೇಶ್ ಎಂಬವರ ಜಮೀನಿನಲ್ಲಿದ್ದ ಕರುವಿನ ಮೇಲೆಯೂ ಸಹ ಚಿರತೆ ದಾಳಿ ನಡೆಸಿ ಕೊಂದು ಮುಗಿಸಿದೆ. ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಹಾರ ನೀಡುವ ಭರವಸೆ ನೀಡಿದ್ದು ಹುಲಿ, ಚಿರತೆ ಪತ್ತೆಗೆ ಡ್ರೋನ್ ಕಾರ್ಯಚರಣೆಗೆ ಮುಂದಾಗಲಾಗುವುದು ಎಂದು ತಿಳಿಸಿದ್ದಾರೆ. ರೈತರಿಗೆ ಪರಿಹಾರ ನೀಡುವ ಬದಲು ವನ್ಯಜೀವಿಗಳ ಉಪಟಳಕ್ಕೆ ಕಡಿವಾಣ ಹಾಕಲು ನೂತನ ತಂತ್ರಜ್ಞಾನಕ್ಕೆ ಅರಣ್ಯ ಇಲಾಖೆ ಮುಂದಾಗಬೇಕು ಎಂದು ರೈತ ಮುಖಂಡ ಲಿಂಗರಾಜು ಒತ್ತಾಯಿಸಿದ್ದಾರೆ.

> **ಹುಲಿ ಚಿರತೆ ದಾಳಿಯಿಂದ ಜಾನುವಾರು ಕಳೆದುಕೊಂಡ ರೈತರಿಗೆ ಪರಿಹಾರದ ಹೆಸರಿನಲ್ಲಿ ಒಂದಷ್ಟು ಪುಡಿಗಾಸು ನೀಡುವ ಮೂಲಕ ಅರಣ್ಯ ಇಲಾಖೆ ತನ್ನ ವೈಫಲ್ಯವನ್ನ ಮರೆಮಾಚುತ್ತಿದೆ, ರೈತಾಪಿ ವರ್ಗಕ್ಕೆ ಧೈರ್ಯ ತುಂಬಬೇಕಿರುವ ಇಲಾಖೆ ಹುಲಿ ಚಿರತೆ ದಾಳಿಯಾದಂತ ಸಂದರ್ಭದಲ್ಲಿ ಪರಿಹಾರ ನೀಡಿದರೆ ಸುಮ್ಮನಾಗುತ್ತಾರೆ ಎಂಬ ನಂಬಿಕೆಯಲ್ಲಿ ಮುಳುಗಿರುವುದು ವ್ಯಾಘ್ರಗಳ ಸರಣಿ ದಾಳಿಗೆ ಬಹುಮುಖ್ಯ ಕಾರಣವಾಗಿದೆ.**
> 
> –ಮಂಜು ಶಿವಪುರ ಗ್ರಾಮಸ್ಥ

# ಬ್ಯಾಂಕ್ ವ್ಯವಸ್ಥಾಪಕ ಮಹಾದೇವ್ ಜೋಶಿ ಶಿಬಿರದ ಉದ್ದೇಶ ಗ್ರಾಹಕರ ಅರಿವು


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೋಲಾರ**

ಹೆಚ್ಚು ಕಾಲ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿ ಹಕ್ಕು ಪಡೆಯದೆ ಉಳಿದಿರುವ ಬ್ಯಾಂಕ್ ಠೇವಣಿಗಳು, ವಿಮಾ ಕಂತುಗಳು ಮತ್ತು ಷೇರುಗಳನ್ನು ಅವುಗಳ ಮಾಲೀಕರು ಅಥವಾ ಕಾನೂನುಬದ್ಧ ವಾರಸುದಾರರಿಗೆ ಹಸ್ತಾಂತರಿಸುವ ಶಿಬಿರ ಈಚೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆಯಿತು. ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವ್ಯವಸ್ಥಾಪಕ ಮಹಾದೇವ್ ಜೋಶಿ ಶಿಬಿರದ ಉದ್ದೇಶ ಹಾಗೂ ಗ್ರಾಹಕರ ಅರಿವು ಕುರಿತು ವಿವರಿಸಿದರು. ಬ್ಯಾಂಕ್‌ನಲ್ಲಿ ಸತತ 10 ವರ್ಷಗಳಿಗೂ ನಿಷ್ಕ್ರಿಯ ಖಾತೆಗಳಲ್ಲಿರುವ ಹಣ ಮತ್ತು 10 ವರ್ಷಗಳಿಗಿಂತ ಹಳೆಯದಾದ ಹಕ್ಕು ಪಡೆಯದ ಠೇವಣಿಗಳನ್ನು ಆರ್‌ಬಿಐನ ಡಿಇಎ ನಿಧಿಗೆ ವರ್ಗಾಯಿಸಲಾಗುತ್ತದೆ. ಹಕ್ಕು ಪಡೆಯದ ಖಾತೆಗಳು ಮತ್ತು ಠೇವಣಿಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ (https://udgam.rbi.org.in) ಪತ್ತೆ ಮಾಡಬಹುದು. ಈ ಶಿಬಿರವು ಭಾರತದ ಹಣಕಾಸು ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಬ್ಯಾಂಕಿಂಗ್, ವಿಮೆ ಮತ್ತು ಇತರ ವಲಯಕ್ಕೆ ಸಂಬಂಧಿಸಿದ ಕಚೇರಿ ಶಾಖೆಗಳಲ್ಲಿ ಡಿ.31ರವರೆಗೆ ಮುಂದುವರಿಯುತ್ತದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಹಕ್ಕುಪಡೆಯದೆ ಉಳಿದಿರುವ ಹಣದ ಮೊತ್ತ ರೂ.71.21 ಕೋಟಿ. ಹೆಚ್ಚಿನ ಜನಜಾಗೃತಿ ಮೂಡಿಸಲು ವಿಮಾ ಹಾಗು ಬ್ಯಾಂಕ್‌ಗಳು ಮುಂದೆ, ಜಿಲ್ಲೆಯಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್ ಅಳವಡಿಸಬೇಕು ಎಂದರು. ಆರ್‌ಬಿಐ ಬೆಂಗಳೂರಿನ ಪ್ರಾದೇಶಿಕ ಕಚೇರಿ ವ್ಯವಸ್ಥಾಪಕ ಮೊನಿರಾಜ್ ಬ್ರಹ್ಮ ಮಾತನಾಡಿ, ಗ್ರಾಹಕರಿಗೆ ಬ್ಯಾಂಕ್‌ನಲ್ಲಿ ಸತತ 10 ವರ್ಷಗಳಿಗೂ ಹೆಚ್ಚು ಕಾಲ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿ ಹಕ್ಕು ಪಡೆಯದೆ ಉಳಿದಿರುವ ಬ್ಯಾಂಕ್ ಠೇವಣಿಗಳು, ವಿಮಾ ಕಂತುಗಳು ಮತ್ತು ಷೇರುಗಳನ್ನು ಅವುಗಳ ಮಾಲೀಕರು ಅಥವಾ ಕಾನೂನುಬದ್ಧ ವಾರಸುದಾರರಿಗೆ ಹಸ್ತಾಂತರಿಸುವದರ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸಬೇಕು. ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು ಎಂದು ಬ್ಯಾಂಕ್ ಮಿತ್ರರಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ರಘುನಾಥರೆಡ್ಡಿ ಮಾತನಾಡಿ, ಕೋಲಾರದಲ್ಲಿ ನಿಷ್ಕ್ರಿಯವಾಗಿರುವ ಸರ್ಕಾರಿ ಖಾತೆಗಳನ್ನು ಹಾಗೂ ಗ್ರಾಮೀಣ ಪ್ರದೇಶದಲ್ಲಿರುವ ವೈಯಕ್ತಿಕ ಖಾತೆಗಳ ತ್ವರಿತ ವಿಲೇವಾರಿಗಳಿಗಾಗಿ ಸಹಾಯ ಮಾಡುವುದಾಗಿ ಭರವಸೆ ನೀಡಿದರು.

ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಕರ್ನಾಟಕ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೋಟಕ್ ಮಹೇಂದ್ರ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿ ಬ್ಯಾಂಕ್, ಪಂಜಾಬ್ ಸಿಂದ್ ಬ್ಯಾಂಕ್, ಇಂಡಿಯನ್ ಬ್ಯಾಂಕ್ ಹಾಗೂ ವಿಮಾ ಸಂಸ್ಥೆಯ ಅಧಿಕಾರಿಗಳು ಭಾಗವಹಿಸಿದ್ದರು. ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನ ಬಿ.ಎಸ್.ಆನಂದ್, ಹಣಕಾಸು ಸಲಹೆಗಾರ್ತಿ ವಿಶಾಲಾಕ್ಷಿ, ಕಾರ್ಯಕ್ರಮಕ್ಕೆ ಸಹಯೋಗ ನೀಡಿದರು. ಬ್ಯಾಂಕ್ ಆಫ್ ಬರೋಡಾ ಮುಖ್ಯ ವ್ಯವಸ್ಥಾಪಕ ಮನೋಹರ್ ವಂದಿಸಿದರು. ವಾರಸುದಾರರಿಗೆ ಬ್ಯಾಂಕ್ ಠೇವಣಿ ಹಸ್ತಾಂತರ ಶಿಬಿರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನಿಂದ ಆಯೋಜನೆ ವಿವಿಧ ಬ್ಯಾಂಕ್‌ಗಳ ವ್ಯವಸ್ಥಾಪಕರು ಭಾಗಿ

# ತುಮಕೂರು ಎಂದು ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆ

## ಇ–ಖಾತಾ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಮೇಶ್ವರ್ ಹೇಳಿಕೆ

• **ಉದಯವಾಹಿನಿ, ತುಮಕೂರು**

ಗ್ರೇಟರ್ ತುಮಕೂರು ಘೋಷಣೆಯಿಂದ ನಗರಕ್ಕೆ ಹೆಚ್ಚಿನ ಅನುದಾನ ಲಭ್ಯವಾಗುತ್ತದೆ. ಇದರಿಂದ ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿ ಸುಧಾರಣೆಗೊಳ್ಳುತ್ತದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು. ಗ್ರೇಟರ್ ತುಮಕೂರು ಘೋಷಣೆಗೆ ಪ್ರಸ್ತಾವನೆ ಸಲ್ಲಿಕೆ

ನಗರದ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ನಗರಾಭಿವೃದ್ಧಿ ಇಲಾಖೆ, ಮಹಾನಗರ ಪಾಲಿಕೆ ಸಹಯೋಗದಲ್ಲಿ ನಡೆದ ಇ-ಖಾತಾ ವಿತರಣಾ ಕಾರ್ಯಕ್ರಮ, ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಹಕ್ಕು ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರೇಟರ್ ತುಮಕೂರು ಘೋಷಣೆಗಾಗಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಬಗ್ಗೆ ಸರಕಾರ ಚಿಂತನೆ ನಡೆಸುತ್ತಿದೆ. ಇದರಿಂದ ಕೈಗಾರಿಕೆ, ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ.

ಯೋಜಿತ ನಗರ ಅಭಿವೃದ್ಧಿ ಹೊಂದಿ ಜನರ ಜೀವನಮಟ್ಟ ಉತ್ತಮಗೊಳಿಸುವ ಉದ್ದೇಶದಿಂದ ಈ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.



ರಾಜ್ಯದಲ್ಲಿ ತುಮಕೂರು, ಮೈಸೂರು, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳು ಬಹಳ ವೇಗವಾಗಿ ಅಭಿವೃದ್ಧಿಯತ್ತ ಸಾಗುತ್ತಿವೆ. ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಭವಿಷ್ಯ ನಿರ್ಮಾಣದ ಉದ್ದೇಶದಿಂದ ಗ್ರಾಮೀಣ ಪ್ರದೇಶಗಳಿಂದ ಜನರು ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಆದರೆ ನಗರಗಳಲ್ಲಿ ಬದುಕು ಸಹ ಸುಲಭವಲ್ಲ. ಕೆಲ ವಾರ್ಡ್‌ಗಳಲ್ಲಿ ಅನೇಕ ಕುಟುಂಬಗಳಿಗೆ ಮೂಲ ಸೌಕರ್ಯಗಳಿಲ್ಲದೆ ಕಷ್ಟಕರ ಜೀವನ ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ ಶೇ.40ರಷ್ಟು ಜನರು ಪಟ್ಟಣಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಗ್ರಾಮೀಣ ಭಾಗದಿಂದ ವಲಸೆ ಬಂದು ಜೀವನ ಸಾಗಿಸುವವರಿಗೆ ಸರಕಾರದಿಂದ ವಸತಿ ಸೌಲಭ್ಯ, ಸ್ಮಶಾನ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಾಮಾನ್ಯ ಜನರ ಜೀವನಮಟ್ಟ ಸುಧಾರಿಸಲು ರಾಜ್ಯ ಸರಕಾರ ಬದ್ಧವಾಗಿದೆ ಎಂದರು.

ನಗರ ಶಾಸಕ ಜಿ.ಬಿ.ಜ್ಯೋತಿ ಗಣೇಶ್ ಮಾತನಾಡಿ, ಪೌರ ಕಾರ್ಮಿಕರು ಹಾಗೂ ಕೊಳೆಗೇರಿ ಪ್ರದೇಶದ ನಿವಾಸಿಗಳ ಜೀವನಮಟ್ಟ ಸುಧಾರಿಸಲು ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಕೊಳೆಗೇರಿ ಪ್ರದೇಶಗಳಲ್ಲಿ ಯುಜಿಡಿ ಹಾಗೂ ಕಸ ವಿಲೇವಾರಿ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಗೊಳಿಸಬೇಕಾದ ಅಗತ್ಯವಿದೆ ಎಂದರು.

**ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ**

### ಇ-ಖಾತಾ ವಿತರಣೆ

**ಮಹಾನಗರ ಪಾಲಿಕೆ ಆಯುಕ್ತ ಯೋಗಾನಂದ ಮಾತನಾಡಿ, ರಾಜ್ಯ ಸರಕಾರದ ಮಹತ್ವದ ಯೋಜನೆಯಾದ ಇ-ಆಸ್ತಿ ತಂತ್ರಾಂಶದ ಮೂಲಕ ಪಾಲಿಕೆ ವ್ಯಾಪ್ತಿಯ 1.30 ಲಕ್ಷ ಆಸ್ತಿಗಳ ಪೈಕಿ 50 ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿ 48 ಸಾವಿರ ಆಸ್ತಿಗಳಿಗೆ ಇ-ಖಾತಾ ವಿತರಿಸಲಾಗುತ್ತಿದೆ. ಗೃಹ ಭಾಗ್ಯ ಯೋಜನೆಯಡಿ 52 ಪೌರಕಾರ್ಮಿಕ ಫಲಾನುಭವಿಗಳಿಗೆ ಇ-ಖಾತೆ ವಿತರಣೆ ಮಾಡಲಾಗುತ್ತದೆ. ಜತೆಗೆ, ಕೊಳೆಗೇರಿಮುಕ್ತ ನಗರ ನಿರ್ಮಾಣದ ಉದ್ದೇಶದಿಂದ 4 ಕೊಳೆಗೇರಿ ಪ್ರದೇಶಗಳ 120 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.**

# ತಂಬಾಕು ಬೆಳೆಗಾರರ ನಿಯೋಗ ದೆಹಲಿಗೆ

• **ಉದಯವಾಹಿನಿ, ಹುಣಸೂರು**

ತಂಬಾಕಿಗೆ ಸೂಕ್ತ ದರ ಸಿಗದೆ ರೈತರು ಹತಾಶೆಯಾಗಿದ್ದು, ಸೂಕ್ತ ದರ ಕೊಡಿಸಲು ರಾಜ್ಯ ತಂಬಾಕು ಬೆಳೆಗಾರ ನಿಯೋಗದೊಂದಿಗೆ ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿ ಮಾಡಲು ಬದ್ಧ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದ್ದಾರೆ ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್ ತಿಳಿಸಿದ್ದಾರೆ. ಮೈಸೂರಿನಲ್ಲಿ ತಮ್ಮನ್ನು ಭೇಟಿಯಾದ ತಂಬಾಕು ಬೆಳೆಗಾರರ ನಿಯೋಗದ ಮನವಿ ಸ್ವೀಕರಿಸಿ ಅವರು ಪ್ರತಿಕ್ರಿಯಿಸಿದರು. ನಿಯೋಗ ಕೊಂಡೊಯ್ದು ಡಿ. 25 ರೊಳಗಾಗಿ ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿ ಮಾಡಲಾಗುವುದು. ಪ್ರಸಕ್ತ ಸಾಲಿನಲ್ಲಿ ರೈತರಿಗೆ ತಂಬಾಕು ಹರಾಜು ಮಂಡಳಿಯಲ್ಲಿ ಸಿಗುತ್ತಿರುವ ದರ ಕುರಿತ ವಿವರಿಸಿ ವೈಜ್ಞಾನಿಕ ದರ ಸಿಗುವಂತೆ ಮಾರುಕಟ್ಟೆ ಅಧಿಕಾರಿಗಳಿಗೆ ಸೂಚಿಸುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

**ಧರಣಿ:** ಸಂಸದರು ಭರವಸೆ ನೀಡಿದ್ದು, ವೈಜ್ಞಾನಿಕ ದರ ಸಿಗುವವರೆಗೂ ಧರಣಿ ನಡೆಯಲಿದೆ ಎಂದರು. ರಾಜ್ಯದಲ್ಲಿ 80 ಮಿಲಿಯನ್ ಕೆ.ಜಿ. ತಂಬಾಕು ಬೆಳೆದಿದ್ದು, ಈ ಪೈಕಿ 20 ರಿಂದ 22 ಮಿಲಿಯನ್ ಕೆ.ಜಿ. ತಂಬಾಕು ಮಾರಾಟವಾಗಿದೆ. ಉಳಿದಂತೆ 50 ರಿಂದ 60 ಮಿಲಿಯನ್ ಕೆ.ಜಿ. ತಂಬಾಕು ರೈತರ ಬಳಿ ಇದ್ದು, ಸೂಕ್ತ ದರ ಸಿಗಬೇಕು ಎಂದರು.



ನೆರೆಯ ರಾಜ್ಯ ಆಂದ್ರ ಪ್ರದೇಶದಲ್ಲಿ ಬೆಳೆದ ತಂಬಾಕಿಗೆ ಪ್ರತಿ ಕೆ.ಜಿ.ಗೆ ರೂ. 420 ಸಿಕ್ಕಿದ್ದು, ರಾಜ್ಯದಲ್ಲಿ ಆಂದ್ರಪ್ರದೇಶಕ್ಕಿಂತಲೂ ಉತ್ತಮ ಗುಣಮಟ್ಟದ ತಂಬಾಕಿಗೆ ಏಕೆ ರೂ. 300 ರಿಂದ ರೂ.320 ಮಾತ್ರ ನೀಡುತ್ತಿದ್ದಾರೆ ರಾಜ್ಯದ ತಂಬಾಕು ಸಿಗರೇಟ್ ಕಂಪನಿಗಳಿಗೆ ಬೇಡಿಕೆ ಇದ್ದರೂ ಮಾರುಕಟ್ಟೆ ಮೇಲೆ ಕಂಪನಿಗಳ ವ್ಯವಸ್ಥಿತಿ ಹಿಡಿತದಿಂದಾಗಿ ದರ ವೈಜ್ಞಾನಿಕವಾಗಿ ಸಿಗುತ್ತಿಲ್ಲ ಎಂದು ತಂಬಾಕು ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಮೋದೂರು ಶಿವಣ್ಣ ಹೇಳಿದರು.

# ಲೋಕ ಅದಾಲತ್‌ನಲ್ಲಿ ಒಂದಾದ ದಂಪತಿ!


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚನ್ನಪಟ್ಟಣ**

ಕಳೆದ ಒಂಬತ್ತು ವರ್ಷಗಳ ಹಿಂದೆ ವಿವಾಹ ವಿಚ್ಛೇದನ ಪಡೆಯಲು ನ್ಯಾಯಾಲಯದ ಮೆಟ್ಟಿಲೇರಿದ್ದ ದಂಪತಿಯೊಂದು ಚನ್ನಪಟ್ಟಣದ ಸಿವಿಲ್ ನ್ಯಾಯಾಲಯದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಪರಸ್ಪರ ಒಪ್ಪಿಗೆ ಮೇರೆಗೆ ಒಂದಾದರು.ತಾಲ್ಲೂಕಿನ ಕೋಡಂಬಹಳ್ಳಿ ದಂಪತಿ ಪುಷ್ಪಲತಾ ಹಾಗೂ ಲೋಕೇಶ್ ಕೆಲ ಭಿನ್ನಾಭಿಪ್ರಾಯಗಳಿಂದಾಗಿ ಕಳೆದ ಒಂಬತ್ತು ವರ್ಷಗಳ ಹಿಂದೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅಂದಿನಿಂದ ಪ್ರಕರಣ ನ್ಯಾಯಾಲಯದಲ್ಲಿತ್ತು.

ನ್ಯಾಯಾಲಯಕ್ಕೆ ಹಾಜರಾದ ದಂಪತಿ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಕೆ.ಸಂದೇಶ್ ಸಮ್ಮುಖದಲ್ಲಿ ತಮ್ಮ ಎಲ್ಲಾ ಭಿನ್ನಾಭಿಪ್ರಾಯ ಮರೆತು ಜೊತೆಯಾಗಿ ಸಂಸಾರ ನಡೆಸಲು ಸಮ್ಮತಿಸಿದರು.

ಅಂತಿಮವಾಗಿ ದಂಪತಿ ಪರಸ್ಪರ ಸಿಹಿ ತಿನ್ನಿಸುವ ಮೂಲಕ ಪ್ರಕರಣ ಸುಖಾಂತ್ಯ ಕಂಡಿತು. ನ್ಯಾಯಾಧೀಶರು ಹಾಗೂ ವಕೀಲರು ದಂಪತಿಗೆ ಹೂಮಾಲೆ ಹಾಕಿ ಅಭಿನಂದಿಸಿದರು. ವಕೀಲರಾದ ಎಂ.ಎಸ್.ಬಸವರಾಜು, ಆರ್.ಧರ್ಮೇಂದ್ರಕುಮಾರ್, ಭೋಜೇಗೌಡ, ಧನಂಜಯ, ಪ್ರಸನ್ನ, ಸುನೀಲ್, ರವಿಶಂಕರ್, ಶಿವರಾಜು, ಇತರರು ಹಾಜರಿದ್ದರು.

# ಜೆಜೆಎಂಗೆ ಕಳಪೆ ಸಾಮಗ್ರಿ: ಸಾರ್ವಜನಿಕರ ಆಕ್ರೋಶ

• **ಉದಯವಾಹಿನಿ, ಬಂಗಾರಪೇಟೆ**

ಮನೆ ಮನೆಗೂಶುದ್ಧ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಜಲ ಜೀವನ್ ಮಿಷನ್ ಯೋಜನೆ ಜಾರಿಗೊಳಿಸಿದ್ದು, ಅದಕ್ಕೆ ಬಳಸಿರುವ ಸಾಮಾಗ್ರಿಗಳು ಕಳಪೆ ಗುಣಮಟ್ಟದಿಂದ ಕೂಡಿವೆ. ಜೊತೆಗೆ ಪೈಪ್‌ಲೈನ್ ಅಳವಡಿಕೆಗೆ ತೋಡಿರುವ ಗುಂಡಿಗಳು ಮುಚ್ಚದೆ ಬಿಟ್ಟಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದೆ. ಜೆಜೆಎಂ ಮಿಷನ್ ಯೋಜನೆಯಲ್ಲಿ ಅಳವಡಿಸಿರುವ ಪೈಪ್ ಕನಿಷ್ಠ 35 ವರ್ಷ ಬಾಳಿಕೆ ಬರಬೇಕು. ಆದರೆ, ಅನೇಕ ಕಡೆ ಎರಡೂರು ವರ್ಷಗಳಲ್ಲೇ ನಾಶವಾಗುವಂತಾಗಿವೆ.

ಮಾರ್ಗಸೂಚಿ ಪ್ರಕಾರ ಪೈಪ್ ಅಳವಡಿಕೆಗೆ ಮೂರು ಅಡಿ ಆಳ ಕಾಲುವೆ ತೆಗೆಯಬೇಕು. ಆದರೆ, ಕೆಲವು ಕಡೆ 1.5 ಅಡಿ ಆಳದಲ್ಲೇ ಪೈಪ್ ಹಾಕಿ ಮುಚ್ಚಲಾಗಿದೆ. ಇದರಿಂದ ರಸ್ತೆಯಲ್ಲಿ ಬೃಹತ್ ಗಾತ್ರದ ವಾಹನಗಳು ಸಂಚರಿಸಿದರೆ ಪೈಪ್‌ಲೈನ್ ಹಾನಿಯಾಗುವ ಸಾಧ್ಯತೆ ಹೆಚ್ಚಿದೆ. ಕಬ್ಬಿಣದ ಪೈಪ್‌ಗಳ ಗುಣಮಟ್ಟವೂ ತೀರಾ ಕಳಪೆಯಾಗಿದ್ದು, ಬೇಗನೆ ತುಕ್ಕು ಹಿಡಿಯುತ್ತಿವೆ. ಜೊತೆಗೆ ಪೈಪ್ ಅಳವಡಿಕೆಗೆ ತೋಡಿರುವ ಗುಂಡಿಗಳನ್ನು ಕೆಲವೆಡೆ ಮುಚ್ಚದ ರಸ್ತೆಗಳು ತೀರಾ ಹದಗೆಟ್ಟಿವೆ. ಓವರ್ ಹೆಡ್ ಟ್ಯಾಂಕ್ ನಿರ್ಮಾಣದಲ್ಲಿ ಗುಣಮಟ್ಟದ ಕೊರತೆ ಇದೆ. ಟ್ಯಾಪ್ ಅಳವಡಿಸಲು ಹಾಕಲಾದ ಸಿಮೆಂಟ್ ಕಂಬ, ಫೌಂಡೇಶನ್ ಕಳಪೆಯಾಗಿದ್ದು ನೀರು ಬರುವ ಮುನ್ನವೇ ಮುರಿದು ಬೀಳುತ್ತಿವೆ. ಕಾಮಗಾರಿ ಮುಗಿದ ಕೆಲವೇ ದಿನಗಳಲ್ಲಿ ಟ್ಯಾಂಕ್‌ನ ಗೋಡೆಗಳು ಮತ್ತು ತಳಪಾಯದಲ್ಲಿ ಬಿರುಕು ಕಾಣಿಸಿಕೊಂಡಿವೆ. ಇದರಿಂದ ನೀರು ಸೋರಿಕೆಯಾಗುತ್ತಿದೆ ಎಂಬುದು ಸಾರ್ವಜನಿಕರ ಆರೋಪವಾಗಿದೆ. ಕೆಲವೆಡೆ ರಸ್ತೆಯನ್ನು ಗುಣಮಟ್ಟದ ಕಾಂಕ್ರೀಟ್ ಅಥವಾ ಜಲ್ಲಿ ಬಳಸದೆ ಕೇವಲ ಮಣ್ಣು, ಕಳಪೆ ಮಿಶ್ರಣ ಬಳಸಿ ಗುಂಡಿ ಮುಚ್ಚಿದ್ದಾರೆ. ಇನ್ನೂ ಕೆಲವು ಕಡೆ ರಸ್ತೆಗಳಲ್ಲಿ ದೊಡ್ಡ ಗುಂಡಿಗಳು, ಅಗೆದ ಮಣ್ಣಿನ ರಾಶಿಗಳು ಉಳಿದಿದ್ದು ದ್ವಿಚಕ್ರ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಅಪಘಾತ ಸಂಭವಿಸುವ ಸಾಧ್ಯತೆಗಳು ಹೆಚ್ಚಿವೆ. ಜೊತೆಗೆ ಗುಂಡಿ ಮುಚ್ಚದ ಮಣ್ಣು ಗಾಳಿಯಲ್ಲಿ ಹಾರಿ ಮನೆ ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೂ ಪ್ರಭಾವ ಬೀರಿದೆ. ಸರಿಯಾದ ಸಮಯಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕು. ಸರ್ಕಾರವು ಗುತ್ತಿಗೆದಾರರಿಗೆ ಸ್ಪಷ್ಟ ಗಡುವು ನೀಡಬೇಕು.


ಉದಯವಾಹಿನಿ ಚಿತ್ರ

ಕಾಮಗಾರಿ ಪೂರ್ಣಗೊಳಿಸದವರಿಗೆ ದಂಡ ವಿಧಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಗುಂಡ್ಲುಪೇಟೆ – ಮೈಸೂರು ಹೆದ್ದಾರಿಯಲ್ಲಿ ಅಪಘಾತ ಹೆಚ್ಚಳ


## ಈ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದರೆ ತುರ್ತು ಚಿಕಿತ್ಸೆ ಕೊಡಿಸಲು ಹತ್ತಿರದಲ್ಲಿ ದೊಡ್ಡ ಆಸ್ಪತ್ರೆಗಳಿಲ್ಲ

• **ಉದಯವಾಹಿನಿ, ಚಾಮರಾಜನಗರ**

ಹೆಚ್ಚಿನ ಅಪಘಾತಗಳು ಸಂಭವಿಸುತ್ತಲೇ ಇರುವ ಗುಂಡ್ಲುಪೇಟೆ-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸನಿಹದಲ್ಲಿ ಟ್ರಾಮಾಕೇರ್ ಸೆಂಟರ್ ಸ್ಥಾಪಿಸಬೇಕೆಂಬ ಒತ್ತಾಯ ಕೇಳಿ ಬಂದಿದೆ.

ಗುಂಡ್ಲುಪೇಟೆಯಿಂದ ನಂಜನಗೂಡು ಮಾರ್ಗವಾಗಿ ಮೈಸೂರಿಗೆ ಸಂಪರ್ಕ ಕಲ್ಪಿಸುವ ಈ ಹೆದ್ದಾರಿಯು ಕೇರಳ, ತಮಿಳುನಾಡಿಗೂ ಸಂಪರ್ಕ ಬೆಸೆಯುತ್ತದೆ. ಹೀಗಾಗಿ ನಿತ್ಯ ಸಾವಿರಾರು ವಾಹನಗಳ ಓಡಾಟ ಇದ್ದೇ ಇದೆ. ಗುಂಡ್ಲುಪೇಟೆಯಿಂದ ನಂಜನಗೂಡು ತನಕ ಈ ಹೆದ್ದಾರಿ ಕಿರಿದಾಗಿದ್ದು, ಅಪಘಾತಗಳು ಆಗಾಗ ಸಂಭವಿಸುತ್ತಲೇ ಇರುತ್ತವೆ.

**ಚಿಕಿತ್ಸೆ ವಿಳಂಬ:** ಹೀಗೆ ಅಷ್ಟು ದೂರ ಕರೆದೊಯ್ಯುವಷ್ಟರಲ್ಲಿ ಚಿಕಿತ್ಸೆ ವಿಳಂಬದಿಂದಾಗಿ ಗಾಯಾಳುವಿನ ಜೀವಕ್ಕೆ ಕುತ್ತಾಗಬಹುದು. ಸದ್ಯ ಈಗ ಅಂಥ ದುರ್ಘಟನೆಗಳೇ ಹೆಚ್ಚಾಗಿ ಸಂಭವಿಸುತ್ತಿವೆ. ಆದ್ದರಿಂದ ಸಮೀಪದಲ್ಲೇ ಟ್ರಾಮಾ ಸೆಂಟರ್ ಇದ್ದರೆ ಗಾಯಾಳುಗಳನ್ನು ಉಳಿಸಿ ಕೊಳ್ಳಬಹುದು ಎಂಬುದು ಪ್ರಜ್ಞಾವಂತರ ಒತ್ತಾಯವಾಗಿದೆ. ಟ್ರಾಮಾ ಸೆಂಟರ್‌ನ


ಉದಯವಾಹಿನಿ ಚಿತ್ರ

**ಹೆದ್ದಾರಿಗೆ ಬೇಕು ಟ್ರಾಮಾ ಸೆಂಟರ್**

**ಇದರಿಂದ ಸಾವು, ನೋವುಗಳ ಸಂಖ್ಯೆ ಸಹ ನಡೆಯುತ್ತಲೇ ಇದೆ. ಆದ್ದರಿಂದ ಅಪಘಾತ ಸಂದರ್ಭದಲ್ಲಿಗಾಯಾಳುಗಳಿಗೆ ತಕ್ಷಣಕ್ಕೆ ತುರ್ತು ಹಾಗೂ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸಲು ಟ್ರಾಮಾ ಸೆಂಟರ್ ಅತ್ಯಗತ್ಯವಾಗಿದೆ. ಈ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದರೆ ತುರ್ತು ಚಿಕಿತ್ಸೆ ಕೊಡಿಸಲು ಹತ್ತಿರದಲ್ಲಿ ದೊಡ್ಡ ಆಸ್ಪತ್ರೆಗಳಿಲ್ಲ. ಇರುವ ತಾಲ್ಲೂಕು ಆಸ್ಪತ್ರೆಗಳಲ್ಲಿಅಗತ್ಯ ತುರ್ತು ಚಿಕಿತ್ಸೆಯ ಸೌಲಭ್ಯಗಳು ಇರುವುದಿಲ್ಲ. ಆದ್ದರಿಂದ ಮೈಸೂರು ಅಥವಾ ಚಾಮರಾಜನಗರದ ಆಸ್ಪತ್ರೆಗಳಿಗೆ ಕರೆದೊಯ್ಯಬೇಕಾದ ಅನಿವಾರ್ಯತೆ ಇದೆ.**

ಅನಿವಾರ್ಯತೆ: ಅಪಘಾತಗಳಲ್ಲಿ ತೀವ್ರ ಪೆಟ್ಟಾದ ಗಾಯಾಳುಗಳಿಗೆ ಕ್ರಿಟಿಕಲ್ ಟೈಮ್ ಪೀರಿಯಡ್‌ನಲ್ಲೇ ಹೈಎಂಡ್ ಚಿಕಿತ್ಸೆ ದೊರೆಯಬೇಕು.

ಅಪಘಾತ ಸಂಭವಿಸಿದ 30 ನಿಮಿಷದೊಳಗಿನ ಗೋಲ್ಡನ್ ಅವರ್‌ನಲ್ಲಿಗಾಯಾಳುವಿಗೆ ತುರ್ತು ಚಿಕಿತ್ಸೆ ನೀಡುವುದು ಬಹಳ ಮುಖ್ಯ. ಇದರಿಂದ ಗಾಯಾಳುಗಳ ಜೀವ ಉಳಿಯಲಿದೆ. ನಂತರ ಬೇರೆ ಯಾವ ಆಸ್ಪತ್ರೆಗೆ ಬೇಕಾದರೂ ಕರೆದೊಯ್ಯಬಹುದು. ಆದ್ದರಿಂದ ಗುಂಡ್ಲುಪೇಟೆ- ಬೇಗೂರು ಹೆದ್ದಾರಿ ಮಾರ್ಗದಲ್ಲಿ ಟ್ರಾಮಾ ಕೇರ್ ಸೆಂಟರ್ ನಿರ್ಮಿಸಿ, ತಜ್ಞ ವೈದ್ಯರನ್ನು ನೇಮಕ ಮಾಡಬೇಕೆಂಬ ಒತ್ತಾಯವಿದೆ. ಈ ಹೆದ್ದಾರಿಯಿಂದ ಕಾಲೋನಿ ಪ್ರವೇಶಿಸುತ್ತಿದ್ದಂತೆ ದಿನಕ್ಕೆ ಒಂದಿಲ್ಲೊಂದು ಅಪಘಾತಗಳು ಸಂಭವಿಸುವುದು ಗ್ಯಾರಂಟಿ ಎಂಬಂತಾಗಿದೆ. ಈಗಾಗಲೇ ಈ ರಸ್ತೆಯಲ್ಲಿಸುಮಾರು 5ಜನರು ಅಪಘಾತದಿಂದ ಮೃತಪಟ್ಟ ಉದಾಹರಣೆಗಳಿವೆ. ಇದರಿಂದಾಗಿ ಬಡಾವಣೆಯ ಜನತೆ ಭಯಭೀತರಾಗಿದ್ದಾರೆ. ರಾಷ್ಟ್ರೀಯ ಹೆದ್ದಾರಿಯ ಪ್ರಾಧಿಕಾರದವರು ಸುಳಿವಿಲ್ಲದಂತಿದ್ದರೂ, ನಗರಸಭೆಯಾಗಲಿ, ಲೋಕೋಪಯೋಗಿ ಇಲಾಖೆಯವರಾಗಲಿ ಈ ರಸ್ತೆ ದಾಟಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಬಡಾವಣೆ ಜನರ ಕೋರಿಕೆಯಾಗಿದೆ. ಈ ಹೆದ್ದಾರಿಯಲ್ಲಿ ವಾಹನಗಳು ಅತ್ಯಂತ ವೇಗವಾಗಿ ಸಂಚರಿಸುತ್ತಿವೆ. ಬಡಾವಣೆ ಇವೆ ಎಂಬ ಕನಿಷ್ಠ ಪ್ರಜ್ಞೆಯು ಕೂಡಾ ಇರುವುದಿಲ್ಲ. ಕೂಡಲೇ ಸಂಬಂಧಿಸಿದ ಇಲಾಖೆಯವರು ಈ ಹೆದ್ದಾರಿಯಲ್ಲಿ ನಾಗರೀಕರ ಹಿತ ರಕ್ಷಣೆಯನ್ನು ಪರಿಗಣಿಸಿ ವೇಗ ನಿಯಂತ್ರಣಕ್ಕೆ ಉಬ್ಬು ರಸ್ತೆ ನಿರ್ಮಾಣ ಮಾಡಬೇಕು.

ಈ ಮೂಲಕ ಜನರ ಜೀವನ ಕಾಪಾಡಬೇಕು ಎಂಬುದು ಸ್ಥಳೀಯರ ಒತ್ತಾಯವಾಗಿದೆ. ಇಲ್ಲವಾದರೆ ಬಡಾವಣೆಯ ಜನರು ಹೆದ್ದಾರಿ ಬಂದ್ ಪ್ರತಿಭಟನೆಯ ಹಾದಿ ತುಳಿಯುವುದು ಗ್ಯಾರಂಟಿ ಎನ್ನುತ್ತಿದ್ದಾರೆ.

### ಮಾರಣಾಂತಿಕ ರಸ್ತೆ: ದಿನಕ್ಕೊಂದು ಅಪಘಾತ

**ಇದು ಹೇಳಿ ಕೇಳಿ ರಾಷ್ಟ್ರೀಯ ಹೆದ್ದಾರಿ(150ಎ). ಪ್ರತಿ ದಿನ ಸಾವಿರಾರು ಬೃಹತ್ ವಾಹನಗಳ ಸಂಚಾರ. ಈ ಹೆದ್ದಾರಿ ನಗರ ಪ್ರವೇಶಿಸುವ ಮುನ್ನವೇ ದಿನಕ್ಕೆ ಒಂದಿಲ್ಲೊಂದು ಅಪಘಾತ ನಡೆಯುತ್ತಿದೆ. ಹತ್ತಿರದ ಬಡಾವಣೆಯ ಜನತೆ ಭಯದಲ್ಲಿ ಸಂಚರಿಸುವಂತಾಗಿದೆ. ಇಷ್ಟಾದರೂ ಹೆದ್ದಾರಿ ಪ್ರಾಧಿಕಾರವಾಗಲಿ, ನಗರ ವ್ಯಾಪ್ತಿಯ ಅಧಿಕಾರಿಗಳಾಗಲಿ ಕ್ಯಾರೆ ಎನ್ನುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿತೆಗೆದುಕೊಳ್ಳಬಹುದಾದ ಕಟ್ಟುನಿಟ್ಟಿನ ಕ್ರಮವೈ ಕೈಗೊಂಡಿಲ್ಲ. ಉಬ್ಬು ರಸ್ತೆ ನಿರ್ಮಾಣ ಮಾಡಿಲ್ಲ. ಹೀಗಾಗಿಯೇ ನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಕೂಡಲೇ ಅಪಘಾತ ವಲಯ (ಬ್ಲಾಕ್‌ಸ್ಪಾಟ್) ಘೋಷಣೆ ಮಾಡಬೇಕು ಎಂಬುದು ಸ್ಥಳೀಯರ ಆಗ್ರಹವಾಗಿದೆ. ನಗರದಿಂದ ಹತ್ತಿರದ ಭೀಗುಡಿ ಮೂಲಕ ಮುಂದೆ ಕಲಬುರಗಿ ಹಾಗು ವಿಜಯಪುರದ ಕಡೆಗೆ ತೆರಳುವ ಮಾರ್ಗ ಮಧ್ಯೆದಲ್ಲಿರುವ ಹೆದ್ದಾರಿಗೆ ಹೊಂದಿಕೊಂಡಂತೆ ಅನೇಕ ಬಡಾವಣೆಯು ಸೇರಿ ನೂರಾರು ನಿವಾಸಿಗಳಿರುವ ಎನ್‌ಜಿಒ ಕಾಲೋನಿ ಇದೆ. ದಿನಂಪ್ರತಿ ಕಾಲೊನಿಯ ನೂರಾರು ಜನರು ಇದೇ ರಸ್ತೆ ಮೂಲಕ ಸಂಚರಿಸುವ ಅನಿವಾರ್ಯತೆ ಇದೆ.**

# ಮಿನಿ ನ್ಯೂಸ್

## ಕೆರೆಗೆ ನೀರು ತುಂಬಿಸಲು ಚಾಲನೆ

• **ಉದಯವಾಹಿನಿ, ಹಂಪಾಪುರ**

ಶೀಂಡೇನಹಳ್ಳಿ ಸೇರಿದಂತೆ ಅಕ್ಕಪಕ್ಕದ ಆರು ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ಕೆ ಅಧಿಕಾರಿಗಳು ಚಾಲನೆ ನೀಡಿದ್ದಾರೆ.

ಹಂಪಾಪುರ ಹೋಬಳಿ ವ್ಯಾಪ್ತಿಯಲ್ಲಿ ಒಟ್ಟು 17 ಕೆರೆಗಳಿದ್ದು, ಅದರಲ್ಲಿ 11 ಕೆರೆಗಳಿಗೆ ಮಾತ್ರ ನೀರು ತುಂಬಿಸಿದ್ದು ಉಳಿದ ಆರು ಕೆರೆಗಳಿಗೆ ತುಂಬಿಸದ ಕಾರಣ ರೈತರಿಗೆ ತೊಂದರೆ ಆಗಿದೆ ಎಂದು ಪ್ರಕಟಿಸಲಾಗಿತ್ತು. ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಕೆರೆಗಳನ್ನು ತುಂಬಿಸಲು ಮುಂದಾಗಿದ್ದಾರೆ. ಕೆರೆಯನ್ನು ಸಂಪೂರ್ಣ ತುಂಬಿಸಲು ಕ್ರಮ ಕೈಗೊಂಡಿದ್ದೇವೆ, ಈ ಸಂಬಂಧ ರೈತರು ಪ್ರತಿಭಟನೆ ಮಾಡಬಾರದು ಎಂದು ಗ್ರಾಮಸ್ಥರಲ್ಲಿ ಅಧಿಕಾರಿಗಳು ಮನವಿ ಮಾಡಿದ್ದಾರೆ. ಶೀಂಡೇನಹಳ್ಳಿ ಯತೀಶ್ ಮಾತನಾಡಿ, ನಾವು ಪ್ರತಿಭಟನೆ ಮಾಡುತ್ತೇವೆ ಎಂದು ಪತ್ರಿಕೆಯಲ್ಲಿ ಬಂದ ಬಳಿಕ ಗ್ರಾಮದ ಕೆರೆಗೆ ನೀರನ್ನು ಹರಿಸಿದ್ದಾರೆ. ಗ್ರಾಮದ ಕೆರೆ ಸಂಪೂರ್ಣವಾಗಿ ತುಂಬುವವರೆಗೂ ಮತ್ತು ಉಳಿದ ಅಕ್ಕಪಕ್ಕದ ಗ್ರಾಮಗಳು ಭರ್ತಿಯಾಗುವವರೆಗೂ ಸಹ ನಮ್ಮ ಪ್ರತಿಭಟನೆಯ ತೀರ್ಮಾನವನ್ನು ಹಿಂಪಡೆಯುವುದಿಲ್ಲ ಎಂದು ತಿಳಿಸಿದರು.

## ಸಹಕಾರ ಸಪ್ತಾಹ ಚರ್ಚಾ ಸ್ಪರ್ಧೆ

• **ಉದಯವಾಹಿನಿ, ಶಿಡ್ಲಘಟ್ಟ**

ಸಹಕಾರ ಸಪ್ತಾಹದ ಅಂಗವಾಗಿ ಕರ್ನಾಟಕ ರಾಜ್ಯ ಸಹಕಾರು ಮಹಾ ಮಂಡಳ ಮತ್ತು ಜಿಲ್ಲಾ ಸಹಕಾರ ಒಕ್ಕೂಟದಿಂದ ಸಪ್ತಾಹದ ಕುರಿತು ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ರಾಯಲ್ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜಿನ ವಿದ್ಯಾರ್ಥಿನಿ ವೈ.ಎಂ. ಗಾನವಿ ದ್ವಿತೀಯ ಬಹುಮಾನ ಪಡೆದಿದ್ದಾರೆ. ಮುಖ್ಯೋಪಾಧ್ಯಾಯ ಮಂಜುನಾಥ್ ಮಾತನಾಡಿ ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗಬಾರದು. ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚು ಮಹತ್ವ ನೀಡಬೇಕು. ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಪರಿಪೂರ್ಣವಾಗಿ ರೂಪಿಸಲು ಸಹಕಾರಿಯಾಗಿವೆ ಎಂದು ಹೇಳಿದರು. ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಯನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಢರನ್ನಾಗಿಸುತ್ತವೆ ಎಂದರು. ಶಾಲಾ ಕಾಲೇಜು ಮಕ್ಕಳಲ್ಲಿ ಸಹಕಾರ ವ್ಯವಸ್ಥೆ ಬಗ್ಗೆ ಜಾಗೃತಿ ಮೂಡಿಸಲು ಸಹಕಾರ ಮಹಾ ಮಂಡಳವು ಚರ್ಚಾ ಸ್ಪರ್ಧೆ ಹಮ್ಮಿಕೊಂಡಿತ್ತು. ಶಾಲಾ ಆಡಳಿತ ಮಂಡಳಿ, ಸಿಬ್ಬಂದಿ ಹಾಜರಿದ್ದರು.

## ನನ್ನ ಗೆಲುವಿಗೆ ಕಾಂಗ್ರೆಸ್ ನಾಯಕರೂ ಸಹಕರಿಸಿದ್ದಾರೆ–ಸೋಮಣ್ಣ

• **ಉದಯವಾಹಿನಿ, ತುಮಕೂರು**


ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ನಾಯಕರಂತೆ ಕಾಂಗ್ರೆಸ್ ನಾಯಕರು ಕೂಡ ನನಗೆ ಸಹಕಾರ ನೀಡಿದ್ದಾರೆ ಎಂದು ಸಂಸದ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ನಗರದ ಹೊರವಲಯದ ಹೆಗ್ಗೆರೆಯಲ್ಲಿ ರೈಲ್ವೆ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ ಅವರು. ತುಮಕೂರು ಲೋಕಸಭಾ ಕ್ಷೇತ್ರದ ಚುನಾವಣೆ ಉಸ್ತುವಾರಿ ಆಗಿದ್ದ ಸಚಿವ ಜಿ.ಪರಮೇಶ್ವರ ಸಮ್ಮುಖದಲ್ಲಿಯೇ ಈ ರಹಸ್ಯ ಬಹಿರಂಗಪಡಿಸಿದರು. ಸಚಿವ ಪರಮೇಶ್ವರ ಮುಂದಿನ ಮುಖ್ಯಮಂತ್ರಿಯಾಗಲಿ ಎಂದು ಹಾರೈಸುತ್ತಲೇ, ನನ್ನ ಗೆಲುವಿಗೆ ಕಾಂಗ್ರೆಸ್ ನಾಯಕರು ಕಾರಣರಾಗಿದ್ದಾರೆ ಎಂದರು. ಪಕ್ಕದಲ್ಲಿದ್ದ ಶಾಸಕ ಬಿ.ಸುರೇಶ್ ಗೌಡ, ಡಿ.ಕೆ.ಶಿವಕುಮಾರ್ ಏನಾಗಬೇಕು ಎಂದು ಪ್ರಶ್ನಿಸಿದರು. ಅದೆಲ್ಲ ಸೆಕೆಂಡರಿ. ಅವರ ನಡವಳಿಕೆಯೂ ಬೇಕಲ್ಲ ಎಂದು ಹೇಳಿ ವಿಷಯಾಂತರ ಮಾಡಿದರು.

## ಹೆಲ್ಮೆಟ್ ಕಡ್ಡಾಯ ಮುಲಾಜಿಲ್ಲದೆ ದಂಡ ವಸೂಲಿ

• **ಉದಯವಾಹಿನಿ, ಬೇತಮಂಗಲ**

ಹೆಲ್ಮೆಟ್ ಹಾಕದೆ ರಸ್ತೆಗಿಳಿದ ದ್ವಿಚಕ್ರ ವಾಹನ ಸವಾರರಿಗೆ ಬೇತಮಂಗಲ ಪೊಲೀಸರು ಚುಮುಚುಮು ಚಳಿಯಲ್ಲಿ ದಂಡದ ಬಿಸಿ ಮುಟ್ಟಿಸಿದರು. ಪೊಲೀಸ್ ಇಲಾಖೆಯಿಂದ ವತಿಯಿಂದ ಸುಮಾರು 10–15 ದಿನಗಳಿಂದ ಹೆಲ್ಮೆಟ್ ಕಡ್ಡಾಯದ ಕುರಿತು ಜಾಗೃತಿ ಮೂಡಿಸಿ. ಡಿ.8ರಿಂದ ಹೆಲ್ಮೆಟ್ ಕಡ್ಡಾಯಗೊಳಿಸಿದ್ದರು. ಆದರೂ ನಿರ್ಲಕ್ಷ್ಯ ತೋರುವವರಿಗೆ ದಂಡ ವಿಧಿಸಲಾಗಿದೆ. ಬೇತಮಂಗಲ ಪೊಲೀಸ್ ಠಾಣೆ ಪಿಎಸ್‌ಐ ಗುರುರಾಜ್ ಚಿಂತಕಲ್ ನೇತೃತ್ವದಲ್ಲಿ ಬೀದಿಗಿಳಿದ ಪೊಲೀಸರ ತಂಡವು ಯಾವುದೇ ಪಕ್ಷದ ನಾಯಕರು, ಪೊಲೀಸರು. ಮಾಧ್ಯಮದವರು, ಅಧಿಕಾರಿಗಳು ಯಾರಿಗೂ ಮುಲಾಜಿಲ್ಲದೆ ದಂಡ ವಿಧಿಸಿದರು.

## ಕೆರೆಯ ಹೂಳು ತೆಗೆಯುವ ಕಾಮಗಾರಿಗೆ ಎಂ.ಆರ್.ಮಂಜುನಾಥ್ ಚಾಲನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹನೂರು**

ತಾಲ್ಲೂಕಿನ ಹಾಲೇರಿ ಕೆರೆಯ ಹೂಳು ತೆಗೆಯುವ ಕಾಮಗಾರಿಗೆ ಶಾಸಕ ಎಂ.ಆರ್.ಮಂಜುನಾಥ್ ಚಾಲನೆ ನೀಡಿದರು.ಹಾಲೇರಿ ಕೆರೆ ಅಭಿವೃದ್ಧಿಪಡಿಸುವುದರಿಂದ ಜನರಿಗೆ, ಜಾನುವಾರುಗಳಿಗೆ ನೀರಾವರಿ ಅನುಕೂಲವಾಗಲಿದೆ. ಮಲೆ ಮಹದೇಶ್ವರ ವನ್ಯಧಾಮದ ರಾಮಾಪುರ ವಲಯಕ್ಕೆ ಸೇರಿರುವ ಅರಣ್ಯ ಪ್ರದೇಶದ ಮಾರ್ಟಳ್ಳಿಯ ಈ ಕೆರೆಗೆ ಅರಣ್ಯ ಇಲಾಖೆಯ ಅನುದಾನದಲ್ಲಿ ರೂ.30 ಲಕ್ಷ ವೆಚ್ಚದಲ್ಲಿ ಹೂಳು ತೆಗೆಯಲು ಜೆಸಿಬಿ ಮೂಲಕ ಚಾಲನೆ ನೀಡಲಾಗುತ್ತಿದೆ ಎಂದರು.

ಮಾರ್ಟಳ್ಳಿ ತಾಂಡಾಮೇಡು, ಕೋಟೆ ಪೊದೆ, ಮೇಟುತ್ತೇರು, ಸುಳ್ವಾಡಿ, ಸಂದನ ಪಾಳ್ಯ ಹಾಗೂ ಸುತ್ತಲಿನ ಜನ ಜಾನುವಾರುಗಳಿಗೆ ರೈತರಿಗೆ ಹಾಲೇರಿ ಕೆರೆ ನೀರು ಬಳಕೆಯಾಗಲಿದೆ. ಅಂತರ್ಜಾಲ ಮಟ್ಟವು ಹೆಚ್ಚಾಗಲಿದೆ ಎಂದರು. ಪಂಚಾಯಿತಿ ಮಾಜಿ ಉಪಾಧ್ಯಕ್ಷ ರಾಮಲಿಂಗ, ಸದಸ್ಯರಾದ ಸೆಲ್ವಂ, ಗೋವಿಂದರಾಜು, ಮಾಜಿ ಸದಸ್ಯರಾದ ಹರಿ. ಲೋಕೇಶ್, ಮಾಜಿ ಸೈನಿಕ ಜೋಸೆಫ್, ಸೀನಪ್ಪ, ತಂಗವೇಲು, ಸೆಂಥಿಲ್, ಸಮನ್ಸ್, ಬೋಸ್ಕೊ, ಬಾಲಯ್ಯ ಭಾಗವಹಿಸಿದ್ದರು.

ಅಂತರಾಳದಿಂದ... EDITORIAL

# ಯುಪಿಎ ಹೆತ್ತ ಕೂಸಿಗೆ ಬಾಪು ಆಗಲು ಹೊರಟ ಎನ್‌ಡಿಎ

ಯುಪಿಎ ಸರಕಾರದ ಅವಧಿಯಲ್ಲಿ ಜಾರಿಗೊಂಡ ಮಹತ್ವದ ಯೋಜನೆಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ(ನರೇಗಾ)ಯೂ ಒಂದು. ವಿಶ್ವದಲ್ಲೇ ಅತಿ ದೊಡ್ಡ ಉದ್ಯೋಗ ಯೋಜನೆ ಎಂದು ನರೇಗಾ ಗುರುತಿಸಲ್ಪಟ್ಟಿದೆ. ಯುಪಿಎ ಸರಕಾರ ಈ ಯೋಜನೆಯನ್ನು ಜಾರಿಗೊಳಿಸಿದ ಸಂದರ್ಭದಲ್ಲಿ ಇದರ ವಿರುದ್ಧ ಬಿಜೆಪಿ ನಾಯಕರು ಸಾಕಷ್ಟು ಟೀಕೆಗಳನ್ನು ಮಾಡಿದ್ದರು. ಆದರೆ ಗ್ರಾಮೀಣ ಪ್ರದೇಶದಲ್ಲಿ ಇದು ಪಡೆದುಕೊಂಡ ಜನಪ್ರಿಯತೆಯಿಂದಾಗಿ ಬಳಿಕ ಅಧಿಕಾರಕ್ಕೆ ಬಂದ ಎನ್ ಡಿಎ ಸರಕಾರಕ್ಕೆ ಇದನ್ನು ತಿರಸ್ಕರಿಸಲು ಸಾಧ್ಯವಾಗಲಿಲ್ಲ. ಆರಂಭದ ಬಜೆಟ್‌ನಲ್ಲಿ ನರೇಗಾ ಯೋಜನೆಗೆ ಅತ್ಯಧಿಕ ಹಣವನ್ನು ಎನ್‌ಡಿಎ ಸರಕಾರ ಕೂಡ ಮೀಸಲಿಟ್ಟಿತ್ತು. ಗ್ರಾಮೀಣ ಪ್ರದೇಶದ ಹಸಿವನ್ನು ನೀಗಿಸುವಲ್ಲಿ ನರೇಗಾ ವಹಿಸಿರುವ ಪಾತ್ರವನ್ನು ವಿಶ್ವಸಂಸ್ಥೆ ಕೂಡ ಪ್ರಶಂಸಿಸಿದೆ. ಕೊರೋನ, ಲಾಕ್‌ಡೌನ್ ಕಾಲದಲ್ಲಿ ನಗರದಿಂದ ಗ್ರಾಮೀಣ ಪ್ರದೇಶಕ್ಕೆ ಮರಳಿದ ಕಾರ್ಮಿಕರನ್ನು ಸಲಹಿದ್ದು ಇದೇ ಯೋಜನೆಯಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ನರೇಗಾ ಯೋಜನೆಯನ್ನು ಕೇಂದ್ರ ಸರಕಾರ ನಿರ್ಲಕ್ಷಿಸುತ್ತಿರುವ ಬಗ್ಗೆ ಅನುದಾನಗಳನ್ನು ಬಾಕಿ ಉಳಿಸಿರುವ ಬಗ್ಗೆ ಹಲವು ರಾಜ್ಯಗಳು ಆಕ್ಷೇಪಗಳನ್ನು ವ್ಯಕ್ತಪಡಿಸಿವೆ. ಇದೀಗ ಇದೇ ನರೇಗಾ ಯೋಜನೆಯನ್ನು ಪರಿಷ್ಕರಿಸಿ ಅದಕ್ಕೆ ಹೊಸ ನಾಮಕರಣವನ್ನು ಮಾಡಲು ಕೇಂದ್ರ ಸರಕಾರ ಸಿದ್ಧತೆ ನಡೆಸುತ್ತಿದೆ. ವರದಿಯೊಂದರ ಪ್ರಕಾರ, ಕೇಂದ್ರ ಸರಕಾರವು ನರೇಗಾ ಯೋಜನೆಯನ್ನು ಪರಿಷ್ಕರಿಸಿ ಕೆಲಸದ ದಿನಗಳನ್ನು 100ರಿಂದ 125ಕ್ಕೆ ಹೆಚ್ಚಿಸುವ ಸಾಧ್ಯತೆಯಿದೆ. ಅಷ್ಟೇ ಅಲ್ಲ, ಈ ಯೋಜನೆಗೆ ಪೂಜ್ಯ ಬಾಪು ಗ್ರಾಮೀಣ ರೋಜ್‌ಗಾರ್ ಯೋಜನಾ ಎಂದು ಮರುನಾಮಕರಣ ಮಾಡಲು ಕೇಂದ್ರ ಸರಕಾರ ಮುಂದಾಗಿದೆ. ಸರಕಾರ ನಿಜಕ್ಕೂ ನರೇಗಾ ಯೋಜನೆಯ ಕೆಲಸದ ದಿನಗಳನ್ನು ಹೆಚ್ಚಿಸಲಿದೆಯೋ ಅಥವಾ ಪರಿಷ್ಕರಣೆಯ ನೆಪದಲ್ಲಿ ಯೋಜನೆಯ ಹೆಸರನ್ನಷ್ಟೇ ಬದಲಿಸಲು ಮುಂದಾಗಿದೆಯೋ ಎನ್ನುವುದು ಇನ್ನೂ ಸ್ಪಷ್ಟವಿಲ್ಲ. ಇಷ್ಟಕ್ಕೂ ಹೆಸರನ್ನು ಬದಲಾಯಿಸುವುದರಲ್ಲಿ ಎರಡು ಉದ್ದೇಶವಿದೆ ಎಂದು ವಿರೋಧ ಪಕ್ಷ ನಾಯಕರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಒಂದು, ಇಡೀ ಯೋಜನೆಯನ್ನು ಹೊಸದಾಗಿ ಮೋದಿ ಜಾರಿಗೆ ತಂದಿರುವ ರೀತಿಯಲ್ಲಿ ಬಿಂಬಿಸುವುದು. ಎರಡನೆಯದಾಗಿ, ಯೋಜನೆಗೆ ಇಟ್ಟಿರುವ ಮಹಾತ್ಮಾ ಗಾಂಧಿಯ ಹೆಸರನ್ನು ಅಳಿಸಿ ಅದನ್ನು ಬಾಪುವಿಗೆ ಸೀಮಿತಗೊಳಿಸುವುದು. ಪೂರ್ಣ ಪ್ರಮಾಣದಲ್ಲಿ ಮಹಾತ್ಮಾಗಾಂಧಿಯ ಹೆಸರನ್ನು ಅಳಿಸಿದ್ದೇ ಆದರೆ ಅದು ವಿವಾದಕ್ಕೆ ಕಾರಣವಾಗಬಹುದು ಎಂದು, ಹೆಸರನ್ನು ಚುಟುಕುಗೊಳಿಸಲು ಮುಂದಾಗಿದೆ.


**ಬಾಕಿ ಉಳಿಸಿರುವ ಅನುದಾನಗಳನ್ನು ಪಾವತಿ ಮಾಡಲು ವಿಫಲವಾದ ಕೇಂದ್ರ ಸರಕಾರ ನಿಧಾನಕ್ಕೆ ಯೋಜನೆಯನ್ನೇ ಅಪ್ರಸ್ತುತ ಎಂದು ಘೋಷಿಸುವುದಕ್ಕೆ ನೆಪಗಳನ್ನು ಹುಡುಕ ತೊಡಗಿತು. 2022ರಲ್ಲಿ ಕೇಂದ್ರ ಸರಕಾರವು ನರೇಗಾ ಯೋಜನೆಯಡಿ ಸುಮಾರು 8,305 ಕೋಟಿ ರೂಪಾಯಿ ಮೊತ್ತಗಳನ್ನು ಬಾಕಿಯಿರಿಸಿತ್ತು. ಅಂಧ್ರಪ್ರದೇಶ, ಪಶ್ಚಿಮಬಂಗಾಳಗಳಿಗೆ ಅತಿ ಹೆಚ್ಚು ಹಣ ಪಾವತಿಯಾಗುವುದಕ್ಕಿದೆ. ಕರ್ನಾಟಕದಲ್ಲೂ ಕಾರ್ಮಿಕರಿಗೆ ಕೋಟ್ಯಂತರ ರೂಪಾಯಿ ಪಾವತಿಯಾಗಲು ಬಾಕಿ ಉಳಿದಿದೆ. ಆರು ತಿಂಗಳಿಂದ ಹಣ ವಾಪತಿಯಾಗದ ಕಾರಣ ಇತ್ತೀಚೆಗೆ ಉಡುಪಿಯಲ್ಲಿ ನರೇಗಾ ಕಾರ್ಮಿಕರು ಪ್ರತಿಭಟನೆ ನಡೆಸಿದ್ದರು.**

ವಿಪರ್ಯಾಸವೆಂದರೆ, ಪ್ರಧಾನಿ ಮೋದಿಯವರು ಭಾಷಣವೊಂದರಲ್ಲಿ ಅತ್ಯಾಚಾರ ಆರೋಪಿ ಅಸಾರಾಂ ಬಾಪು ಅವರನ್ನೂ ಪ್ರೀತಿಯಿಂದ ಬಾಪು ಎಂದೇ ಸಂಬೋಧಿಸಿದ್ದಾರೆ.

ಇದೀಗ ಮಹಾತ್ಮಾಗಾಂಧಿಯ ಹೆಸರನ್ನು ಅಳಿಸಿ ಆ ಜಾಗಕ್ಕೆ ಅಸಾರಾಂ ಬಾಪುವನ್ನು ತುರುಕಿಸಲು ಪ್ರಯತ್ನಿಸುತ್ತಿದ್ದಾರೆಯೇ ಎಂದು ಜನರು ಅನುಮಾನಿಸುವಂತಾಗಿದೆ.ಇಂದು ಸರಕಾರ ನರೇಗಾ ಯೋಜನೆಯನ್ನು ಹೊಸದಾಗಿ ಪರಿಷ್ಕರಿಸುವ ಅಗತ್ಯವೇನೂ ಇಲ್ಲ. ಇರುವ ಯೋಜನೆಯ ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಬಾಕಿ ಉಳಿಸಿರುವ ಅನುದಾನಗಳನ್ನು ಬಿಡುಗಡೆ ಮಾಡಿದರೆ ಅಷ್ಟೇ ಸಾಕು. ನರೇಗಾ ಯೋಜನೆಯ ಬಗ್ಗೆ ಆರಂಭದಲ್ಲಿ ಎನ್‌ಡಿಎ ಸರಕಾರ ಉತ್ಸಾಹ ತೋರಿತ್ತಾದರೂ, ಕೊರೋನೋತ್ತರ ದಿನಗಳಲ್ಲಿ ಸರಕಾರವೇ ನರೇಗಾ ಯೋಜನೆಯ ಬಗ್ಗೆ ತಪ್ಪು ಮಾಹಿತಿಗಳನ್ನು ಹಂಚತೊಡಗಿತು. ಗೃಹ ಲಕ್ಷ್ಮಿ ಹಣ ಬಿದ್ದಿಲ್ಲ ಎಂದು ಕೂಗೆಬ್ಬಿಸುವ ಬಿಜೆಪಿ ನಾಯಕರು ಕೇಂದ್ರದಿಂದ ಬರಲು ಬಾಕಿಯಾಗಿರುವ ನರೇಗಾ ಕಾರ್ಮಿಕರ ಹಣದ ಬಗ್ಗೆ ಯಾಕೆ ಮಾತನಾಡುತ್ತಿಲ್ಲ ಎಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಬಿಜೆಪಿ ಮುಖಂಡರನ್ನು ತರಾಟೆಗೆ ತೆಗೆದುಕೊಂಡಿದ್ದರು. ಈ ಪ್ರಶ್ನೆಗೆ ಬಿಜೆಪಿ ನಾಯಕರು ಈವರೆಗೆ ಯಾವುದೇ ಉತ್ತರ ನೀಡಿಲ್ಲ. ವಿಪರ್ಯಾಸವೆಂದರೆ, ಬಾಕಿ ಉಳಿಸಿರುವ ಹಣ ಪಾವತಿಯ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗಿದ್ದ ವಿತ್ತ ಸಚಿವರು, ಲೋಕಸಭೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಗಳಿಗೆ ಬೇಡಿಕೆ ತಗ್ಗುತ್ತಿದೆ' ಎಂಬ ಬೇಜವಾಬ್ದಾರಿ ಹೇಳಿಕೆಯನ್ನು ನೀಡಿದ್ದರು. ಆದರೆ ಫ್ಯಾಕ್ಟ್‌ಚೆಕ್ ಬೇರೆಯೇ ಹೇಳುತ್ತಿತ್ತು. 2018ರಿಂದ 2022ರ ನಡುವೆ ಯೋಜನೆಯಡಿ ಉದ್ಯೋಗಗಳಿಗೆ ಇರುವ ಬೇಡಿಕೆಯ ಬಗ್ಗೆ ನರೇಗಾ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದಾಗ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸಕ್ಕೆ ಬೇಡಿಕೆ ಸ್ಥಿರವಾಗಿ ಏರಿಕೆಯಾಗಿರುವುದು ಬೆಳಕಿಗೆ ಬಂತು. 2018ರಲ್ಲಿ 5.78 ಕೋಟಿ ಕುಟುಂಬಗಳಿಂದ ಅಂದರೆ ಸುಮಾರು 9.11 ಕೋಟಿ ಜನರು ಕೆಲಸಕ್ಕೆ ಬೇಡಿಕೆ ಸಲ್ಲಿಸಿದ್ದರೆ, 2019–20ರಲ್ಲಿ 6.16 ಕೋಟಿ ಕುಟುಂಬಗಳು ಅಂದರೆ ಸುಮಾರು 9.33 ಕೋಟಿ ಜನರು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದರು. ಕೋವಿಡ್ ಕಾಲದಲ್ಲಂತೂ ನಿರುದ್ಯೋಗಿಗಳಿಗೆ ನರೇಗಾ ದೊಡ್ಡ ವರದಾನವಾಗಿತ್ತು. ಆದರೆ ಬಾಕಿ ಉಳಿಸಿರುವ ವೇತನವನ್ನು ನೀಡಲು ಸಾಧ್ಯವಾಗದ ಕೇಂದ್ರ ಸರಕಾರ, ಕಾರ್ಮಿಕರ ಕೆಲಸವನ್ನು ಕಡಿತಗೊಳಿಸುವ ಬಗ್ಗೆ ಯೋಚಿಸತೊಡಗಿತು.

ಅದರ ಭಾಗವಾಗಿಯೇ ವಿತ್ತ ಸಚಿವರು ಲೋಕಸಭೆಯಲ್ಲಿ ಮಾತನಾಡುತ್ತಾ ನರೇಗಾದ ಬಗ್ಗೆ ಜನರು ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ಹೇಳಿಕೆ ನೀಡಿದ್ದರು.

---



## ರಾಮಾಯಣ

### ಶಬರಿಯ ದರ್ಶನ

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಆ ಮೃಗಗಳ ಕ್ರೀಡಾ ವಿಶೇಷಗಳನ್ನು ನೋಡಿದರೆ ದುಃಖವು ಶಾಂತವಾಗುತ್ತದೆ ಋಷ್ಯಮೂಕಪರ್ವತದಲ್ಲಿ ಶಿಲೆಯಿಂದ ಮುಚ್ಚಲ್ಪಟ್ಟ ಒಂದು ದೊಡ್ಡ ಗುಹೆ ಇದೆ. ಆ ಗುಹೆಯೊಳಗೆ ಹೋಗುವುದು ಬಹಳ ಕಷ್ಟ. ಆ ಗುಹೆಯ ಮುಂದುಗಡೆಯಲ್ಲಿ ಅತ್ಯಂತ ಶೀತೋದಕವುಳ್ಳ ಒಂದು ಮಡುವಿದೆ. ಬಳಿಯಲ್ಲಿ ಅನೇಕ ಕಂದಮೂಲಗಳೂ ನಾನಾ ಫಲಪುಷ್ಪಗಳಿಂದ ಇಟ್ಟಣಿಸಿದ ವೃಕ್ಷಗಳೂ ಇವೆ. ಆ ಗುಹೆಯಲ್ಲಿ ಸುಗ್ರೀವನು ನಾಲ್ಕುಮಂದಿ ಕಪಿಗಳ ಸಹಿತ ವಾಸವಾಗಿದ್ದಾನೆ. ಒಂದೊಂದು ಸಮಯದಲ್ಲಿ ಆ ಪರ್ವತದ ಕೋಡುಗಲ್ಲಿನ ಮೇಲೆಯೂ ಇರುತ್ತಾನೆ ಎಂದು ನುಡಿದನು. ಆ ಮಡುವಿನ ಈ ಪ್ರಕಾರವಾಗಿ ಶ್ರೀರಾಮನೊಡನೆ ಹೇಳಿ ಅಂತರಿಕ್ಷಮಾರ್ಗದಲ್ಲಿ ದಿವ್ಯಾಭರಣ ಭೂಷಿತನಾಗಿ ಒಪ್ಪುತ್ತಿದ್ದ ಕಬಂಧನನ್ನು ಕುರಿತು ರಾಮಲಕ್ಷ್ಮಣರು ಎಲೈ ಕಬಂಧನೆ, ನೀನು ನಿನ್ನ ಲೋಕಕ್ಕೆ ಹೋಗು ಎಂದು ಹೇಳಿದರು. ಕಬಂಧನು ಎಲೈ ರಾಮಲಕ್ಷ್ಮಣರುಗಳಿರಾ, ನಿಮ್ಮ ಕಾರ್ಯವು ಸಾಧ್ಯವಾಗುವುದು. ನೀವು ಮುಂದೆ ಪ್ರಯಾಣಮಾಡಿರಿ ಎಂದು ನುಡಿದನು. ರಾಮಲಕ್ಷ್ಮಣರು ಸಂತೋಷಯುಕ್ತರಾಗಿ ಆತನನ್ನು ಬೀಳ್ಕೊಟ್ಟು ಋಷ್ಯಮೂಕಪರ್ವತಕ್ಕೆ ಹೊರಟರು. ಕಬಂಧನು ತನ್ನ ಪೂರ್ವರೂಪವನ್ನು ಪಡೆದು ಅಂತರಿಕ್ಷಮಾರ್ಗದಲ್ಲಿ ನಿಂತು ಶ್ರೀರಾಮ. ನೀನು ಅವಶ್ಯವಾಗಿ ಸುಗ್ರೀವನ ಸಂಗಡ ಸ್ನೇಹವನ್ನು ಮಾಡಿಕೊ ಎಂದು ಹೇಳಿ ಸ್ವರ್ಗಲೋಕಕ್ಕೆ ಹೋದನು.

**ಶಬರಿಯ ದರ್ಶನ:** ಆಮೇಲೆ ರಾಮಲಕ್ಷ್ಮಣರು ಕಬಂಧನು ಹೇಳಿದಂತೆ ಪಡುವಲಾಗಿ ತಿರುಗಿ ಪಂಪಾತೀರವನ್ನು ಕುರಿತು ತೆರಳಿದರು. ಋಷ್ಯಮೂಕಪರ್ವತದಲ್ಲಿದ್ದ ಸುಗ್ರೀವನನ್ನು ಕಾಣಬೇಕೆಂದು ಅನೇಕ ವನಗಳನ್ನೂ ಪರ್ವತಗಳನ್ನೂ ದಾಟಿ ಪಂಪಾಸರೋವರದ ಪಡುವಲ ತೀರಕ್ಕೆ ಹೋದರು ಶಬರಿಯ ರಮ್ಯವಾದ ಆಶ್ರಮವನ್ನು ಕಂಡು ಅದನ್ನು ಪ್ರವೇಶಿಸಿದರು. ಆಗ ತಪಸಿದ್ಧಳಾದ ಶಬರಿಯು ಎದ್ದು ನಿಂತು ಕೈಮುಗಿದಳು. ಅವಳು ರಾಮಲಕ್ಷ್ಮಣರ ಪಾದಗಳನ್ನು ಮುಟ್ಟಿ ವಂದಿಸಿ ಪಾದ್ಯಾದಿಗಳಿಂದ ವಿಧಿವತ್ತಾಗಿ ರಾಮಲಕ್ಷ್ಮಣರನ್ನು ಉಪಚರಿಸಿದಳು. ಅನಂತರ ಶ್ರೀರಾಮನು

ಹೇ ತಪೋಧನೆ, ನಿರ್ವಿಘ್ನವಾಗಿ ನಿನ್ನ ತಪಸ್ಸು ಸಾಗುತ್ತಿದೆಯೆ ಆಹಾರನಿಯಮವನ್ನು ಪಾಲಿಸುತ್ತ ಕೋಪವನ್ನು ಜಯಿಸಿರುವೆಯಾ ನಿನ್ನ ಮನಸ್ಸಿಗೆ ಶಾಂತಿ ದೊರಕಿದೆಯೆ ನೀನು ಮಾಡಿದ ಗುರುಶುಶೂಷೆಯು ಫಲಿಸಿತೆ ಎಂದು ಕೇಳಿದನು. ಶಬರಿಯು ಶ್ರೀರಾಮ, ಈಗ ನಿನ್ನ ಸಂದರ್ಶನದಿಂದ ನನಗೆ ತಪಸ್ಸಿದ್ಧಿಯೊದಗಿತು. ನನ್ನ ಜನ್ಮವು ಸಫಲವಾಯಿತು. ಈಗಲೇ ನನಗೆ ಸ್ವರ್ಗಲೋಕವು ಪ್ರಾಪ್ತವಾಯಿತು. ಶ್ರೀರಾಮ, ಪರಮಪುರುಷಾವತಾರನಾದ ನೀನು ನಾನು ಮಾಡಿದ ಪೂಜೆಯನ್ನು ಕೈಕೊಂಡು ಕೃಪಾದೃಷ್ಟಿಯಿಂದ ನನ್ನನ್ನು ನೋಡಿದಾಗಲೇ ಉತ್ತಮವಾದ ಸದ್ಗತಿಯನ್ನು ಪಡೆದೆನು ! ಶ್ರೀರಾಮ, ನೀನು ಚಿತ್ರಕೂಟ ಪರ್ವತಕ್ಕೆ ಬಂದ ಸಮಯದಲ್ಲಿ ಈ ಆಶ್ರಮದಲ್ಲಿದ್ದ ಮಹಾತ್ಮರಾದ ಋಷಿಗಳು ವಿಮಾನಾರೂಢರಾಗಿ ಸ್ವರ್ಗಲೋಕಕ್ಕೆ ಹೋಗುತ್ತ,

**ಮುಂದುವರಿಯುವುದು...**

---

# ವೃದ್ಧಾಶ್ರಮಗಳು: ಅವಶ್ಯಕತೆಯ ನೆಲೆವೇ, ಕುಟುಂಬ ಮೌಲ್ಯಗಳ ಸವಾಲೇ?



☛ ವಿಶ್ವಾಸ್.ಡಿ.ಗೌಡ

ಇತ್ತೀಚಿನ ದಿನಗಳಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವುದು ಸಮಾಜದಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿದೆ.

ಹಿಂದೆ ವೃದ್ಧರನ್ನು ಕುಟುಂಬದ ಗೌರವಾನ್ವಿತ ಆಧಾರಸ್ತಂಭಗಳಾಗಿ ನೋಡುತ್ತಿದ್ದ ಭಾರತೀಯ ಸಮಾಜದಲ್ಲಿ, ಇಂದು ನಗರೀಕರಣ ಹಾಗೂ ಉದ್ಯೋಗದ ಒತ್ತಡ, ಅಣುಕುಟುಂಬ ವ್ಯವಸ್ಥೆ ಹಾಗೂ ಮೌಲ್ಯ ಬದಲಾವಣೆಯ ಪರಿಣಾಮವಾಗಿ ವೃದ್ಧಾಶ್ರಮಗಳ ಅವಶ್ಯಕತೆ ಹೆಚ್ಚಾಗಿದೆ. ವೃದ್ಧಾಶ್ರಮಗಳ ಸಾಧಕ ಅಂಶಗಳನ್ನು ನೋಡಿದರೆ, ಮೊದಲು ಹೇಳಬೇಕಾದದ್ದು ಅವು ಅನಾಥತೆ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾದ ವೃದ್ಧರಿಗೆ ಸುರಕ್ಷಿತ ಆಶ್ರಯ ಒದಗಿಸುತ್ತವೆ. ಆರೋಗ್ಯ ಸಮಸ್ಯೆಗಳಿಂದ ಬಳಲುವವರು,




ಒಂಟಿಯಾಗಿ ಬದುಕಲು ಅಸಮರ್ಥರಾದವರು ಇಲ್ಲಿ ಸಮಯಕ್ಕೆ ಸರಿಯಾದ ಆಹಾರ, ವೈದ್ಯಕೀಯ ಆರೈಕೆ ಹಾಗೂ ಸುರಕ್ಷಿತ ವಾತಾವರಣವನ್ನು ಪಡೆಯುತ್ತಾರೆ. ಜೊತೆಗೆ ತಮ್ಮ ವಯಸ್ಸಿನವರೊಂದಿಗೆ ಮಾತನಾಡುವ, ಅನುಭವ ಹಂಚಿಕೊಳ್ಳುವ ಅವಕಾಶದಿಂದ ಒಂಟಿತನದ ಭಾವನೆ ಕಡಿಮೆಯಾಗುತ್ತದೆ. ಕೆಲವು ವೃದ್ಧಾಶ್ರಮಗಳು ಯೋಗ, ಧ್ಯಾನ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ವೃದ್ಧರ ಮನೋಬಲವನ್ನು ಹೆಚ್ಚಿಸುತ್ತಿವೆ. ಇನ್ನೊಂದು ಕಡೆ, ವೃದ್ಧಾಶ್ರಮಗಳ ಬಾದಕ ಅಂಶಗಳು ಗಂಭೀರವಾಗಿವೆ. ಪ್ರಮುಖವಾಗಿ ಕುಟುಂಬ ಬಂಧನಗಳ ದುರ್ಬಲತೆಯನ್ನು ಇದು ಪ್ರತಿಬಿಂಬಿಸುತ್ತದೆ. ತಂದೆ ತಾಯಿಯನ್ನು ವೃದ್ಧಾಶ್ರಮಕ್ಕೆ ಕಳುಹಿಸುವುದು ಮಕ್ಕಳ ಕರ್ತವ್ಯ ಭಾವನೆ ಕುಂಠಿತವಾಗುವ ಅಪಾಯವನ್ನುಂಟುಮಾಡುತ್ತದೆ.

ವೃದ್ಧಾಶ್ರಮದಲ್ಲಿ ಸೌಲಭ್ಯಗಳಿದ್ದರೂ, ಕುಟುಂಬದ ಪ್ರೀತಿ ಮತ್ತು ಆತ್ಮೀಯತೆಯನ್ನು ಸಂಪೂರ್ಣವಾಗಿ ಅದು ತುಂಬಲಾರದು. ಅನೇಕ ವೃದ್ಧರಿಗೆ ಇದು ಮಾನಸಿಕ ನೋವು, ಒಂಟಿತನ ಹಾಗೂ ತಳ್ಳಿಹಾಕಲ್ಪಟ್ಟ ಭಾವನೆ ಉಂಟುಮಾಡಬಹುದು. ಇದಲ್ಲದೆ, ಎಲ್ಲಾ ವೃದ್ಧಾಶ್ರಮಗಳು ಸಮರ್ಪಕವಾಗಿಲ್ಲ; ಕೆಲವು ಕಡೆ ನಿರ್ಲಕ್ಷ್ಯ ಹಾಗೂ ಯಾಂತ್ರಿಕ ಆರೈಕೆ ಅಥವಾ ಆರ್ಥಿಕ ದುರುಪಯೋಗದ ಸಾಧ್ಯತೆಯೂ ಇದೆ. ಉತ್ತಮ ವೃದ್ಧಾಶ್ರಮಗಳು ದುಬಾರಿಯಾಗಿರುವುದರಿಂದ ಎಲ್ಲಾ ವರ್ಗದ ವೃದ್ಧರಿಗೆ ಅವು ಕೈಗೆಟುಕುವುದಿಲ್ಲ. ಒಟ್ಟಾರೆ, ವೃದ್ಧಾಶ್ರಮಗಳು ಇಂದಿನ ಸಮಾಜದ ಅನಿವಾರ್ಯತೆಗಳ ಫಲ. ಅವು ಕೆಲವರಿಗೆ ಆಶ್ರಯವಾಗಿದ್ದರೂ, ಕುಟುಂಬ ಮೌಲ್ಯಗಳ ಕುಸಿತದ ಸೂಚಕವೂ ಹೌದು. ಆದ್ದರಿಂದ ವೃದ್ಧಾಶ್ರಮಗಳನ್ನು ಮೊದಲ ಆಯ್ಕೆಯಾಗಿ ಅಲ್ಲ, ಕೊನೆಯ ಆಯ್ಕೆಯಾಗಿ ನೋಡಬೇಕು.

ವೃದ್ಧರಿಗೆ ಕುಟುಂಬದೊಳಗೇ ಗೌರವ, ಕಾಳಜಿ ಮತ್ತು ಸಹಬಾಳ್ವೆ ದೊರಕುವಂತಹ ಮಾನವೀಯ ಸಂಸ್ಕೃತಿಯನ್ನು ಬೆಳೆಸುವುದೇ ಆರೋಗ್ಯಕರ ಸಮಾಜದ ನಿಜವಾದ ಲಕ್ಷಣ

---




# ಬಹುಮುಖ ಪ್ರತಿಭೆ ವಿದಿತಾ ನವೀನ್ ರಂಗಪ್ರವೇಶ

ಖ್ಯಾತ ಶ್ರದ್ಧಾ ಡ್ಯಾನ್ಸ್ ಸೆಂಟರ್ ನೃತ್ಯಸಂಸ್ಥೆಯ ಬದ್ಧತೆಯ ನೃತ್ಯಗುರು ಮತ್ತು ಉತ್ತಮ ನೃತ್ಯಪಟುವೆಂದು ಹೆಸರಾದ ವಿದುಷಿ ಶಮಾ ಕೃಷ್ಣ ಅವರ ನುರಿತ ಗರಡಿಯಲ್ಲಿ ರೂಪುಗೊಂಡಿರುವ ಕಲಾಶಿಲ್ಪ ಕು. ಎನ್. ವಿದಿತಾ. ಕಳೆದ 6 ವರ್ಷಗಳಿಂದ ಅತ್ಯಾಸಕ್ತಿಯಿಂದ ಅವರಲ್ಲಿ ಭರತನಾಟ್ಯ ಕಲಿಯುತ್ತಿರುವ ವಿದಿತಾ ಬೆಂಗಳೂರಿನ ಶ್ರೀ ನವೀನ್ ಮತ್ತು ಪುಷ್ಪಾ ಅವರ ಸುಪುತ್ರಿ.

ಎಂಟನೆಯ ತರಗತಿಯಲ್ಲಿ ಓದುತ್ತಿರುವ ಹದಿಮೂರು ವರ್ಷದ ಈ ಬಾಲಪ್ರತಿಭೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿಯುತ್ತ ಈಗಾಗಲೇ ಕರ್ನಾಟಕ ಸರ್ಕಾರದ ಜ್ಯೂನಿಯರ್ ನೃತ್ಯಪರೀಕ್ಷೆಯನ್ನು ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆಯಾಗಿದ್ದಾಳೆ. ವಯಸ್ಸಿಗೆ ಮೀರಿದ ಪ್ರತಿಭಾನ್ವಿತಳಾದ ವಿದಿತಾ ನಾಟ್ಯಶಾಸ್ತ್ರದ 108 'ಕರಣ'ಗಳನ್ನು ಕಲಿಯುತ್ತಿರುವುದು ನಿಜಕ್ಕೂ ಇವಳ ಅಗ್ಗಳಿಕೆ. ನಾಡಿನಾದ್ಯಂತ ಅನೇಕ ಪ್ರತಿಷ್ಠಿತ ನೃತ್ಯೋತ್ಸವಗಳಲ್ಲಿ, ದೇವಾಲಯಗಳಲ್ಲಿ ನರ್ತಿಸಿರುವ ಇವಳು, ಪಾಶ್ಚಾತ್ಯ, ಫ್ರೀ ಸ್ಟೈಲ್, ಮತ್ತು ಇನ್ನಿತರ ನೃತ್ಯ ಪ್ರಕಾರಗಳಲ್ಲೂ ಪರಿಶ್ರಮಿಸುತ್ತಿದ್ದಾಳೆ. ಜೀ ಕನ್ನಡ ವಾಹಿನಿಯ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಮತ್ತು ತೆಲುಗು ಈ ಟಿವಿಯ 'ಧೀ' ಡ್ಯಾನ್ಸ್ ಷೋ ನಲ್ಲಿ ಭಾಗವಹಿಸಿರುವ ವಿದಿತಾ, ಕ್ರೀಡಾಪಟು ಕೂಡ. ಥ್ರೋ ಬಾಲ್, ವಾಲಿ ಬಾಲ್, ಶಾಟ್ ಪುಟ್ ಸ್ಕೇಟಿಂಗ್ ಮತ್ತು ಈಜುಗಾರಿಕೆ ಮುಂತಾದ ಕ್ರೀಡೆಗಳಲ್ಲಿ ತೊಡಗಿಕೊಂಡಿರುವ ವೈಶಿಷ್ಟ್ಯ ಇವಳದು. ಇದೀಗ ವಿದಿತಾ, ತಾನು ಅರ್ಜಿಸಿರುವ ನೃತ್ಯದ ಆಯಾಮಗಳನ್ನು ಪ್ರದರ್ಶಿಸಲು ಇದೇ ತಿಂಗಳ 20 ಶನಿವಾರದಂದು ಸಂಜೆ 6 ಗಂಟೆಗೆ ನಗರದ ಚೌಡಯ್ಯ ಮೆಮೋರಿಯಲ್ ಭವನದಲ್ಲಿ ವಿದ್ಯುಕ್ತವಾಗಿ 'ರಂಗಪ್ರವೇಶ' ಮಾಡುತ್ತಿದ್ದಾಳೆ. ಕು. ವಿದಿತಳ ಕಲಾತ್ಮಕ ನೃತ್ಯ ಸೌದರ್ಯವನ್ನು ಕಣ್ತುಂಬಿಕೊಳ್ಳಲು ಸರ್ವರಿಗೂ ಆದರದ ಸ್ವಾಗತ.

ಕಲಾ ಸಾಹಿತ್ಯ
**ವೈ.ಕೆ. ಸಂಧ್ಯಾ ಶರ್ಮ**
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

---

# ದರ್ಶನ್ ಬ್ಯಾರಕ್‌ಗೆ ಡಿಜಿಪಿ ಅಲೋಕ್ ಕುಮಾರ್ ಭೇಟಿ; ಪರಿಶೀಲನೆ

• ಉದಯವಾಹಿನಿ, ಬೆಂಗಳೂರು

ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ ನೇಮಕಗೊಂಡಿರುವ ಅಲೋಕ್‌ಕುಮಾರ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸೋಮವಾರ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು.ಅಕ್ರಮ ಎಸಗಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜೈಲಿನ ಸಿಬ್ಬಂದಿಗೆ ಕಠಿಣ ಸಂದೇಶ ರವಾನಿಸಿದರು. ಚೆಕ್‌ಪೋಸ್ಟ್ ಬಳಿ ಪರಿಶೀಲನೆ ನಡೆಸಿದ ಅಲೋಕ್ ಕುಮಾರ್ ಅವರು, ಸುತ್ತಮುತ್ತಲ ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವಂತೆ ಸಿಬ್ಬಂದಿಗೆ ಸೂಚನೆ ನೀಡಿದರು.




ಯಾವುದೇ ವಾಹನ ಬಂದರೂ ಚೆಕ್‌ಪೋಸ್ಟ್‌ನಲ್ಲೇ ತಡೆದು ಪರಿಶೀಲಿಸಿ ಪ್ರವೇಶ ಕಲ್ಪಿಸಬೇಕು. ಒಂದು ವೇಳೆ ನಿಷೇಧಿತ ವಸ್ತುಗಳು ವಾಹನದಲ್ಲಿರುವುದು ಕಂಡುಬಂದರೆ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಸೂಚನೆ ನೀಡಿದರು.

ಪಾರ್ಕಿಂಗ್ ಸ್ಥಳದಲ್ಲಿನ ಅವ್ಯವಸ್ಥೆ ಕಂಡು ಆಕ್ರೋಶ ಹೊರಹಾಕಿದರು. ಪಾರ್ಕಿಂಗ್ ಸ್ಥಳವನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕು ಎಂದೂ ಸೂಚಿಸಿದರು. ಅದಾದ ಮೇಲೆ ಕಾರಾಗೃಹಕ್ಕೆ ತೆರಳಿ, ವಿವಿಧ ಬ್ಯಾರಕ್‌ಗಳಲ್ಲಿ ಪರಿಶೀಲನೆ ನಡೆಸಿದರು. ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ನೀಡಲಾಗುತ್ತಿರುವ ಊಟ ಹಾಗೂ ತಿಂಡಿ ಪರಿಶೀಲಿಸಿದರು. ಕಾರಾಗೃಹದಲ್ಲಿರುವ ಆಸ್ಪತ್ರೆಗೂ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು. ಬೇಕರಿಯಲ್ಲೂ ತಪಾಸಣೆ ನಡೆಸಿದರು. ಕೈದಿಗಳಿಂದಲೂ ಕೆಲ ಮಾಹಿತಿ ಪಡೆದುಕೊಂಡರು.

ಮೊಬೈಲ್ ತರಿಸಿಕೊಂಡು ಬ್ಯಾರಕ್‌ನಲ್ಲಿ ಇಟ್ಟುಕೊಂಡು ಬಳಕೆ ಮಾಡುತ್ತಿದ್ದರೆ, ಅದನ್ನು ಸಿಬ್ಬಂದಿಗೆ ವಾಪಸ್ ನೀಡಬೇಕು! ಎಂದು ಕೈದಿಗಳಿಗೂ ಸೂಚನೆ ನೀಡಿದರು.

---

# ತ್ವಚೆಯ ಕಾಂತಿ ಹೆಚ್ಚಿಸಬೇಕೆ?



ಅರಿಶಿನ, ಬೇವು ಮತ್ತು ಅಲೋವೆರಾ ಜೆಲ್ ಅನೇಕ ಪೋಷಕಾಂಶಗಳನ್ನು ಹೊಂದಿರುತ್ತದೆ. ಅರಿಶಿನ, ಅಲೋವೆರಾ ಮತ್ತು ಬೇವಿನ ಮಿಶ್ರಣ ಅನೇಕ ಚರ್ಮದ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಮನೆಯಲ್ಲಿಯೇ ತ್ವಚೆಯ ಆರೈಕೆಗೆ ಸುಲಭವಾಗಿ ತಯಾರಿಸಬಹುದಾದ ಮಿಶ್ರಣವನ್ನು ಇಲ್ಲಿ ತಿಳಿಸಿದ್ದೇವೆ. ಅರಿಶಿನ, ಬೇವು ಮತ್ತು ಅಲೋವೆರಾದೊಂದಿಗೆ ಏನನ್ನು ಬೆರೆಸಬೇಕು ಮತ್ತು ಅವುಗಳನ್ನು ಹೇಗೆ ಬಳಸಬೇಕು ಎಂಬುದನ್ನು ತಿಳಿದುಕೊಳ್ಳಿ. ಜೈಪುರದ ಬಾಪುನಗರದ ನ್ಯಾಚುರಲ್ ಥೆರಪಿ ಆಸ್ಪತ್ರೆಯ ಹಿರಿಯ ವೈದ್ಯ ಡಾ.ಕಿರಣ್ ಗುಪ್ತಾ ಈ ಮಾಹಿತಿ ಹಂಚಿಕೊಂಡಿದ್ದಾರೆ.

**ಅಲೋವೆರಾ, ಅರಿಶಿನ ಮತ್ತು ಬೇವಿನಲ್ಲಿರುವ ಗುಣಲಕ್ಷಣಗಳು:** ಅಲೋವೆರಾ ಜೆಲ್ ರಂಜಕ, ಕ್ಯಾರೋಟಿನ್ ಮತ್ತು ಪ್ರೋಟೀನ್, ವಿಟಮಿನ್ ಎ, ಇ ಮತ್ತು ಸಿ ನಂತಹ ಪೋಷಕಾಂಶಗಳನ್ನು ಹೊಂದಿರುತ್ತದೆ, ಜೊತೆಗೆ ಮಾಯಿಶ್ಚರೈಸಿಂಗ್, ಉತ್ಕರ್ಷಣ ನಿರೋಧಕಗಳು, ಉರಿಯೂತ ನಿವಾರಕ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳನ್ನು ಹೊಂದಿರುತ್ತದೆ.

ಔಷಧೀಯ ಗುಣಗಳಿಂದ ಸಮೃದ್ಧವಾಗಿರುವ ಅರಿಶಿನವು ಉರಿಯೂತ ನಿವಾರಕ, ಉತ್ಕರ್ಷಣ ನಿರೋಧಕಗಳು, ಬ್ಯಾಕ್ಟೀರಿಯಾ ವಿರೋಧಿ ಮತ್ತು ಶಿಲೀಂಧ್ರ ವಿರೋಧಿ ಗುಣಗಳನ್ನು ಹೊಂದಿದೆ. ಬೇವು ಶಿಲೀಂಧ್ರ ವಿರೋಧಿ, ಬ್ಯಾಕ್ಟೀರಿಯಾ ವಿರೋಧಿ, ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿದೆ. ಇವುಗಳನ್ನು ಬಳಸುವುದರಿಂದ ವಿವಿಧ ಚರ್ಮದ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

**ಈ ಮಿಶ್ರಣವನ್ನು ತಯಾರಿಸುವುದು ಹೇಗೆ?:** ಕೆಲವು ಬೇವಿನ ಎಲೆಗಳು, ಅಲೋವೆರಾ, ಅರಿಶಿನ ಮತ್ತು ಕೆಲವು ಹನಿ ನಿಂಬೆ ರಸವನ್ನು ತೆಗೆದುಕೊಂಡು ಮಿಕ್ಸಿಯಲ್ಲಿ ಚೆನ್ನಾಗಿ ರುಬ್ಬಿಕೊಳ್ಳಿ. ಈಗ ಈ ಪೇಸ್ಟ್ ಅನ್ನು ಫ್ರೀಜ್ ಮಾಡಲು ಫ್ರಿಜರ್ ನಲ್ಲಿ ಇಡಿ. ಪ್ರತಿದಿನ, ಒಂದು ಐಸ್ ಕ್ಯೂಬ್ ತೆಗೆದುಕೊಂಡು ಅದನ್ನು ನಿಮ್ಮ ಮುಖಕ್ಕೆ ಮಸಾಜ್ ಮಾಡಿ, ಒಣಗಿದ ನಂತರ ನಿಮ್ಮ ಮುಖವನ್ನು ತೊಳೆಯಿರಿ. ಇದು ಚರ್ಮಕ್ಕೆ ಅನೇಕ ಪ್ರಯೋಜನಗಳನ್ನು ನೀಡುತ್ತದೆ.

**ಸೋಂಕುಗಳನ್ನು ತಡೆಯುತ್ತದೆ:** ಈ ಮಿಶ್ರಣವು ಬ್ಯಾಕ್ಟೀರಿಯಾ ವಿರೋಧಿ, ಶಿಲೀಂಧ್ರ ವಿರೋಧಿ ಮತ್ತು ಉರಿಯೂತದ ಗುಣಲಕ್ಷಣಗಳನ್ನು ಹೊಂದಿದೆ. ಆದ್ದರಿಂದ, ಅವುಗಳ ಐಸ್ ಅನ್ನು ಮುಖಕ್ಕೆ ಹಚ್ಚುವುದರಿಂದ ಚರ್ಮವನ್ನು ಸೋಂಕುಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ ಮತ್ತು ಡಾರ್ಕ್ ಸ್ಪಾಟ್, ತುರಿಕೆ, ದದ್ದುಗಳು ಮತ್ತು ಕೆಂಪಾಗುವಿಕೆಯಿಂದ ಪರಿಹಾರವನ್ನು ನೀಡುತ್ತದೆ. ಈ ಮಿಶ್ರಣವನ್ನು ಮುಖಕ್ಕೆ ಹಚ್ಚುವ ಮೊದಲು ಪ್ಯಾಚ್ ಟೆಸ್ಟ್ ಮಾಡಿ. ಯಾವುದೇ ರೀತಿಯ ಅಲರ್ಜಿ ಉಂಟಾದರೆ ಅದನ್ನು ಬಳಸುವುದನ್ನು ತಪ್ಪಿಸಿ.

**ಮೊಡವೆಗಳಿಂದ ಪರಿಹಾರ:** ಅರಿಶಿನ, ಬೇವು ಮತ್ತು ಅಲೋವೆರಾ ಜೆಲ್ ಬ್ಯಾಕ್ಟೀರಿಯಾ ವಿರೋಧಿ ಮತ್ತು ಶಿಲೀಂಧ್ರ ವಿರೋಧಿ ಗುಣಗಳನ್ನು ಹೊಂದಿವೆ. ಇದನ್ನು ಮುಖಕ್ಕೆ ಹಚ್ಚುವುದರಿಂದ ಮೊಡವೆಗಳ ಸಮಸ್ಯೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ ಮತ್ತು ಚರ್ಮವನ್ನು ಸೋಂಕುಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ.

---

# ಭಾರತದ ಯುದ್ಧ ನೀತಿ!

## ವಿಶ್ವವು ಸನಾತನ ಸಂಸ್ಕೃತಿಯತ್ತ ಹೊರಳುತ್ತಿದೆ: ಡಾ. ಸುಧಾಂಶು ತ್ರಿವೇದಿ

• ಉದಯವಾಹಿನಿ, ಹೊಸ ದೆಹಲಿ

ಹಿಂದೆ ಸನಾತನ ಸಂಸ್ಕೃತಿಯನ್ನು ಹಾಸ್ಯ ಮಾಡುವ ಜನರು ಈಗ ಆಯುರ್ವೇದದ ಕಡೆಗೆ ತಿರುಗುತ್ತಿದ್ದಾರೆ. ರಾಸಾಯನಿಕ ಕೃಷಿಯ ಬದಲು ಸಾವಯವ ಕೃಷಿಯ ಕಡೆಗೆವಾಲುತ್ತಿದ್ದಾರೆ. ಟೀ–ಕಾಫಿಯ ಬದಲು ಹರ್ಬಲ್ ಟೀ ಯತ್ತ ಮುಖ ಮಾಡುತ್ತಿದ್ದಾರೆ. ಏಕದೇವತಾವಾದಿ ಜನರು ಅನೇಕ ದೇವರುಗಳ ಮೇಲೆ ವಿಶ್ವಾಸ ಇಡುತ್ತಿದ್ದಾರೆ. ದೇಶದ 177 ರಾಷ್ಟ್ರಗಳು ಭಾರತದ ಯೋಗ ದಿನದ ನಿರ್ಣಯಕ್ಕೆ ವಿಶ್ವಸಂಸ್ಥೆಯಲ್ಲಿ ಅನುಮೋದನೆ ನೀಡಿವೆ. ಮೋಜು–ಮಸ್ತಿಯಲ್ಲಿ ತೊಡಗಿರುವ ಯುರೋಪ್ ದೇಶಗಳು ಕುಂಭಮೇಳಕ್ಕೆ ಬರುತ್ತಿವೆ. ಇದು ಸನಾತನ ಸಂಸ್ಕೃತಿಯ ಪ್ರಭಾವ. ವಿಶ್ವವು ನಿಧಾನವಾಗಿ ಸನಾತನ ಸಂಸ್ಕೃತಿಯತ್ತ ಹೊರಳುತ್ತಿದೆ, ಈ ಬದಲಾವಣೆ ಯಾರಿಗೂ ಯಾವುದೇ ತೊಂದರೆ ನೀಡದೆ ಆಗುತ್ತಿದೆ ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರರಾದ ಡಾ. ಸುಧಾಂಶು ತ್ರಿವೇದಿ ಅವರು ಪ್ರತಿಪಾದಿಸಿದರು. ಅವರು ಹೊಸ ದೆಹಲಿಯಲ್ಲಿ ಸೇವ್ ಕಲ್ಚರ್ ಸೇವ್ ಭಾರತ್ ಫೌಂಡೇಷನ್ ಮತ್ತು ಸನಾತನ ಸಂಸ್ಥೆಯ ವತಿಯಿಂದ ಆಯೋಜಿಸಲಾದ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಲ್ಲಿ ಮಾತನಾಡುತ್ತಿದ್ದರು.

**ದೆಹಲಿ ಶಂಖನಾದ ಮಹೋತ್ಸವ**

**ಗಜವಾ–ಎ–ಹಿಂದ್‌ಗೆ ವೈಚಾರಿಕವಾಗಿ ಉತ್ತರಿಸಲು ಪ್ರಾರಂಭಿಸಿ – ಕರ್ನಲ್ ಆರ್.ಎಸ್.ಎನ್. ಸಿಂಗ್, ರಾ (ಋಫಾ)ದ ಮಾಜಿ ಅಧಿಕಾರಿ:** ಈ ಮಹೋತ್ಸವದಲ್ಲಿ ರಣಸಂವಾದ – ಭಾರತದ ಯುದ್ಧ ನೀತಿ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ರಾದ (Research and Analysis Wing (RAW) ಮಾಜಿ ಅಧಿಕಾರಿ ಕರ್ನಲ್ ಆರ್. ಎಸ್.ಎನ್. ಸಿಂಗ್ ಅವರು, ನಮ್ಮ ದೇಶದ ಒಳಗೆ ಕೂಡ ಒಂದು ಪಾಕಿಸ್ತಾನ ಇದೆ. ನೇರ ಪಾಕಿಸ್ತಾನದಲ್ಲಿ ನಾವು 'ಆಪರೇಷನ್ ಸಿಂಧೂರ' ನಡೆಸಬಹುದು; ಆದರೆ ದೇಶದೊಳಗಿನ ಪಾಕಿಸ್ತಾನದ ವಿಷಯದಲ್ಲಿ ಏನು ಮಾಡುವುದು? ಈ ಮೂಲಭೂತವಾದಿ ವಿಚಾರಗಳಿಂದ ನಮಗೆ ಅಪಾಯವಿದೆ. ಭಾರತೀಯ ರಾಜಕಾರಣವನ್ನು ನಾವು ಗಮನಿಸಿದಾಗ, ಇಲ್ಲಿನ ದೇಶದ್ರೋಹಿಗಳ ಬೆಂಬಲ ಪಡೆದು ಮತ್ತು ಆಂತರಿಕ ಪಾಕಿಸ್ತಾನಿಗಳ ಸಹಾಯ ಪಡೆದು ಅಧಿಕಾರದಲ್ಲಿ ಇರಬಹುದು ಎಂಬುದು ಕಂಡುಬರುತ್ತದೆ. ನಮ್ಮ ದೇಶದೊಳಗಿನ ಪಾಕಿಸ್ತಾನಿಗಳು ಆಪರೇಷನ್ ಸಿಂಧೂರದಿಂದ ಬಹಳ ದುಃಖಿತರಾಗುತ್ತಾರೆ. ಆದ್ದರಿಂದಲೇ, ಈ ಗಜವಾ–ಎ–ಹಿಂದ್‌ಗೆ ವೈಚಾರಿಕವಾಗಿ ಉತ್ತರಿಸಲು ಪ್ರಾರಂಭಿಸಿ, ಎಂದು ಹೇಳಿದರು.



ವಿಂಗ್ ಕಮಾಂಡರ್ ವಿನಾಯಕ ಡಾವರೆ ಮಾತನಾಡಿ, 'ಆಪರೇಷನ್ ಸಿಂಧೂರದ ಸಮಯದಲ್ಲಿ ನಿಜವಾದ ಕಾರ್ಯಾಚರಣೆ ನಡೆಯಿತು. ಸೇನೆಯು ನಿಖರ ಗುರಿಯನ್ನು ಸಾಧಿಸಿ ಈ ಹಿಂದೆ ಶತ್ರುಗಳ ಮೇಲೆ ಸಣ್ಣ ಪ್ರಮಾಣದ ಕಾರ್ಯಾಚರಣೆಗಳನ್ನು ನಡೆಸಿತ್ತು. 1971ರ ಯುದ್ಧದ ಸಮಯದಲ್ಲಿ 93 ಸಾವಿರ ಪಾಕ್ ಸೈನಿಕರು ಶರಣಾದರು; ಆದರೆ ನೆರೇಟಿವ್ ನಿರೂಪಣೆ ಯುದ್ಧದಲ್ಲಿ ನಾವು ಸೋತೆವು. ಪೂರ್ವ ಪಾಕಿಸ್ತಾನಕ್ಕೆ (ಬಾಂಗ್ಲಾದೇಶ) ಮುಕ್ತಿ ಬಾಹಿನಿಯಿಂದ ಸ್ವಾತಂತ್ರ್ಯ ಸಿಕ್ಕಿತ್ತು. ಅಂದು ಭಾರತವು ಈ ನಿರೂಪಣೆಗೆ ವಿರೋಧಿಸಲಿಲ್ಲ. ಬ್ರಿಗೇಡಿಯರ್ ನಿವೃತ್ತ ಸಂಜಯ ಅಗರ್ವಾಲ್ ಅವರು, ಭಾರತ–ಚೀನಾ 1962 ರ ಯುದ್ಧದ ಬಗ್ಗೆ ಅನೇಕ ಬಾರಿ ಚರ್ಚೆ ಆಗುತ್ತದೆ, ಆದರೆ 1967 ರ ಯುದ್ಧದಲ್ಲಿ ಭಾರತವು ಚೀನಾವನ್ನು ಸೋಲಿಸಿತು, ಎಂಬುದನ್ನೂ ಗಮನದಲ್ಲಿ ಇಡಬೇಕು. ಭಾರತವು ತನ್ನ ಶಕ್ತಿಯನ್ನು ತಿಳಿದುಕೊಳ್ಳಲು ಇಂತಹ ಮಹೋತ್ಸವಗಳ ಅವಶ್ಯಕತೆ ಇದೆ. ದೇಶವು ತನ್ನ ಗುರಿಯನ್ನು ನಿರ್ಧರಿಸಬೇಕು, ಎಂದರು.

ಯೂತ್ ಫಾರ್ ಪನೂನ್ ಕಾಶ್ಮೀರ್'ನ ಅಧ್ಯಕ್ಷರಾದ ಶ್ರೀ ರಾಹುಲ್ ಕೌಲ್, ಅವರು ಕಾಶ್ಮೀರಿ ಹಿಂದೂಗಳ ಸಂಘರ್ಷದ ಕುರಿತು ಹೇಳುತ್ತಾ, ಕಾಶ್ಮೀರಿ ಹಿಂದೂಗಳ ವಂಶಹತ್ಯೆ ಆಯಿತು ಎಂಬುದನ್ನು ಒಪ್ಪಿಕೊಳ್ಳಲು ಸರಕಾರ ಇನ್ನೂ ಸಿದ್ಧವಿಲ್ಲ.

ಪ್ರವಾಸೋದ್ಯಮದಿಂದ ಭಯೋತ್ಪಾದನೆ ನಿಲ್ಲುತ್ತದೆ ಎಂಬ ಭ್ರಮೆಯಲ್ಲಿ ಯಾರೂ ಇರಬಾರದು. ಜಗ್ತಿ ಜಮ್ಮುವಿನಲ್ಲಿ ಜನವರಿ 16, 2026 ರಿಂದ ವಿಶೇಷ ಅಭಿಯಾನವನ್ನು ಪ್ರಾರಂಭಿಸುತ್ತಿದ್ದೇವೆ. ಜಮ್ಮು ಕಾಶ್ಮೀರದ ಹಿಂದೂಗಳಿಗೆ ದೇಶದ ಎಲ್ಲಾ ಹಿಂದೂಗಳ ಸಹಕಾರದ ಅವಶ್ಯಕತೆ ಇದೆ, ಎಂದು ತಿಳಿಸಿದರು. ದೂರದರ್ಶನ (ಡಿಡಿ) ನ್ಯೂಸ್‌ನ ಸಂಪಾದಕರಾದ ಶ್ರೀ. ಅಶೋಕ ಶ್ರೀವಾಸ್ತವ ಅವರು, ಕೆಲವು ರಾಜಕೀಯ ನಾಯಕರು ಹಿಂದುತ್ವವನ್ನು ಡೆಂಗ್ಯೂ, ಮಲೇರಿಯಾ, ಏಡ್ಸ್ ಎಂದು ಕರೆಯುತ್ತಾರೆ, ಆಗ ಮಾಧ್ಯಮಗಳು ಮೌನವಾಗಿರುತ್ತವೆ. ಸದ್ಯ ಇಸ್ಲಾಮೋಫೋಬಿಯಾ ಕುರಿತು ಚರ್ಚೆ ನಡೆಯುತ್ತಿದೆ. ವಾಸ್ತವದಲ್ಲಿ ಹಿಂದೂಫೋಬಿಯಾ (ಹಿಂದೂಗಳ ಕುರಿತು ದ್ವೇಷ) ಪ್ರಚಂಡ ಪ್ರಮಾಣದಲ್ಲಿದೆ. ಹಿಂದೂಫೋಬಿಯಾ ಕುರಿತು ಒಂದು ವರದಿ ಇದೆ. ಭಾರತದಲ್ಲಿ ಡಿಸೆಂಬರ್ 2025 ರ ಮೊದಲ 11 ದಿನಗಳಲ್ಲಿ ಕೇವಲ ಹಿಂದೂಗಳು ಎಂಬ ಕಾರಣಕ್ಕೆ ಹಿಂದೂಗಳಿಗೆ ತೊಂದರೆ ನೀಡಿದ 104 ಘಟನೆಗಳು ನಡೆದಿವೆ, ಎಂದು ಹೇಳಿದರು.

# ಕಲಬುರಗಿಯಲ್ಲಿ ಹೊಸ ಪಕ್ಷ ಘೋಷಣೆ: ಮಾಜಿ ಸಚಿವ

## ರಾಜ್ಯದ ಜನರ ಹಿತದೃಷ್ಟಿಯಿಂದ ಕಾಂಗ್ರೇಸ್, ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ಪರ್ಯಾಯವಾಗಿ ತೃತೀಯ ರಂಗ ರಚಿಸಲಾಗುವುದು

• ಉದಯವಾಹಿನಿ, ಕಲಬುರಗಿ:

ಜಿಲ್ಲೆಯಲ್ಲಿಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಿ ಬೃಹತ್ ಸಮಾವೇಶ ಮಾಡಿ 2026ರ ಜ.24ರಂದು ಹೊಸ ಪಕ್ಷ ಘೋಷಣೆ ಮಾಡಿ, ಚಿಹ್ನೆಯನ್ನೂ ಬಿಡುಗಡೆ ಮಾಡಲಾಗುವುದು ಎಂದು ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ತಿಳಿಸಿದರು. ನಗರದಲ್ಲಿ ನವ ಕರ್ನಾಟಕ ನಿರ್ಮಾಣ ಆಂದೋಲನ ಅಡಿಯಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದರು. ರಾಜ್ಯದ ಜನರ ಹಿತದೃಷ್ಟಿಯಿಂದ ಕಾಂಗ್ರೇಸ್, ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ಪರ್ಯಾಯವಾಗಿ ತೃತೀಯ ರಂಗ ರಚಿಸಲಾಗುವುದು ಎಂದು ಹೇಳಿದರು.

**ದಲಿತ, ಮುಸ್ಲಿಮರ ಸಿಎಂ ಮಾಡುವ ತಾಕತ್ ಇಲ್ಲ:** ರಾಜ್ಯದಲ್ಲಿ ದಲಿತ, ಮುಸ್ಲಿಮರನ್ನು ಸಿಎಂ ಮಾಡುವುದಾಗಿ ಹೇಳುವ ಧೈರ್ಯ ಕಾಂಗ್ರೇಸ್, ಬಿಜೆಪಿ ಪಕ್ಷಗಳಿಗಿಲ್ಲ. ಇದೇ ಕಾರಣಕ್ಕಾಗಿ ಹೊಸ ಪಕ್ಷ ಸ್ಥಾಪಿಸಿ ನಮ್ಮ ಪಕ್ಷದಿಂದಲೇ ಮುಸ್ಲಿಂ ಮತ್ತು ದಲಿತರನ್ನು ಮುಖ್ಯಮಂತ್ರಿಯಾಗಿ ಮಾಡುವುದಾಗಿ ತಿಳಿಸಿದರು. ಕಾಂಗ್ರೇಸ್, ಬಿಜೆಪಿ ಮತ್ತು ಜೆಡಿಎಸ್‌ನ ಹಲವಾರು ಶಾಸಕರು ನನ್ನ ಸಂಪರ್ಕದಲ್ಲಿದ್ದಾರೆ. ತೃತೀಯ ರಂಗ ಸೇರಲು ಸಿದ್ಧರಿರುವುದಾಗಿ ತಿಳಿಸಿದ್ದಾರೆ.



> ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಅವರು 2026ರ ಜನವರಿ 24ರಂದು ಕಲಬುರಗಿಯಲ್ಲಿ ಹೊಸ ಪಕ್ಷ ಘೋಷಿಸುವುದಾಗಿ ತಿಳಿಸಿದ್ದಾರೆ. ರಾಜ್ಯದ ಜನರ ಹಿತದೃಷ್ಟಿಯಿಂದ ಕಾಂಗ್ರೇಸ್, ಜೆಡಿಎಸ್‌ಗೆ ಸೇರಿ ಬಿಜೆಪಿಗೆ ಪರ್ಯಾಯವಾಗಿ ರಚಿಸಲಾಗುವುದು ಎಂದರು. ದಲಿತ ಮತ್ತು ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡುವ ಧೈರ್ಯ ಕಾಂಗ್ರೇಸ್, ಬಿಜೆಪಿಗೆ ಇಲ್ಲ, ನಾನು ಹೊಸದಾಗಿ ಕಟ್ಟುವ ಪಕ್ಷದಿಂದಲೇ ಇದು ಸಾಧ್ಯ ಆಗುವುದು.
>
> – ಸಿ.ಎಂ. ಇಬ್ರಾಹಿಂ, ಮಾಜಿ ಸಚಿವ

ಬಸವಣ್ಣ, ಅಂಬೇಡ್ಕರ್ ಸಿದ್ಧಾಂತ ಅಡಿಯಲ್ಲಿ ಎಲ್ಲಾ ಜಾತಿಯವರಿಗೆ ಆದ್ಯತೆ ನೀಡಲು ನವ ಕರ್ನಾಟಕ ನಿರ್ಮಾಣ ಆಂದೋಲನ ಸಮಿತಿ ರಚಿಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿ ಪೂರ್ವಭಾವಿ ಸಭೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

**ಸಿಎಂ ಕುರ್ಚಿಗಾಗಿ ಕಾದಾಟ:** ಸಿಎಂ ಕುರ್ಚಿಗಾಗಿ ಕಾದಾಟ ನಡೆಯುತ್ತಿದೆ. ಸಿದ್ದರಾಮಯ್ಯ, ಶಿವಕುಮಾರ, ಇನ್ನೊಬ್ಬರ ಹೆಸರು ಕೇಳಿ ಬರುತ್ತಿವೆ. ಸ್ಟೇರಿಂಗ್ ಒಬ್ಬರ ಕೈಯಲ್ಲಿ, ಬ್ರೇಕ್ ಇನ್ನೊಬ್ಬರ ಕೈಯಲ್ಲಿಇದ್ದರೆ ಬಸ್ ಅಪಘಾತವಾಗುತ್ತದೆ. ಅದೇ ತರಹ ಸರಕಾರದ ಸ್ಥಿತಿ ಇದೆ ಎಂದು ಲೇವಡಿ ಮಾಡಿದರು. ಒಂದು ಕಡೆ ಯಲ್ಲಮ್ಮನ ಜೋಗ ಉದೋ, ಬೆಳಗ್ಗೆ ಶಿವಕುಮಾರಣ್ಣ ಉದೋ, ಸಾಯಂಕಾಲ ಸಿದ್ದರಾಮಣ್ಣ ಉದೋ ಎನ್ನುವ ಪರಿಸ್ಥಿತಿಯಾಗಿದೆ.

**ಸಿಎಂ ಬದಲಾವಣೆ ಚರ್ಚೆ ಒಳ್ಳೆಯದಲ್ಲ:** ಮೈಸೂರು ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿಮುಖ್ಯಮಂತ್ರಿ ಬದಲಾವಣೆ ಚರ್ಚೆ ಒಳ್ಳೆಯದಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಬದಲಾವಣೆ ನಮ್ಮ ಕೈಯಲ್ಲಿಲ್ಲ. ಹಾಗಾಗಿ ಅಧಿವೇಶನದ ನಡೆಯುವ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚಿಸುವುದು ಒಳ್ಳೆಯ ಬೆಳವಣಿಗೆಯಲ್ಲ. ಅಧಿವೇಶನದಲ್ಲಿ ರಾಜ್ಯದ ಅಭಿವೃದ್ಧಿ ಸಂಬಂಧ ಚರ್ಚೆ ನಡೆಯಬೇಕೆ ವಿನಃ ಅಧಿಕಾರ ಹಂಚಿಕೆಯ ಚರ್ಚೆ ಅನಗತ್ಯ ಎಂದರು. ರಾಜ್ಯದ ಎಲ್ಲಾ 224 ಶಾಸಕರು ಒಗ್ಗಟ್ಟಾಗಿ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡೋಣ. ನಾನು ಬೇರೆ ಬೇರೆ ಕಾರಣಗಳಿಂದ ಅಧಿವೇಶನದಲ್ಲಿ ಭಾಗಿಯಾಗಿಲ್ಲ. ಮುಂದಿನ ಸೋಮವಾರದಿಂದ ಭಾಗಿಯಾಗುತ್ತೇನೆ, ಎಂದರು.

> **ಬಡವರಿಗಾಗಿ ಪಕ್ಷ**
>
> ಬಡವ, ದೀನದಲಿತರ, ತುಳಿತಕ್ಕೊಳಗಾದ ಜನರಿಗಾಗಿ ಪಕ್ಷ ಕಟ್ಟಲಾಗುತ್ತಿದೆ. ದೇವರಿಗೆ ಪೂಜೆ ಮಾಡುವುದರಿಂದ ಸ್ವರ್ಗ ಸಿಗುವುದಿಲ್ಲ. ಹೊರತಾಗಿ ಜನರ ಸೇವೆ ಮಾಡುವುದರಿಂದ ಸ್ವರ್ಗ ಸಿಗಲಿದೆ. ರಾಶಿ, ರಾಮೇಶ್ವರಕ್ಕೆ ಹೋಗುವ ಬದಲು ದಲಿತ ಓಣಿಗಳಿಗೆ ಹೋದರೆ ಜೀವನ ಪಾವನವಾಗುತ್ತದೆ. ಕಲ್ಯಾಣ ಕರ್ನಾಟಕದಿಂದ ಅಧಿಕ ಕ್ಷೇತ್ರಗಳಿಗೆ ನಮ್ಮ ಪಕ್ಷದಿಂದ ಟಿಕೆಟ್ ನೀಡಲಾಗುವುದು ಎಂದು ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಅವರು ಪ್ರಸ್ತಾಪಿಸಿದರು.

# ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಹೆಚ್ಚಿನ ಗಮನಹರಿಸಿ

• ಉದಯವಾಹಿನಿ, ಚಿತ್ರದುರ್ಗ



ಉದಯವಾಹಿನಿ ಚಿತ್ರ

ಕಲಿಕೆಯಲ್ಲಿ ಹಿಂದುಳಿದ, ನಿಧಾನ ಕಲಿಕಾ ಮಕ್ಕಳಿಗೆ ಶಿಕ್ಷಕರು ಹೆಚ್ಚಿನ ಗಮನ ಹರಿಸುವ ಮೂಲಕ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ.100ರಷ್ಟು ತಲುಪಲು ಪ್ರಯತ್ನಿಸಬೇಕು ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲ ಎಂ.ನಾಸಿರುದ್ದೀನ್ ಹೇಳಿದರು. ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಸೋಮವಾರ ಜಿಲ್ಲಾಮಟ್ಟದ ಸಮಾಜ ವಿಜ್ಞಾನ ವಿಷಯ ಶಿಕ್ಷಕರ ಮರುಸಿಂಚನ, ಜ್ಞಾನಸೇತು, ಮೌಲ್ಯಶಿಕ್ಷಣ ಮತ್ತು ಪೋಕ್ಸೊ ಕಾಯಿದೆಗಳ ಆರು ದಿನಗಳ ತರಬೇತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ನಿಯಮಾವಳಿ ಬದಲಾವಣೆಯಿಂದ ಈಗಾಗಲೇ ನೀಲನಕ್ಷೆ ಹಾಗೂ ನಾಲ್ಕು ಮಾದರಿ ಪ್ರಶ್ನೆ ಪತ್ರಿಕೆ ಬಿಡುಗಡೆಯಿಂದ ಮಕ್ಕಳ ಉತ್ತೀರ್ಣಕ್ಕೆ ಸಹಾಯಕವಾಗಬಹುದು ಎಂದು ಅಭಿಪ್ರಾಯಪಟ್ಟರು. ಜಿಲ್ಲೆಯ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಒಂದು ತಿಂಗಳಿಂದ ಸುಮಾರು 580ಕ್ಕೂ ಹೆಚ್ಚು ಮರು ಸಿಂಚನ, ಜ್ಞಾನಸೇತು, ಪೋಕ್ಸೊ, ಮೌಲ್ಯಶಿಕ್ಷಣ, ವೃತ್ತಿ ಮಾರ್ಗದರ್ಶನ, ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ತರಬೇತಿ ನೀಡಲಾಗಿದೆ ಎಂದು ಹೇಳಿದರು. ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ವೃತ್ತಿ ಮಾರ್ಗದರ್ಶನ ಅಗತ್ಯ, ಉತ್ತಮ ಭವಿಷ್ಯ ರೂಪಿಸಲು ಮೌಲ್ಯಶಿಕ್ಷಣ ಅಗತ್ಯವಾಗಿದ್ದು, ಪ್ರಸ್ತುತ ವೃದ್ಧಾಶ್ರಮಗಳು ಹೆಚ್ಚಾಗುತ್ತಿರುವುದರಿಂದ ಸಮಾಜದಲ್ಲಿ ಕಳವಳಕಾರಿ ಸಂಗತಿ ಎಂದು ವಿಷಾಧಿಸಿದರು.

**ಶೇ.100ರಷ್ಟು ಫಲಿತಾಂಶಕ್ಕೆ ಶ್ರಮಿಸಿ**

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಆರ್. ಮಂಜುನಾಥ್ ಮಾತನಾಡಿ, ಬರದನಾಡು ಚಿತ್ರದುರ್ಗ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರೆಯುತ್ತಿದ್ದು, ಎಲ್ಲಾ ವಿಷಯ ಶಿಕ್ಷಕರು ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ ಪರೀಕ್ಷಾ ಭಯ ಹೋಗಲಾಡಿಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ತರಲು ಶ್ರಮಿಸಬೇಕು ಎಂದು ಹೇಳಿದರು.

ತರಬೇತಿಯ ನೋಡಲ್ ಅಧಿಕಾರಿ ಜ್ಞಾನೇಶ್ವರಿ ಪ್ರಾಸ್ತಾವಿಕವಾಗಿ ಮಾತನಾಡಿ, ತರಬೇತಿಯು ಫಲಿತಾಂಶ ಸುಧಾರಣೆ ಸಹಾಯ ಆಗಬೇಕು ಎಂದು ತರಬೇತಿಯ ರೂಪುರೇಷೆಗಳನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ಸಮಾಜ ವಿಜ್ಞಾನ ವಿಷಯದ ನಿಧಾನ ಕಲಿಕಾ ಮಕ್ಕಳಿಗೆ ಸಿದ್ದಪಡಿಸಿದ ಮಿಷನ್ 40+ ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ವಿಜ್ಞಾನ ವಿಷಯ ಪರಿವೀಕ್ಷಕರಾದ ಕೆ.ಜೆ.ಪ್ರಶಾಂತ, ನಿತ್ಯಾನಂದ, ಡಯಟ್ ಉಪನ್ಯಾಸಕರಾದ ಎಸ್.ರವಿಬಸವರಾಜ್, ರೇವಣ್ಣ, ರಾಮಚಂದ್ರಪ್ಪ ಸೇರಿದಂತೆ ಜಿಲ್ಲೆಯ ಎಲ್ಲಾ ಸಮಾಜ ವಿಜ್ಞಾನ ಶಿಕ್ಷಕರು ಇದ್ದರು.

# ಶಿಕ್ಷಕನಿಗೆ ಚಪ್ಪಲಿ ಹಾರದ ಮೆರವಣಿಗೆ ಪ್ರಕರಣ: ಸವಣೂರು ಸಿಪಿಐ ದೇವಾನಂದ ಅಮಾನತು

• ಉದಯವಾಹಿನಿ, ಹಾವೇರಿ

ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂಬ ಆರೋಪದಡಿ ಸರ್ಕಾರಿ ಉರ್ದು ಶಾಲೆ ಶಿಕ್ಷಕ ಜಗದೀಶ್ ಅವರನ್ನು ಥಳಿಸಿ ಚಪ್ಪಲಿ ಹಾರ ಹಾಕಿ ರಸ್ತೆಗಳಲ್ಲಿ ಮೆರವಣಿಗೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸವಣೂರು ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಹೆಡ್ ಕಾನ್ಸ್‌ಟೆಬಲ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಡಿ. 10ರಂದು ನಡೆದಿದ್ದ ಘಟನೆ ಬಗ್ಗೆ ಪ್ರಾಥಮಿಕ ಮಾಹಿತಿ ಕಲೆಹಾಕಿದ್ದ ಜಿಲ್ಲಾ ಎಸ್‌ಪಿ ಯಶೋಧಾ ವಂಟಗೋಡಿ ಅವರು ದಕ್ಷಿಣ ವಲಯ ದಾವಣಗೆರೆ ಐಜಿಪಿ ಬಿ.ಆರ್. ರವಿಕಾಂತೇಗೌಡ ಅವರಿಗೆ ವರದಿ ಸಲ್ಲಿಸಿದ್ದರು. ವರದಿ ಆಧರಿಸಿ ಇನ್ಸ್‌ಪೆಕ್ಟರ್ ಎಸ್. ದೇವಾನಂದ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಐಜಿಪಿ ಆದೇಶ ಹೊರಡಿಸಿದ್ದಾರೆ. ಇಲಾಖಾ ವಿಚಾರಣೆಗೂ ನಿರ್ದೇಶನ ನೀಡಿದ್ದಾರೆ. ಹೆಡ್ ಕಾನ್ಸ್‌ಟೆಬಲ್ ಮಲ್ಲಿಕಾರ್ಜುನ ಒದನವರ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಎಸ್ಪಿ ಯಶೋಧಾ ಅವರೇ ಆದೇಶಿಸಿದ್ದಾರೆ.

**ಅನೈತಿಕ ಪೊಲೀಸ್‌ಗಿರಿ:** ಡಿ. 10ರಂದು ಸವಣೂರಿನಲ್ಲಿರುವ ಸರ್ಕಾರಿ ಉರ್ದು ಶಾಲೆಗೆ ನುಗ್ಗಿದ್ದ ಪೋಷಕರು, ಸ್ಥಳೀಯರು. ಶಿಕ್ಷಕ ಜಗದೀಶ್ ಅವರನ್ನು ಥಳಿಸಿ ಚಪ್ಪಲಿಯಿಂದ ಹೊಡೆದಿದ್ದರು. ನಂತರ, ಚಪ್ಪಲಿ ಹಾರ ಹಾಕಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿದ್ದರು. 'ಅನೈತಿಕ ಪೊಲೀಸ್‌ಗಿರಿ' ಎಂದು ಆರೋಪಿಸಿದ್ದ ಹಲವು ಸಂಘಟನೆ ಮುಖಂಡರು, ಸವಣೂರು ಬಂದ್‌ಗೂ ಕರೆ ನೀಡಿದ್ದಾರೆ.



ಉದಯವಾಹಿನಿ ಚಿತ್ರ

ಶಿಕ್ಷಕ ತಪ್ಪು ಮಾಡಿದ್ದರೆ, ಕಾನೂನು ಪ್ರಕಾರ ಶಿಕ್ಷೆ ನೀಡಲು ಪೊಲೀಸರು ಹಾಗೂ ನ್ಯಾಯಾಲಯವಿದೆ. ಆದರೆ, ಸ್ಥಳೀಯರೇ ಕಾನೂನು ಕೈಗೆತ್ತಿಕೊಂಡು ಶಿಕ್ಷಕನನ್ನು ಥಳಿಸಿ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿ ಅಪಮಾನ ಮಾಡುವುದು ಯಾವ ನ್ಯಾಯ ಎಂದು ಮುಖಂಡರು ಪ್ರಶ್ನಿಸುತ್ತಿದ್ದಾರೆ.

# ಹದಗೆಟ್ಟ ಚಿತ್ರದುರ್ಗ-ಸೊಲ್ಲಾಪೂರ ರಾಷ್ಟ್ರೀಯ ಹೆದ್ದಾರಿ

• ಉದಯವಾಹಿನಿ, ಕೂಡಲಸಂಗಮ

ಚಿತ್ರದುರ್ಗ- ಸೊಲ್ಲಾಪೂರ ರಾಷ್ಟ್ರೀಯ ಹೆದ್ದಾರಿ 50ರ ಹುನಗುಂದ-ವಿಜಯಪುರ ನಡುವಿನ ರಸ್ತೆ ಸಂಪೂರ್ಣ ಹಾಳಾಗಿದ್ದು, ತಗ್ಗು ಗುಂಡಿಗಳಿಂದ ತುಂಬಿದೆ. ನಿತ್ಯ ಸಂಚರಿಸುವ ವಾಹನ ಸವಾರರು ಸಂಚಾರಕ್ಕೆ ತೊಂದರೆ ಅನುಭವಿಸುವಂತಾಗಿದೆ. ಹುನಗುಂದ- ಕೂಡಲಸಂಗಮ ಕ್ರಾಸ್- ನಿಡಗುಂದಿ ಮಾರ್ಗ ಸಂಪೂರ್ಣ ಹಾಳಾಗಿದ್ದು, ರಸ್ತೆ ಮಧ್ಯೆ ಅಧಿಕ ತಗ್ಗು ಗುಂಡಿಗಳು ತುಂಬಿವೆ. ಕೆಲವು ಕಡೆ ರಸ್ತೆಯೇ ಕಿತ್ತು ಹೋಗಿದೆ. ನಿತ್ಯ ದ್ವಿಚಕ್ರ ವಾಹನ ಸವಾರರು ತಗ್ಗು ಗುಂಡಿಯಿಂದ ಬೀಳುವ ದೃಶ್ಯ ಸಾಮಾನ್ಯವಾಗಿವೆ. ರಾತ್ರಿ ವೇಳೆಯಲ್ಲಿ ದ್ವಿಚಕ್ರ ವಾಹನ ಸವಾರರು ಈ ಮಾರ್ಗದಲ್ಲಿ ಸಂಚಾರ ಮಾಡುವುದೇ ಕಷ್ಟವಾಗಿದೆ.



ಉದಯವಾಹಿನಿ ಚಿತ್ರ

ಬೆಂಗಳೂರು- ತುಮಕೂರ- ಚಿತ್ರದುರ್ಗ- ಹೊಸಪೇಟೆ- ವಿಜಯಪುರ- ಸೊಲ್ಲಾಪೂರ ನಡುವೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದೆ. ಈ ಮಾರ್ಗದಲ್ಲಿ ಅಧಿಕ ಬೃಹತ್ ವಾಹನಗಳು ಸಂಚರಿಸುತ್ತವೆ ಐತಿಹಾಸಿಕ ಪ್ರವಾಸಿ ತಾಣಗಳು, ಧಾರ್ಮಿಕ ತಾಣಗಳು ಇರುವುದರಿಂದ ಅಧಿಕ ಪ್ರಯಾಣಿಕರು ಸಂಚರಿಸುತ್ತಾರೆ. ಹೆದ್ದಾರಿಯ ಹಲವು ಕಡೆ ರಸ್ತೆ ತಿರುವು, ರಸ್ತೆ ವಿಭಜನೆ, ಅಪಘಾತ ವಲಯ, ಜನದಟ್ಟನೆ ಪ್ರದೇಶದ ಸೂಚನಾ ಫಲಕ ಇಲ್ಲದೇ ಇರುವುದರಿಂದ ಅಪಘಾತಗಳು ಅಧಿಕಗೊಂಡಿವೆ.

ಕೂಡಲಸಂಗಮ ಕ್ರಾಸ್, ಬೆಳಗಲ್ಲ ಕ್ರಾಸ್‌ನಲ್ಲಿ ಪ್ಲೈ ಓವರ್ ಕಾಮಕಾರಿ ನಡೆದಿದ್ದು, ಬಸ್‌ಗಳು ನಿಲ್ಲಲು ಸೂಕ್ತ ಜಾಗ ಇಲ್ಲದೇ ಜನರು ಬಸ್ ಹತ್ತಲು, ಇಳಿಯಲು ತೊಂದರೆ ಅನುಭವಿಸುತ್ತಿದ್ದಾರೆ. ಬೃಹತ್ ವಾಹನಗಳು ಬಂದಾಗ ವಾಹನ ದಟ್ಟಣೆ ಅಧಿಕಗೊಂಡು ರಸ್ತೆ ದಾಟಲು ಜನರು ತೊಂದರೆ ಅನುಭವಿಸುವಂತಾಗಿದೆ. ರಸ್ತೆ ಸಂಪೂರ್ಣ ತಗ್ಗು ಗುಂಡಿಗಳಿಂದ ತುಂಬಿದೆ. ಗುಂಡಿ ತಪ್ಪಿಸಲು ಹೋದರೆ ಅಪಾಯ ನಿಶ್ಚಿತ. ರಾತ್ರಿ ವೇಳೆಯಲ್ಲಿ ಸಂಚರಿಸಿದರೆ ಗುಂಡಿಗೆ ಬೀಳುವುದು ನಿಶ್ಚಿತ ಎಂದು ದ್ವಿಚಕ್ರ ವಾಹನ ಸವಾರ ಪರಶುರಾಮ ಕುರಿ ಹೇಳಿದರು.

# ಜಾನಪದ ಕಲಾವಿದರ ಸಂಭ್ರಮ : ಜಾನಪದ ಕಲೆಗಳನ್ನು ಉಳಿಸಿ

• ಉದಯವಾಹಿನಿ, ಕೆಂಭಾವಿ

ಜಾನಪದ ಕಲೆಗಳು ಮತ್ತು ಸಾಹಿತ್ಯವು ನಮ್ಮ ಗ್ರಾಮೀಣ ಸಂಪ್ರದಾಯ, ಪರಂಪರೆ ಮತ್ತು ಕನ್ನಡ ನುಡಿಯ ಮೂಲ ಬೇರುಗಳನ್ನು ಪ್ರತಿಬಿಂಬಿಸುತ್ತವೆ. ಆಧುನಿಕತೆ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ನಮ್ಮ ಜನಪದ ಹಾಡುಗಳು, ಹಬ್ಬಗಳು ಮತ್ತು ಕಲೆಗಳು ಕಣ್ಮರೆಯಾಗುತ್ತಿವೆ ಎಂಬ ಆತಂಕವಿದೆ. ಎಂದು ಶ್ರೀ ದತ್ತಗುರು ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ರಾಯಪ್ಪ. ಎಸ್. ಹೂಗಾರ್ ತಿಳಿಸಿದರು.

ಪಟ್ಟಣದ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಆವರಣದಲ್ಲಿ ಶ್ರೀ ದತ್ತಗುರು ಎಜುಕೇಷನ್ ಟ್ರಸ್ಟ್ ಪರಸನಹಳ್ಳಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ನುಡಿ-ಸಂಸ್ಕೃತಿ ಉಳಿಸಿ ಬೆಳೆಸಬೇಕು ಹಾಗೂ ಜನಪದ ಕಲಾವಿದರ ಸಂಭ್ರಮ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದವರು.

ಯುವಕರು ಮತ್ತು ವಿದ್ಯಾರ್ಥಿಗಳು ಮೊಬೈಲ್ ಮತ್ತು ಆಧುನಿಕ ಅಬ್ಬರಗಳಿಗೆ ಮಾರುಹೋಗದೆ, ನಮ್ಮ ಜಾನಪದ ಸಂಸ್ಕೃತಿಯನ್ನು ಕಲಿಯಬೇಕು, ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ಮುಂದಿನ ಪೀಳಿಗೆಗೆ ಅದನ್ನು ಉಳಿಸಬೇಕು. ಜಾನಪದ ಕಲಾವಿದರ ಸಂಭ್ರಮ ಮತ್ತು ಗೌರವ ಸಮಾಜದ ಕರ್ತವ್ಯವಾಗಿದೆ. ತಲೆಮಾರುಗಳಿಂದ ಈ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಕಲಾವಿದರನ್ನು ಗೌರವಿಸುವುದು ಮತ್ತು ಅವರನ್ನು ಸತ್ಕರಿಸುವುದು ಸಮಾಜದ ಆದ್ಯ ಕರ್ತವ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಬಸವರಾಜ್ ಹೂಗಾರ್, ಭೀಮರಾಯ ಆರ್. ಕುಲಕರ್ಣಿ, ಪುರಸಭೆ ಸದಸ್ಯರಾದ ಮುದೆಪ್ಪ ಪೂಜಾರಿ, ಗುರುನಾಥ ಬ್ಯಾಕೋಡ್, ಅನಿಲ್ ಹೊಸಗೌಡ್ರು, ಪರಶುರಾಮ್ ಸುರಪುರ, ಕಲಾವಿದರಾದ ಶಂಕರ್ ಶಾಸ್ತ್ರೀ, ನಿಂಗಪ್ಪ ಭಜಂತ್ರಿ, ಸಿದ್ದರಾಮ ಭಜಂತ್ರಿ, ಬಸವರಾಜ್ ಹೊಗಾರ್ ಹಾಗೂ ಇತರರು ಹಾಜರಿದ್ದರು.



ಉದಯವಾಹಿನಿ ಚಿತ್ರ

> ಜಾನಪದ ಉಳಿಸಿ, ಬೆಳೆಸಿ ಎಂಬುದು ಕೇವಲ ಘೋಷಣೆಯಲ್ಲ, ನಮ್ಮ ಸಂಸ್ಕೃತಿಯನ್ನು ಜೀವಂತವಾಗಿ ಇಡಲು ಬೇಕಾದ ಸಂಕಲ್ಪ. ಜಾನಪದವು ನಮ್ಮ ನಾಡಿನ ಆತ್ಮ ಮತ್ತು ಮೂಲ ಬೇರು. ಅದನ್ನು ಉಳಿಸಿ, ಮುಂದಿನ ಪೀಳಿಗೆಗೆ ದಾಟಿಸುವ ಮೂಲಕ ನಾವು ನಮ್ಮತನವನ್ನು ಮತ್ತು ಹೆಮ್ಮೆಯನ್ನು ಉಳಿಸಿಕೊಂಡಂತೆ.
>
> –ಬಸವರಾಜ್ ಹೂಗಾರ್
> ಶ್ರೀ ದತ್ತಗುರು ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ

# ಶೂನ್ಯ ದಾಖಲಾತಿ: ಬಾಗಿಲು ಮುಚ್ಚಿದ ಸರ್ಕಾರಿ ಕನ್ನಡ ಶಾಲೆ

• ಉದಯವಾಹಿನಿ, ರಾಣೆಬೆನ್ನೂರು:

ರಾಜ್ಯದಾದ್ಯಂತ ಕರ್ನಾಟಕ ಪಬ್ಲಿಕ್ ಸ್ಕೂಲ್ ಆರಂಭಿಸುವುದಾಗಿ ರಾಜ್ಯ ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಇದರ ನಡುವೆಯೇ, ಶೂನ್ಯ ದಾಖಲಾತಿ ಕಾರಣಕ್ಕೆ ತಾಲ್ಲೂಕಿನ ಕರ್ಲಗೇರಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಂದ್ ಆಗಿದೆ.

ಸುಮಾರು 70 ವರ್ಷಗಳಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ್ದ ಶಾಲೆ, ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದಿಂದಲೇ ಬಾಗಿಲು ಮುಚ್ಚಿದೆ. ಮಕ್ಕಳ ದಾಖಲಾತಿ ಹಾಗೂ ಶಿಕ್ಷಕರ ಕೊರತೆಯಿಂದಾಗಿ ಶಾಲೆಗೆ ಈ ಸ್ಥಿತಿ ಬಂದಿರುವ ಬಗ್ಗೆ ಗ್ರಾಮಸ್ಥರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಕರ್ಲಗೇರಿಯ ಶಾಲೆಯಲ್ಲಿ 1ನೇ ತರಗತಿಯಿಂದ 5 ನೇ ತರಗತಿವರೆಗೆ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು. ಇಬ್ಬರು ಶಿಕ್ಷಕರು ಕೆಲಸ ಮಾಡುತ್ತಿದ್ದರು. ವರ್ಷದಿಂದ ವರ್ಷಕ್ಕೆ ದಾಖಲಾತಿ ಕೊರತೆಯಾಗಿದ್ದರಿಂದ, ಒಬ್ಬ ಶಿಕ್ಷಕರನ್ನು ಬೇರೆಡೆ ವರ್ಗಾಯಿಸಲಾಗಿತ್ತು. ನಂತರ, ಒಬ್ಬರೇ ಶಿಕ್ಷಕರು ಉಳಿದುಕೊಂಡಿದ್ದರು. ಶಾಲೆ ಬಂದ್ ಆಗಿರುವುದರಿಂದ, ಒಬ್ಬ ಶಿಕ್ಷಕರನ್ನು ಇದೀಗ ಬೇರೆ ಶಾಲೆಗೆ ನಿಯೋಜಿಸಲಾಗಿದೆ.

ಶಾಲೆ ಬಂದ್ ಆಗಿರುವುದರಿಂದ, ಅದೇ ಕಟ್ಟಡವನ್ನು ಅಂಗನವಾಡಿಗೆ ಬಿಟ್ಟುಕೊಡಲಾಗಿದೆ.



ಉದಯವಾಹಿನಿ ಚಿತ್ರ

ಶಾಲೆ ಆರಂಭವಾದಾಗಿನ ದಿನದಂದು ಅಂದವಾಗಿದ್ದ ಗೋಡೆಗಳು, ಈಗ ಅಂದ ಕಳೆದುಕೊಂಡಿವೆ. ಶಾಲೆಯಲ್ಲಿ ಕಲಿತಿರುವ ಗ್ರಾಮದ ಹಳೇ ವಿದ್ಯಾರ್ಥಿಗಳು, ಶಾಲೆ ನೆನೆದು ಮರುಕಪಡುತ್ತಿದ್ದಾರೆ.

ಶಾಲಾ ಆವರಣದ ಗೋಡೆ ಹಾಗೂ ಕಟ್ಟಡಕ್ಕೆ ಬಣ್ಣ ಹಚ್ಚಲಾಗಿತ್ತು. ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಶಾಲೆ ಉಳಿಸಲು ಎಲ್ಲಾ ಪ್ರಯತ್ನ ಮಾಡಿದೆವು. ಆದರೆ, ವಿದ್ಯಾರ್ಥಿಗಳ ಪ್ರವೇಶ ಆಗದಿದ್ದರಿಂದ ಶಾಲೆಯನ್ನೇ ಮುಚ್ಚುವ ಪರಿಸ್ಥಿತಿ ಬಂತು ಎಂದು ಎಸ್‌ಡಿಎಂಸಿ ಅಧ್ಯಕ್ಷ ಸುರೇಶ ಬುರಡೀಕಟ್ಟಿ ತಿಳಿಸಿದರು. ಗ್ರಾಮದ ಪ್ರತಿಯೊಬ್ಬರ ಮನೆ ಮನೆಗೆ ತೆರಳಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ ಮನವಿ ಮಾಡಿದೆವು. ಆದರೆ, ಯಾರೊಬ್ಬರೂ ಸೇರಿಸಲಿಲ್ಲ. ಶಿಕ್ಷಣದ ವ್ಯವಸ್ಥೆ ಸರಿ ಇಲ್ಲವೆಂದು ಗ್ರಾಮಸ್ಥರು ಹೇಳಿದರು. ಈಗ ಗ್ರಾಮದಲ್ಲಿರುವ ಸುಮಾರು 40 ಮಕ್ಕಳು, ಖಾಸಗಿ ಶಾಲೆಯತ್ತ ಮುಖ ಮಾಡಿದ್ದಾರೆ. ಕೆಲವರು, ಮಾಕನೂರಿನಲ್ಲಿರುವ ಶಾಲೆಗೆ ಹೋಗುತ್ತಿದ್ದಾರೆ' ಎಂದು ಹೇಳಿದರು.

ನಾನೂ ಇದೇ ಶಾಲೆಯಲ್ಲಿ ಓದಿದ್ದೇನೆ. ಇದೇ ಶಾಲೆಯ ವಿದ್ಯಾರ್ಥಿಯಾದ ನನ್ನ ತಮ್ಮ, ಇಂದು ಬೆಂಗಳೂರಿನಲ್ಲಿ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ನಮ್ಮ ಕಣ್ಣೆದುರೇ ಶಾಲೆ ಮುಚ್ಚಿರುವುದನ್ನು ನೋಡಿ ದುಃಖವಾಗುತ್ತಿದೆ. ಹಳೇ ವಿದ್ಯಾರ್ಥಿಗಳ ಸಹಾಯದಿಂದ ಶಾಲೆ ಅಭಿವೃದ್ಧಿಪಡಿಸಲು ಮುಂದಾದರೂ ಪ್ರಯೋಜನ ಆಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

> ತಾಲ್ಲೂಕಿನ ಕರ್ಲಗೇರಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ದಾಖಲಾತಿ ಕಾರಣಕ್ಕಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ. ದಾಖಲಾತಿಗಾಗಿ ಎರಡು ವರ್ಷ ಕಾಯುತ್ತೇವೆ.
>
> –ಶಾಮಸುಂದರ ಅಡಿಗ,
> ಕ್ಷೇತ್ರ ಶಿಕ್ಷಣಾಧಿಕಾರಿ

# ಪ್ರಧಾನಮಂತ್ರಿ ಜನೌಷಧ ವಹಿವಾಟಿನಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನ

• ಉದಯವಾಹಿನಿ, ಶಿವಮೊಗ್ಗ

ದುಬಾರಿ ದರದಲ್ಲಿ ಔಷಧಗಳ ಖರೀದಿಯೇ ದೊಡ್ಡ ಸವಾಲಾದಾಗ ಕೇಂದ್ರ ಸರಕಾರ 'ಜನೌಷಧ ಕೇಂದ್ರ'ಗಳನ್ನು ಆರಂಭಿಸಿತು. ಅದಕ್ಕೀಗ ಕರುನಾಡಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಕ್ಟೋಬರ್ ವರದಿಯಂತೆ ವಹಿವಾಟಿನಲ್ಲಿ ರಾಜ್ಯ ಮೂರನೇ ಸ್ಥಾನದಲ್ಲಿದೆ. ಬ್ರಾಂಡೆಡ್ ಔಷಧಗಳಿಗೆ 100 ರೂ. ಖರ್ಚಾಗುವುದಾದರೆ, ಜನೌಷಧ ಕೇಂದ್ರದಲ್ಲಿ ಅದೇ ಔಷಧ 10-20 ರೂ.ಗೆ ಲಭ್ಯವಾಗುತ್ತದೆ. ಹೀಗಾಗಿಯೇ ಕಡಿಮೆ ಅವಧಿಯಲ್ಲಿಯೇ 'ಜನೌಷಧ' ಮೆಚ್ಚುಗೆಗೆ ಪಾತ್ರವಾಗಿದೆ.

ಸರಕಾರವೇ ಬಿಡುಗಡೆ ಮಾಡಿರುವ ವರದಿಯಂತೆ, ಖರೀದಿಯಲ್ಲಿ ಸಾರ್ವಜನಿಕರ ಸಂಭಾವ್ಯ ಆರ್ಥಿಕ ಪೋಲು ತಡೆ ಯುವ ಮೂಲಕ ಸಾರ್ವಜನಿಕರ 40 ಸಾವಿರ ಕೋಟಿ ರೂ. ಉಳಿತಾಯವಾಗಿದೆ. ಕೇಂದ್ರ ಸರಕಾರ 2008 ರಲ್ಲಿ ಜನೌಷಧ ಕೇಂದ್ರಗಳನ್ನು ಆರಂಭಿಸಿತು. 2016 ರಲ್ಲಿ ಅದಕ್ಕೆ ಪ್ರಧಾನಮಂತ್ರಿ ಭಾರತೀಯ ಜನೌಷಧ ಕೇಂದ್ರ ಎಂದು ಮರು ನಾಮಕರಣ ಮಾಡಲಾಯಿತು. ಶೇ.50-90ರಷ್ಟು ಕಡಿಮೆ ದರದಲ್ಲಿಔಷಧಗಳನ್ನು ನೀಡುತ್ತಿರುವುದರಿಂದ ಈ ಔಷಧಗಳಿಗೆ ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಬೇಡಿಕೆ ಇದೆ. ಪ್ರಸ್ತುತ ನೋವು ನಿವಾರಕಗಳು ಮತ್ತು ಜ್ವರ ನಿವಾರಕಗಳು, ಆಂಟಿಬಯೋಟಿಕ್ಸ್, ಮಧುಮೇಹ ಔಷಧಗಳು, ಹೃದಯ ರಕ್ತನಾಳದ ಔಷಧ, ಹೃದಯ ಸಂಬಂಧಿ ಔಷಧ ಸೇರಿದಂತೆ ಸುಮಾರು 1800 ಜೆನರಿಕ್ ಔಷಧಗಳನ್ನು ಪೂರೈಸಲಾಗುತ್ತಿದೆ. ಅಲ್ಲದೇ, ಶಸ್ತ್ರಚಿಕಿತ್ಸಾ ಸಾಮಗ್ರಿಗಳು, ಕ್ಯಾತಿಟರ್‌ಗಳು, ಆಯುಷ್ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ.

ರಾಜ್ಯದಲ್ಲಿ1,417 ಜನೌಷಧ ಕೇಂದ್ರಗಳಿದ್ದು, ಅದರಲ್ಲಿ 184 ಸರಕಾರಿ ಆಸ್ಪತ್ರೆಗಳ ಆವರಣದಲ್ಲಿವೆ. ರಾಜ್ಯ ಸರಕಾರ ಆಸ್ಪತ್ರೆಗಳ ಆವರಣದಲ್ಲಿರುವ ಕೇಂದ್ರಗಳ ಬಂದ್‌ಗೆ ಆದೇಶಿಸಿತ್ತು. ಅದನ್ನು ಧಾರವಾಡ ಹೈಕೋರ್ಟ್ ರದ್ದುಗೊಳಿಸಿದೆ. ಇದರಿಂದ ಬಡ ಕುಟುಂಬಗಳಿಗೆ ಪ್ರಯೋಜನವಾಗಲಿದೆ. ರಾಜ್ಯದ ಸರಕಾರ ಆಸ್ಪತ್ರೆಗಳ ಮೆಡಿಕಲ್‌ಗಳಲ್ಲಿಉಚಿತವಾಗಿ ಔಷಧಗಳನ್ನು ನೀಡುತ್ತಿದೆ. ಆದರೆ, ಈಗಲೂ ಹಲವೆಡೆ ಅನೇಕ ಔಷಧಗಳೇ ಲಭ್ಯವಿಲ್ಲ. ಅನಿವಾರ್ಯವಾಗಿ ಬಡ ರೋಗಿಗಳು ಖಾಸಗಿ ಮೆಡಿಕಲ್‌ಗಳತ್ತ ಮುಖ ಮಾಡುವ ಸ್ಥಿತಿ ಇದೆ. ಅಂತಹವರಿಗೆ ಜನೌಷಧ ಕೇಂದ್ರಗಳು ಅನುಕೂಲವಾಗಲಿವೆ.




ಉದಯವಾಹಿನಿ ಚಿತ್ರ

# ಮಿನಿ ನ್ಯೂಸ್

## ಪ. ಪಂಚಾಯಿತಿಗಳ ಅಭಿವೃದ್ಧಿಗೆ 5 ಕೋಟಿ ಅನುದಾನ: ಹುಕ್ಕೇರಿ

• ಉದಯವಾಹಿನಿ, ಚಿಕ್ಕೋಡಿ

ತಾಲ್ಲೂಕಿನ ಹಿರೇಕೋಡಿ, ಅಂಕಲಿ, ಖಡಕಲಾಟ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ, ಚಿಕ್ಕೋಡಿ ಸದಲಗಾ ಶಾಸಕ ಗಣೇಶ ಹುಕ್ಕೇರಿ ಪ್ರಯತ್ನದಿಂದ ಸರ್ಕಾರ ಮೇಲ್ದರ್ಜೆಗೇರಿಸಿದ್ದು ಶ್ಲಾಘನೀಯ ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹೇಳಿದರು. ತಾಲ್ಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಯಿಂದ ನಗರೋತ್ಥಾನ, ಎಸ್ ಎಫ್‌ಸಿ ಹಾಗೂ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಹೆಚ್ಚಿನ ಅನುದಾನದಿಂದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಾಧ್ಯವಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ, ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮನವೊಲಿಸಿ ಮೇಲ್ದರ್ಜೆಗೇರಿಸಲಾಗಿದೆ ಎಂದರು.

ಮೇಲ್ದರ್ಜೇಗೇರಿದ ಖಡಕಲಾಟ, ಅಂಕಲಿ, ಹಿರೇಕೋಡಿ ಪಟ್ಟಣ ಪಂಚಾಯಿತಿಗಳ ಅಭಿವೃದ್ಧಿ ಕಾರ್ಯಕ್ಕೆ ತಲಾ 5 ಕೋಟಿ ಅನುದಾನ ನೀಡುವಂತೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ ಅವರಿಗೆ ಪತ್ರ ಬರೆಯಲಾಗುವುದು ಎಂದರು. ಮುಂಬರುವ ದಿನಗಳಲ್ಲಿ ಚಿಕ್ಕೋಡಿ ಹಾಗೂ ಸದಲಗಾ ಪುರಸಭೆಗಳನ್ನು ಶೀಘ್ರದಲ್ಲಿ ನಗರಸಭೆಗಳನ್ನಾಗಿ, ಯಕ್ಸಂಬಾ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಯತ್ನ ಮಾಡಲಾಗುತ್ತಿದೆ. ಇವುಗಳು ಶೀಘ್ರದಲ್ಲಿಯೇ ಮೇಲ್ದರ್ಜೆಗೇರುವ ಮೂಲಕ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದು' ಭರವಸೆ ನೀಡಿದರು.

## ಸಾವಯವ ಕೃಷಿ ರೈತರಿಗೆ ಲಾಭದಾಯಕ: ಅಬ್ದುಲ್ ಸಾಬ್ ಹೊಸಮನಿ

• ಉದಯವಾಹಿನಿ, ರೋಣ

ರೈತರು ರಾಸಾಯನಿಕಗಳನ್ನು ಬಳಸದೆ ಸಾವಯವ ಮಾದರಿಯಲ್ಲಿ ಕೃಷಿ ನಡೆಸಿದರೆ ಆರೋಗ್ಯದ ಜೊತೆಗೆ ಕೃಷಿ ವೆಚ್ಚಗಳು ಕಡಿಮೆಯಾಗಿ ಲಾಭ ಪಡೆಯಬಹುದು ಎಂದು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ಸಾಬ್ ಹೊಸಮನಿ ಹೇಳಿದರು. ತಾಲ್ಲೂಕಿನ ಕೊತಬಾಳ ಗ್ರಾಮದಲ್ಲಿ ಕೆಎಸ್‌ಎಸ್ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ವತಿಯಿಂದ ನಡೆಯುತ್ತಿರುವ ವಾರ್ಷಿಕ ವಿಶೇಷ ಶಿಬಿರದಲ್ಲಿ ಸಾವಯವ ಕೃಷಿ ಕುರಿತು ಉಪನ್ಯಾಸ ನೀಡಿದರು.

ದೇಶದಲ್ಲಿ ಹಸಿರು ಕ್ರಾಂತಿಯ ನಂತರ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆ ಅತಿಯಾಗಿದ್ದು ಇದರಿಂದ ಮಣ್ಣು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಅಂತರ್ಜಲ ಕೂಡ ಸಂಪೂರ್ಣ ಕಲುಷಿತಗೊಳ್ಳುತ್ತಿದ್ದು ಇದನ್ನು ತಡೆಯಲು ಸಾವಯುವ ಕೃಷಿ ಕೈಗೊಳ್ಳುವುದು ಅವಶ್ಯಕವಾಗಿದೆ.ರೈತರು ಪಶು ಸಾಕಾಣಿಕೆ ಮಾಡುವುದರಿಂದ ಹೈನೋತ್ಪಾದನೆ ಮೂಲಕ ಆದಾಯ ಗಳಿಸಬಹುದು ಜೊತೆಗೆ ಕೃಷಿ ತ್ಯಾಜ್ಯಗಳಿಂದ ಗೊಬ್ಬರ ಉತ್ಪಾದನೆ ಮಾಡಬಹುದಾಗಿರುವುದರಿಂದ ರೈತರಿಗೆ ಉಳಿತಾಯದ ಜೊತೆಗೆ ಅಧಿಕ ಖರ್ಚು ಮಾಡುವುದು ಕಡಿಮೆಯಾಗಿ ಕೃಷಿಯನ್ನು ಲಾಭದಾಯಕ ವನ್ನಾಗಿ ಮಾಡಬಹುದು ಎಂದರು.

## ದ್ವಿಚಕ್ರ ವಾಹನಗಳನ್ನು ಸಾಗಿಸುತ್ತಿದ್ದ ಟ್ರಕ್‌ಗೆ ಬೆಂಕಿ, 40 ಬೈಕ್ ಭಸ್ಮ

• ಉದಯವಾಹಿನಿ, ಬಳ್ಳಾರಿ

ಚೆನ್ನೈನಿಂದ ಬಳ್ಳಾರಿ ನಗರಕ್ಕೆ ದ್ವಿಚಕ್ರ ವಾಹನಗಳನ್ನು ತಂದಿದ್ದ ಟ್ರಕ್ ಬೆಂಕಿಗೆ ಆಹುತಿಯಾಗಿದೆ. ಟ್ರಕ್ ಸಹಿತ 40 ಬೈಕ್‌ಗಳು ಸುಟ್ಟು ಕರಕಲಾಗಿವೆ. ಸೋಮವಾರ ಬೆಳಗ್ಗೆ 5 ಗಂಟೆ ಸುಮಾರಿನಲ್ಲಿ ಈ ಘಟನೆ ನಡೆದಿದ್ದು, ನಾಶಗೊಂಡಿರುವ ದ್ವಿಚಕ್ರವಾಹನಗಳ ಮೌಲ್ಯ 60 ಲಕ್ಷ ಎಂದು ಅಂದಾಜಿಸಲಾಗಿದೆ. ಬಳ್ಳಾರಿ ನಗರದ ಯಮಹಾ ಶೋರೂಂಗೆ 20, ವಿಜಯಪುರದ ಶೋರೂಂಗೆ 20 'ಯಮಹಾ-ಎಫ್ ಝಡ್' ವಾಹನಗಳನ್ನು ಚೆನ್ನೈನಿಂದ ತಂದಿದ್ದ ಲಾರಿಯನ್ನು ಚಾಲಕ ಮಧ್ಯರಾತ್ರಿ ಬಳ್ಳಾರಿ ನಗರದ ಬೈಪಾಸ್ ಬಳಿ ರಸ್ತೆ ಬದಿಯಲ್ಲಿ ಹಾಕಿ ನಿದ್ರೆಗೆ ಜಾರಿದ್ದ ಎನ್ನಲಾಗಿದೆ. ಮುಂಜಾನೆ 5 ಗಂಟೆ ವೇಳೆ ವಾಹನದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಸ್ಥಳೀಯರು ಕೂಡಲೇ ಅಗ್ನಿಶಾಮಕ ಇಲಾಖೆಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ತಂಡ ಸ್ಥಳಕ್ಕೆ ಆಗಮಿಸಿತಾದರೂ ಅಷ್ಟರ ಒಳಗಾಗಿ ವಾಹನಗಳ ಸಹಿತ, ಬೈಕ್‌ಗಳೂ ಬೆಂಕಿಗೆ ಆಹುತಿಯಾಗಿವೆ. ಬೈಕ್ ಅಥವಾ ಟ್ರಕ್‌ನ ಬ್ಯಾಟರಿಯಲ್ಲಿನ ತಾಂತ್ರಿಕ ದೋಷದಿಂದ ಈ ಘಟನೆ ನಡೆದಿರಬಹುದು ಎಂದು ಅಂದಾಜಿಸಲಾಗಿದೆ. ಕಂಪನಿಯ ಅಧಿಕಾರಿಗಳು ಬಂದ ಬಳಿಕ ಎಫ್‌ಐಆರ್ ದಾಖಲಿಸಲಾಗುವುದು ಎಂದು ಗಾಂಧಿನಗರ ಪೊಲೀಸರು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

# ಚಳಿಗೆ ನಡುಗಿದ ಮಲೆನಾಡು: ಶೀತ ಗಾಳಿಗೆ ಜನತೆ ತತ್ತರ

## ಕಡಿಮೆ ತಾಪಮಾನದಿಂದ ಥಂಡಿ ವಾತಾವರಣ, ತಂಪು ಆಹಾರಕ್ಕೆ ಬ್ರೇಕ್ –ಬಿಸಿನೀರು ಸೇವನೆಗೆ ಒತ್ತು

• ಉದಯವಾಹಿನಿ, ಸಕಲೇಶಪುರ

ಜಿಲ್ಲೆಯಲ್ಲಿ ಶೀತಗಾಳಿಯಿಂದ ಚಳಿಯ ಪ್ರಮಾಣ ಹೆಚ್ಚಾಗಿದ್ದು ಜನತೆಯನ್ನು ತತ್ತರಿಸುವಂತೆ ಮಾಡಿದೆ. ಅತ್ಯಂತ ಕಡಿಮೆ 11 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇದರಿಂದ ಜನರಿಗೆ ದಿನನಿತ್ಯದ ಚಟುವಟಿಕೆಗಳಿಗೆ ತೊಡಕಾಗಿ ಪರಿಣಮಿಸಿದೆ. ಮಲೆನಾಡು ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ಚಳಿಯಿದೆಯಾದರೂ ಅಷ್ಟಾಗಿ ಬಾಧಿಸಿರಲಿಲ್ಲ. ಆದರೆ ಕೆಲವು ದಿನಗಳಿಂದ ಅತ್ಯಂತ ಕಡಿಮೆ ತಾಪಮಾನ ದಾಖಲಾಗುತ್ತಿರುವುದರಿಂದ ಜನರನ್ನು ಥಂಡಿಯ ಭೀತಿ ಕಾಡುತ್ತಿದೆ. ನವೆಂಬರ್ ತಿಂಗಳು ಕೊನೆಯ ವಾರ ಸ್ವಲ್ಪ ತಾಪಮಾನ ಇಳಿಕೆಯಾಗಿತ್ತು. ಆದರೆ ನಂತರ ಮತ್ತೆ ಯಥಾಸ್ಥಿತಿ ಇತ್ತು. ಈಗ ಇದ್ದಕ್ಕಿದ್ದಂತೆಯೇ 4ರಿಂದ 6 ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪಮಾನ ಕಡಿಮೆ ದಾಖಲಾಗಿರುವುದು ಜನರನ್ನು ನಡುಗಿಸುತ್ತಿದೆ. ವೃದ್ಧರು, ಮಕ್ಕಳಂತೂ ಚಳಿಯಿಂದ ಅನಾರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಡೀ ದಿನ ಥಂಡಿಯ ವಾತಾವರಣ ಕಂಡುಬರುತ್ತಿದೆ. ಶೀತಗಾಳಿಯ ಪರಿಣಾಮ ಮೈ ನಡುಗಿಸುತ್ತಿದೆ. ಸಂಜೆಯಾಗುತ್ತಿದ್ದಂತೆಯೇ ಚಳಿಯ ಪ್ರಮಾಣ ಏರಿಕೆಯಾಗುತ್ತಿದ್ದು, ಬೆಳಗ್ಗೆ 10ರವರೆಗೂ ಕಡಿಮೆಯಾಗುತ್ತಿಲ್ಲ. ಇದರಿಂದ ದಿನನಿತ್ಯದ ಚಟುವಟಿಕೆಗಳಿಗೂ ಅಡ್ಡಿಯಾಗಿದೆ.

**11 ಡಿಗ್ರಿ ಸೆಲ್ಸಿಯಸ್ ತಾಪಮಾನ**



ಉದಯವಾಹಿನಿ ಚಿತ್ರ

**ಬೆಚ್ಚನೆಯ ಬಟ್ಟೆಗೆ ಬೇಡಿಕೆ:** ಇಡೀ ದಿನ ಚಳಿ ವಾತಾವರಣ ಇರುತ್ತಿರುವುದರಿಂದ ಜನರು ಚಳಿಯಿಂದ ರಕ್ಷಣೆ ಪಡೆಯಲು ಸ್ವೆಟರ್, ದಪ್ಪನೆಯ ಬಟ್ಟೆ, ಮಫ್ಲರ್, ಹ್ಯಾಂಡ್ ಗೌಸ್‌ಗಳನ್ನು ಧರಿಸುತ್ತಿದ್ದಾರೆ. ಇದರಿಂದ ಬೆಚ್ಚಗಿನ ಬಟ್ಟೆಗಳಿಗೆ ಬೇಡಿಕೆ ಬಂದಿದೆ. ಸಾಧ್ಯವಾದಷ್ಟು ಬಿಸಿ ನೀರು ಕುಡಿಯುತ್ತಿದ್ದು ದೇಹವನ್ನು ಬೆಚ್ಚಗೆ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹಾಗೆಯೇ ಬೆಳಗ್ಗೆ ಬೇಗ ಎದ್ದು ಜಾಗಿಂಗ್, ವಾಕಿಂಗ್ ಹೋಗುವವರ ಸಂಖ್ಯೆ ಕಡಿಮೆಯಾಗಿದೆ. ಬೆಳಗ್ಗೆ ಎದ್ದ ತಕ್ಷಣ ಗ್ರಾಮೀಣ ಪ್ರದೇಶದಲ್ಲಿಸೊಪ್ಪು, ಮರದ ರೆಂಬೆಗಳಿಗೆ ಬೆಂಕಿ ಹಾಕಿ ಚಳಿ ಕಾಯಿಸಿಕೊಳ್ಳುವ ದೃಶ್ಯಗಳು ಕಂಡುಬರುತ್ತಿವೆ. ಇನ್ನು ಸ್ವಲ್ಪ ದಿನ ಇದೇ ರೀತಿ ಥಂಡಿ ವಾತಾವರಣ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಶೀತ ಗಾಳಿಯ ಎಚ್ಚರಿಕೆ ನೀಡಲಾಗಿದೆ. ಸಾರ್ವಜನಿಕರು ಮುಂಜಾಗ್ರತಾ ಕ್ರಮ ವಹಿಸಲು ಸೂಚಿಸಲಾಗಿದೆ.

**ವಾಕಿಂಗ್ ಪ್ರಿಯರಿಗೆ ಕಷ್ಟ:** ಸಾಮಾನ್ಯವಾಗಿ ರಸ್ತೆಗಳಲ್ಲಿ ಮುಂಜಾನೆ 5ರಿಂದ 5.30ಕ್ಕೆ ಎದ್ದು ಬಹಳಷ್ಟು ಜನರು ವಾಕಿಂಗ್ ಹೋಗುತ್ತಾರೆ. ಬಿಪಿ, ಮಧುಮೇಹದಂತಹ ಸಮಸ್ಯೆ ಉಳ್ಳವರು ಮುಂಜಾನೆ ನಡಿಗೆಯನ್ನು ತಪ್ಪಿಸುವುದೇ ಇಲ್ಲ. ಹಾಗೆಯೇ ದೇಹವನ್ನು ಸದೃಢವಾಗಿಟ್ಟುಕೊಳ್ಳಲು ಕೆಲಸಕ್ಕೆ ತೆರಳುವವರೂ ಬೆಳಗ್ಗೆ ವಾಕಿಂಗ್ ಮಾಡುತ್ತಾರೆ. ಆದರೆ ಇಂಥವರಿಗೆ ಸದ್ಯದ ಪರಿಸ್ಥಿತಿಯಲ್ಲಿ ಚಳಿ ಹೆಚ್ಚಳದಿಂದ ತೊಡಕಾಗಿ ಪರಿಣಮಿಸಿದೆ.

**ಪ್ರವಾಸಿಗರು ಖುಷ್:** ಜಿಲ್ಲೆಯ ಚಳಿ ವಾತಾವರಣ ಸ್ಥಳೀಯರಿಗೆ ಕಾಟ ಕೊಡುತ್ತಿದ್ದರೆ, ವೀಕೆಂಡ್‌ನಲ್ಲಿಸಕಲೇಶಪುರ ಭಾಗಕ್ಕೆ ಆಗಮಿಸುವ ಪ್ರವಾಸಿಗರು ಇದನ್ನು ಎಂಜಾಯ್ ಮಾಡುತ್ತಿದ್ದಾರೆ. ಚಳಿಯ ನಡುವೆ ಮಂಜು ಮುಸುಕಿದ ವಾತಾವರಣ ಕಂಡು ಖುಷಿ ಪಡುತ್ತಿದ್ದಾರೆ. ಇನ್ನು ಕೆಲವು ಪ್ರವಾಸಿಗರು ಬೆಳಗ್ಗೆ 11ರವರೆಗೂ ಹೋಂ ಸ್ಟೇನಲ್ಲಿಉಳಿಯುತ್ತಿದ್ದು ನಂತರ ಪ್ರವಾಸ ಮುಂದುವರಿಸುತ್ತಿದ್ದಾರೆ.

> ಮಲೆನಾಡಿನಲ್ಲಿಈ ಹಿಂದೆ ಇಷ್ಟೊಂದು ಚಳಿಯ ವಾತಾವರಣ ಬಂದಿರಲಿಲ್ಲ. ಮಧ್ಯಾಹ್ನ 12 ಗಂಟೆವರೆಗೂ ಚಳಿಯ ವಾತಾವರಣ ಕಡಿಮೆಯಾಗುವುದಿಲ್ಲ. ಇದರಿಂದ ದಿನನಿತ್ಯದ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿದೆ.
>
> –ಪ್ರಸಾದ್ ವಳಲಹಳ್ಳಿ, ಚಂಪಕನಗರ ನಿವಾಸಿ, ಸಕಲೇಶಪುರ.

> ಚಳಿಯ ವಾತಾವರಣ ಇರುವುದರಿಂದ ಮಕ್ಕಳಿಗೆ ಐಸ್‌ಕ್ರೀಮ್ ಸೇರಿದಂತೆ ತಂಪು ಆಹಾರ ನೀಡದಿರುವುದು ಒಳ್ಳೆಯದು. ಬಿಸಿನೀರು ಸೇವನೆ ಮಾಡಬೇಕು. ಹೊರಗಿನ ಜಂಕ್‌ಫುಡ್ ತಿನ್ನುವುದನ್ನು ಕಡಿಮೆ ಮಾಡಬೇಕು.
>
> –ನಿಶ್ಚಿತಾ ಶೆಟ್ಟಿ, ವೈದ್ಯರು, ಸಕಲೇಶಪುರ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ, ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ, ಇಂದು ನಿಮಗೆ ಈ ಮಾತು ಅರ್ಥವಾಗಬಹುದು.

**ವೃಷಭ** ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಿರಲಿ. ಬಿಕ್ಕಟ್ಟಿನ ಸಮಯದಲ್ಲಿ ಸಂಬಂಧಿಗಳೂ ಸಹಾಯ ಮಾಡುತ್ತಾರೆ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ.

**ಮಿಥುನ** ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು. ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ. ಒಂದು ಅಂಚೆಯ ಮೂಲಕ ಬಂದ ಪತ್ರ ಇಡೀ ಕುಟುಂಬಕ್ಕೆ ಸಂತೋಷದ ಸುದ್ದಿ ತರುತ್ತದೆ.

**ಕರ್ಕಾಟಕ** ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ಆದರೆ ವಿಪರೀತವಾಗಿ ತಿನ್ನುವುದು ನಿಮ್ಮ ಮರುದಿನದ ಮುಂಜಾನೆಗೆ ಅಸಮಾಧಾನ ಉಂಟುಮಾಡಬಹುದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಇಂದು ಕೆಲಸದಲ್ಲಿ ಎಲ್ಲದರಲ್ಲೂ ಮೇಲುಗೈ ಸಾಧಿಸಬಹುದು.

**ಸಿಂಹ** ಬಹಳಷ್ಟು ವಿಷಯಗಳು ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ. ಯಾರೋ ವಿಶೇಷ ಭೇಟಿಯಾಗುವ ಸಾಧ್ಯತೆ ಇದೆ

**ಕನ್ಯಾ** ಒತ್ತಡವನ್ನು ಉಪೇಕ್ಷಿಸಬಾರದು. ಇದು ವೇಗವಾಗಿ ತಂಬಾಕು ಮತ್ತು ಮದ್ಯದಷ್ಟೇ ಗಂಭೀರವಾದ ಒಂದು ಸಾಂಕ್ರಾಮಿಕ ರೋಗವಾಗುತ್ತಿದೆ ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಕಾರಣದಿಂದಾಗಿ ಇಂದು ನೀವು ನಿಮ್ಮ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ತುಲಾ** ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ಇಂದಿನ ದಿನ, ನಿಮ್ಮ ಬಳಿ ಸಾಲವನ್ನು ಕೇಳುವ ಮತ್ತು ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ನೀವು ನಿಮ್ಮನ್ನು ತಪ್ಪಿಸುವ ಅಗತ್ಯವಿದೆ.

**ವೃಶ್ಚಿಕ** ಸ್ನೇಹಿತರಿಂದ ಒಂದು ವಿಶೇಷ ಅಭಿನಂದನೆ ಸಂತೋಷದ ಮೂಲವಾಗುತ್ತದೆ. ಇದೇಕೆಂದರೆ ನೀವು ನಿಮ್ಮ ಜೀವನವನ್ನು ಮರಗಳಂತೆ ಮಾಡಿಕೊಳ್ಳುತ್ತೀರಿ–ಅವುಗಳು ತಾವು ಸೂರ್ಯನಡಿ ನಿಂತು ಶಾಖದ ಬೇಗೆ ತಡೆದುಕೊಂಡು ಇತರರಿಗೆ ನೆರಳು ನೀಡುತ್ತವೆ. ಇಲ್ಲದಿದ್ದರೆ ಮುಂಬರುವ ಸಮಯಲ್ಲಿ ನೀವೇ ತೊಂದರೆಗೊಳಗಾಗಬಹುದು.

**ಧನಸ್ಸು** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ಸ್ನೇಹಿತರು ರೋಮಾಂಚಕವಾದದ್ದನ್ನೇನಾದರೂ ಯೋಜಿಸಿ ನಿಮಗೆ ಆನಂದ ತರುತ್ತಾರೆ.

**ಮಕರ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಇಲ್ಲಿಯವರೆಗೆ ಅನಗತ್ಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದವರು ಜೀವನದಲ್ಲಿ ಹಣದ ಪ್ರಾಮುಖ್ಯತೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

**ಕುಂಭ** ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು. ಆಗಾಗ ನಿಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳುವುದು ಸಹಾಯ ಮಾಡುತ್ತದೆ. ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು,

**ಮೀನ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ, ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಹೂಡಿಕೆ ಶಿಫಾರಸು ಮಾಡಲಾಗಿದ್ದರೂ ಸರಿಯಾದ ಸಲಹೆ ಪಡೆಯಬೇಕು.

# ಶಾಮನೂರು ಶಿವಶಂಕರಪ್ಪನವರು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದರು

• ಉದಯವಾಹಿನಿ, ಬಸವನಬಾಗೇವಾಡಿ

ಶಾಮನೂರು ಶಿವಶಂಕರಪ್ಪನವರು ಕೇವಲ ಒಬ್ಬ ವ್ಯಕ್ತಿಯಲ್ಲ, ಅವರೊಂದು ಶಕ್ತಿ. ದಾವಣಗೆರೆಯನ್ನು ವಿದ್ಯಾಕಾಶಿ ಎಂದು ಕರೆಯಲು ಮುಖ್ಯ ಕಾರಣಕರ್ತರು ಇವರು. ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ನ ಮತ್ತು ಅಕ್ಷರ ದಾಸೋಹ ನೀಡುವ ಮೂಲಕ ಬಡವರ ಪಾಲಿನ ಆಶಾಕಿರಣವಾಗಿದ್ದರು ಎಂದು ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ತಿಳಿಸಿದರು.

ಸೋಮುವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ನುಡಿ ನಮನ ಸಲ್ಲಿಸಿ ಮಾತನಾಡಿದ ಅವರು.ರಾಜಕೀಯದಲ್ಲಿ ಸೋಲು-ಗೆಲುವುಗಳನ್ನು ಸಮಚಿತ್ತದಿಂದ ಸ್ವೀಕರಿಸುವ ಅವರ ಗುಣ, ನೇರ ನಡೆ-ನುಡಿ ಮತ್ತು ಶಿಸ್ತು ಇಂದಿನ ಯುವ ಪೀಳಿಗೆಗೆ ಮಾದರಿ. ಒಂಬತ್ತು ದಶಕಗಳನ್ನು




ಪೂರೈಸಿ ಶತಮಾನದತ್ತ ಸಾಗುತ್ತಿರುವ ಸಂದರ್ಭದಲ್ಲಿ ನಮ್ಮನ್ನೆಲ್ಲ ಅಗಲಿದ ಅವರು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದರು ಎಂದು ಹೇಳಿದರು. ಕಾಂಗ್ರೆಸ್ ಮುಖಂಡ ಸಂಗಮೇಶ ಓಲೇಕಾರ ಮಾತನಾಡಿ, ದಾವಣಗೆರೆ ಜಿಲ್ಲೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಯಾಗಿದ್ದಾರೆ ಅದಕ್ಕೆ ಶ್ಯಾಮನೂರು ಶಿವಶಂಕರಪ್ಪ ಅವರು ಕಾರಣ. ಜವಳಿ ಕ್ಷೇತ್ರದ ಅವನತಿ ಪ್ರಾರಂಭವಾದಾಗ ದಾವಣಗೆರೆಗೆ ಒಂದು ಬ್ರ್ಯಾಂಡ್ ಹೆಸರನ್ನು ಶ್ಯಾಮನೂರರು ತಂದುಕೊಟ್ಟರು ಎಂದು ಹೇಳಿದರು. ಈ ಸಂದರ್ಭದಲ್ಲಿ ಪಕ್ಷದ ನಗರ ಘಟಕದ ಅಧ್ಯಕ್ಷ ಸುರೇಶಗೌಡ ಪಾಟೀಲ,ಬ್ಲಾಕ್ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ರವಿ ರಾಠೋಡ, ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಿಣಿ ರುಕ್ಮಿಣಿ ರಾಠೋಡ, ಮುಖಂಡರಾದ ಬಸವರಾಜ ಗೊಳಸಂಗಿ, ಜಟ್ಟಿಂಗರಾಯ ಮಾಲಗಾರ, ಶೇಖರ ಗೊಳಸಂಗಿ, ದಾನ್ನಪ್ಪಗೌಡ ಚನಗೊಂಡ, ಸಂಗಮೇಶ ಜಾಲಗೇರಿ, ಬದ್ರು ಮಣ್ಣೂರ, ಪ್ರವೀಣ ಪೂಜಾರಿ, ಬಸವರಾಜ ಚೌರಿ, ಅಜೀಜ ಬಾಗವಾನ, ಉದಯ ಮಂಗ್ಳೇಕರ, ಜಗದೇವಿ ಗುಂಡಳ್ಳಿ, ದೇವೇಂದ್ರ ಚೌಹಾಣ, ರಮಜಾನ ಹೆಬ್ಬಾಳ, ಸಂಗಯ್ಯ ಕಾಳಹಸ್ತೇಶ್ವರ್ಮಠ, ಅಣ್ಣು ಪತಂಗಿ, ಸಂಗಪ್ಪ ಕ್ವಾಟಿ, ಬಸವರಾಜ ನಾಯ್ಕ, ಸಿದ್ರಾಮ ಪಾತ್ರೋಟಿ, ಪರಶುರಾಮ ಜಮಖಂಡಿ, ಗಂಗೂಬಾಯಿ ಕುಂಬಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಧಾರವಾಡ ಕರ್ನಾಟಕ ವಿವಿ ಆಸ್ತಿ ಕಬಳಿಕೆ ಶಂಕೆ

## ಡ್ರೋಣ್ ಸರ್ವೆ ನಡೆಸಿ ಗಡಿ ಪತ್ತೆ ಹಚ್ಚಲು ಮುಂದಾದ ವಿವಿ, 880 ಎಕರೆ ಆಸ್ತಿಯಲ್ಲಿ ಆಸ್ತಿ ಅತಿಕ್ರಮಣ

• ಉದಯವಾಹಿನಿ, ಧಾರವಾಡ

ವಿದ್ಯಾಕಾಶಿ ಧಾರವಾಡಕ್ಕೆ ಮುಕುಟ ಪ್ರಾಯವಾದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಆಸ್ತಿಯನ್ನು ಕೆಲವೆಡೆ ಅತಿಕ್ರಮಣ ಮಾಡಲಾಗಿದೆ ಎಂಬ ಚರ್ಚೆ ತೀವ್ರಗೊಂಡಿದೆ. ಹೀಗಾಗಿ ತನ್ನ ಆಸ್ತಿ ಗಡಿ ಪತ್ತೆಗೆ ಮುಂದಾಗಿರುವ ಕರ್ನಾಟಕ ವಿಶ್ವವಿದ್ಯಾಲಯ ಇದೀಗ ಡ್ರೋಣ್ ಸರ್ವೆ ಕೈಗೊಳ್ಳಲು ಸಿದ್ಧತೆ ನಡೆಸಿದೆ.

**ಸ್ಪಷ್ಟ ಚಿತ್ರಣ ಮಾತ್ರ ಇಲ್ಲ**

ಮುಂಬೈ ಕರ್ನಾಟಕದ ಕಾಲಘಟ್ಟ ಎಂದರೆ 1950ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ಕರ್ನಾಟಕ ವಿಶ್ವವಿದ್ಯಾಲಯವು ಬಹು ವಿಶಾಲ ಪ್ರದೇಶವನ್ನು ಹೊಂದಿದೆ. ಪ್ರಸ್ತುತ ಅಂದಾಜು 880 ಎಕರೆ ಪ್ರದೇಶ ಹೊಂದಿದೆ ಎಂದು ಹೇಳಲಾಗುತ್ತಿದೆ.

ಆದರೆ, ಈ ಆಸ್ತಿ ಎಲ್ಲಿಂದ ಎಲ್ಲಿಯವರೆಗೆ ಇದೆ ಮತ್ತು ಎಲ್ಲೆಲ್ಲಿ ಕವಿವಿಗೆ ಸಂಬಂಧಿತ ಆಸ್ತಿ ಇದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಇದು ಸಹಜವಾಗಿ ಉದ್ದೇಶಿತ ತಡೆಗೋಡೆ ನಿರ್ಮಾಣಕ್ಕೂ ಅಡಚಣೆಯಾಗಿದೆ.

**ಸರ್ವೇಗೆ ಭರದ ಸಿದ್ಧತೆ:** ಸದ್ಯ ಎಡಿಎಲ್ಆರ್ ನಿವೃತ್ತ ಅಧಿಕಾರಿ ನೇತೃತ್ವದಲ್ಲಿ ಖಾಸಗಿ ಸರ್ವೇ ಕಂಪನಿಯೊಂದಿಗೆ ಡ್ರೋಣ್ ಸರ್ವೇ ನಡೆಸಲು ಕವಿವಿ ನಿರ್ಧರಿಸಿದೆ.

ಇದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆಸಿ ಸರ್ವೇ ಕೈಗೊಳ್ಳಲು ಭರದ ಸಿದ್ಧತೆ ಕೂಡ ನಡೆಸಿದೆ.

ಅಲ್ಲದೇ, ಈ ವರದಿ ಆಧಾರದಲ್ಲಿ ಸರಕಾರದ ಸರ್ವೇ ಅನುಮೋದನೆ ಪಡೆದು ಆಸ್ತಿಯ ಅಧಿಕೃತ ಮುದ್ರೆ ಪಡೆಯುವ ಚಿಂತನೆಯಲ್ಲಿದೆ.

ಆ ಮೂಲಕ ಗಡಿ ಪತ್ತೆ ಹಚ್ಚಿ ವಿಶೇಷ ಯೋಜನೆಯೊಂದನ್ನು ರೂಪಿಸಿ ಗಡಿಯಲ್ಲಿ ತಡೆಗೋಡೆ ನಿರ್ಮಿಸಿ ತನ್ನ ಆಸ್ತಿಯನ್ನು ಸುಪರ್ದಿಗೆ ಪಡೆಯುವ ಉದ್ದೇಶವನ್ನು ಕವಿವಿ ಹೊಂದಿದೆ.

ಈಗಾಗಲೇ ಕವಿವಿ ಒಡೆತನದ 880 ಎಕರೆ ಪ್ರದೇಶದ ವ್ಯಾಪ್ತಿಯಲ್ಲಿ ಹಳಿಯಾಳ ರಸ್ತೆಗೆ ಹೊಂದಿಕೊಂಡಿರುವ 2 ಎಕರೆಗೂ ಅಧಿಕ ಪ್ರದೇಶವನ್ನು ಉನ್ನತ ಶಿಕ್ಷಣ ಅಕಾಡೆಮಿಗೆ ಒದಗಿಸಲಾಗಿದೆ. ಅಲ್ಲದೇ, ಇಲ್ಲಿಯ ಉದಯ ಹಾಸ್ಟೆಲ್ ಬಳಿ 2 ಎಕರೆದಷ್ಟು ಜಾಗವನ್ನು ವಸತಿ ನಿಲಯ ನಿರ್ಮಾಣಕ್ಕೆ ನೀಡಿದೆ. ಉಳಿದ ಎಲ್ಲಾ ಆಸ್ತಿಯು ಕವಿವಿ ಸುಪರ್ದಿಯಲ್ಲಿದೆ ಎಂಬುದು ಸದ್ಯದ ಲೆಕ್ಕದಲ್ಲಿದೆ. ಆದರೆ, ಈ ಆಸ್ತಿಯಲ್ಲಿ ಎಷ್ಟು ಅತಿಕ್ರಮಣವಾಗಿದೆ ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣ ಮಾತ್ರ ಇಲ್ಲ.

**ದೊಡ್ಡ ಸವಾಲು:** ಕೆಲವೆಡೆ ಕವಿವಿಗೆ ಸಂಬಂಧಿತ ಆಸ್ತಿಯನ್ನು ಅತಿಕ್ರಮಣ ಮಾಡಿದ್ದಲ್ಲದೇ, ಖಾಸಗಿ ವ್ಯಕ್ತಿಗಳು ಕಟ್ಟಡ ಕೂಡ ಕಟ್ಟಿರುವ ಮತ್ತು ಸ್ವಂತ ಆಸ್ತಿ ಎಂಬಂತೆ ಕೆಲವರು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುವ ಶಂಕೆಯೂ ಕವಿವಿ ಆಡಳಿತಕ್ಕಿದೆ. ಒಂದು ವೇಳೆ ಆಸ್ತಿ ಕಬಳಿಕೆ ಅತಿಕ್ರಮಣವಾಗಿರುವುದು ಸರ್ವೇಯಲ್ಲಿ ದೃಢವಾದರೆ, ಆಸ್ತಿಯನ್ನು ಹಿಂಪಡೆಯುವ ದೊಡ್ಡ ಸವಾಲು ಕವಿವಿ ಆಡಳಿತಕ್ಕೆ ಎದುರಾಗಲಿದೆ. ಇದನ್ನು ಹೇಗೆ ನಿಭಾಯಿಸಿ ಅತಿಕ್ರಮಣವಾದ ಆಸ್ತಿಯನ್ನು ತನ್ನ ಸುಪರ್ದಿಗೆ ಹಿಂಪಡೆಯಬೇಕೆಂಬುದರ ಚಿಂತೆಯೂ ಕವಿವಿ ಆಡಳಿತವನ್ನು ಕಾಡುತ್ತಿದೆ.

> ಕರ್ನಾಟಕ ವಿಶ್ವವಿದ್ಯಾಲಯದ ಆಸ್ತಿ ಅತಿಕ್ರಮಣವಾಗಿರುವ ಬಗ್ಗೆ ಸಂದೇಹವಿದೆ. ಆದರೆ, ಈ ಬಗ್ಗೆ ಸ್ಪಷ್ಟತೆ ಇಲ್ಲ. ಕವಿವಿ ಆಸ್ತಿಯ ಗಡಿ ಗುರುತಿಸುವ ಉದ್ದೇಶದಿಂದ ಡ್ರೋಣ್ ಸರ್ವೇ ಕೈಗೊಳ್ಳಲು ಯೋಚಿಸಲಾಗಿದೆ. ಇದರಲ್ಲಿ ಅತಿಕ್ರಮಣ ಪತ್ತೆ ಜತೆಗೆ ಕವಿವಿ ಆಸ್ತಿ ಗಡಿಯೂ ಪತ್ತೆಯಾಗಲಿದೆ. ಗಡಿ ಪತ್ತೆ ನಂತರ ತಡೆಗೋಡೆ ನಿರ್ಮಿಸಲು ಯೋಜನೆ ರೂಪಿಸಲಾಗುವುದು.
>
> –ಪ್ರೊ.ಎ.ಎಂ.ಖಾನ್, ಕುಲಪತಿ, ಕವಿವಿ, ಧಾರವಾಡ

### ಕೆಲವೆಡೆ ಮಾತ್ರ ತಡೆಗೋಡೆ

ಕವಿವಿ ತನ್ನ ಅಧೀನದ ಆಸ್ತಿಗೆ ಕೆಲವು ಭಾಗದಲ್ಲಿ ತಡೆಗೋಡೆ ನಿರ್ಮಿಸಿದೆ. ಆದರೆ, ಇನ್ನೂ ಬಹುತೇಕ ಭಾಗದಲ್ಲಿ ತಡೆಗೋಡೆ ನಿರ್ಮಿಸಬೇಕಿದೆ. ತಡೆಗೋಡೆ ಇಲ್ಲದ ಕಾರಣದಿಂದ ಕವಿವಿ ಆವರಣದಲ್ಲಿ ದನಕರುಗಳ ಓಡಾಟ ಸೇರಿದಂತೆ ಕಾಡುಪ್ರಾಣಿಗಳ ದಾಂಗುಡಿಯೂ ಇದೆ. ಇತ್ತೀಚೆಗೆ ಕವಿವಿ ಆವರಣದಲ್ಲಿ ಚಿರತೆ ಕೂಡ ಪ್ರತ್ಯಕ್ಷ ಆಗಿತ್ತು. ಇದರಿಂದ ಕೆಲವು ದಿನಗಳ ಕಾಲ ವಿದ್ಯಾರ್ಥಿಗಳು ಆತಂಕದಲ್ಲಿಯೇ ಓಡಾಡುವಂತಾಗಿತ್ತು. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಮತ್ತು ಅತಿಕ್ರಮಣಕ್ಕೆ ಮೂಗುದಾರ ಹಾಕುವ ನಿಟ್ಟಿನಲ್ಲಿ ತಡೆಗೋಡೆ ನಿರ್ಮಾಣಕ್ಕೆ ಕವಿವಿ ಯೋಚಿಸಿದೆ.



# ಚಿನ್ನ, ಬೈಕ್ ಕಳ್ಳತನ: ಇಬ್ಬರು ಅಪ್ರಾಪ್ತ ಬಾಲಕರ ಬಂಧನ

• ಉದಯವಾಹಿನಿ, ಕಲಬುರಗಿ

ಶಹಾಬಾದ ತಾಲ್ಲೂಕಿನ ಹೊನಗುಂಟ ಗ್ರಾಮದ ಚಂದ್ರಲಾ ಪರಮೇಶ್ವರಿ ಗುಡಿ ಬೀಗ ಮುರಿದು 10 ಗ್ರಾಂ.ಬಂಗಾರದ ಸರ ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಅಂತರರಾಜ್ಯ ಕಳ್ಳನನ್ನು ಮತ್ತು ಶಹಾಬಾದ ನಗರದಲ್ಲಿ ನಡೆದ ಬೈಕ್ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಬ್ಬರು ಅಪ್ರಾಪ್ತ ಬಾಲಕರನ್ನು ಬಂಧಿಸಲಾಗಿದೆ ಎಂದು ಎಸ್‌ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 24.10.2025 ರಂದು ಶಹಾಬಾದ ತಾಲ್ಲೂಕಿನ ಹೊನಗುಂಟಾ ಗ್ರಾಮದ ಚಂದ್ರಲಾ ಪರಮೇಶ್ವರಿ ಗುಡಿ ಬೀಗ ಮುರಿದು 10 ಗ್ರಾಂ.ಬಂಗಾರದ ಸರ ಕಳವು ಮಾಡಿದ ಬಗ್ಗೆ ಮತ್ತು ಶಹಾಬಾದ ನಗರದಲ್ಲಿ ಪದೇ ಪದೇ ಬೈಕ್ ಕಳ್ಳತನ ಪ್ರಕರಣಗಳು ನಡೆಯುತ್ತಿರುವ ಬಗ್ಗೆ ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದವು. ಈ ಎರಡೂ ಪ್ರಕರಣಗಳ ತನಿಖೆಗೆ ಎಸ್‌ಪಿ, ಹೆಚ್ಚುವರಿ ಎಸ್‌ಪಿ, ಶಹಾಬಾದ ಡಿಎಸ್‌ಪಿ ಶಂಕರಗೌಡ ಪಾಟೀಲ, ಪಿಐ ನಟರಾಜ ಲಾಡೆ, ಸಿಬ್ಬಂದಿಗಳನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಚಂದ್ರಲಾ ಪರಮೇಶ್ವರಿ ದೇವಸ್ಥಾನದ ಬೀಗ ಮುರಿದು ಚಿನ್ನದ ಸರ ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ರಾಜ್ಯದ ಪುನಾ ಜಿಲ್ಲೆಯ ಚಿರಾಗ ಅಮರ ರಾಠೋಡ್ ಎಂಬಾತನನ್ನು ಬಂಧಿಸಿ 10 ಗ್ರಾಂ. ಬಂಗಾರದ ಸರ ಮತ್ತು ಶಹಾಬಾದ ನಗರದಲ್ಲಿ ನಡೆದ ಬೈಕ್ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಬ್ಬರು ಅಪ್ರಾಪ್ತ ಬಾಲಕರನ್ನು ಬಂಧಿಸಿ 90 ಸಾವಿರ ರೂ.ಮೌಲ್ಯದ 3 ಬೈಕ್ ಸೇರಿ 1.28 ಲಕ್ಷ ರೂ.ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದೆ ಎಂದು ತಿಳಿಸಿದರು. ಚಂದ್ರಲಾ ಪರಮೇಶ್ವರಿ ದೇವಸ್ಥಾನದ ಬೀಗ ಮುರಿದು ಚಿನ್ನದ ಸರ ಕಳವು ಮಾಡಿದ ಪ್ರಕರಣದಲ್ಲಿ ಇನ್ನೂ ಮೂವರು ಆರೋಪಿಗಳು ತಲೆ ಮರೆಸಿಕೊಂಡಿದ್ದು, ಅವರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಈ ಎರಡೂ ಪ್ರಕರಣಗಳನ್ನು ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ತಂಡದ ಕಾರ್ಯವನ್ನು ಅವರು ಶ್ಲಾಘಿಸಿದರು.

# ಮಾನವ ವನ್ಯಜೀವಿಗಳ ಸಂಘರ್ಷ ತಡೆಗೆ ಸಮನ್ವಯತೆ ಅಗತ್ಯ

• ಉದಯವಾಹಿನಿ, ಬಳ್ಳಾರಿ

ಅರಣ್ಯ ಇಲಾಖೆ ಹಾಗೂ ಪಶು ಸಂಗೋಪನೆ ಇಲಾಖೆಗಳ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಿದಲ್ಲಿ ಮಾನವ- ವನ್ಯಜೀವಿಗಳ ಸಂಘರ್ಷ ತಡೆಗಟ್ಟಬಹುದಾಗಿದೆ ಎಂದು ಬಳ್ಳಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ. ಎನ್.ಬಸವರಾಜ್ ಅವರು ಹೇಳಿದರು. ಅರಣ್ಯ ಇಲಾಖೆ ವತಿಯಿಂದ ವನ್ಯಜೀವಿ ಕಾಯ್ದೆ ಹಾಗೂ ಅಪರಾಧಗಳ ವೈಜ್ಞಾನಿಕ ತನಿಖೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬಳ್ಳಾರಿ ಪ್ರಾದೇಶಿಕ ವಿಭಾಗದ ಅರಣ್ಯ ಅಧಿಕಾರಿ ಸಿಬ್ಬಂದಿಗಳು, ಪಶು ಸಂಗೋಪನೆ ಇಲಾಖೆಯ ಪಶು ವೈದ್ಯಾಧಿಕಾರಿಗಳಿಗೆ ಸಂಡೂರಿನ ಗುರುಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಾರ್ಯಾಗಾರದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ ಹಾಗೂ ಸರ್ಕಾರಿ ನೌಕರರಿಗೆ ಸಂಬಂಧಿಸಿದ ಸೇವಾ ನಿಯಮಗಳ ಬಗ್ಗೆಯೂ ಮಾಹಿತಿ ನೀಡಲಾಯಿತು.

# ಸದನದಲ್ಲಿ ಫಸಲ್ ಬಿಮಾ ಬಗ್ಗೆ ಹುಳುಕು ಹುಡುಕುತ್ತಿರುವ ಈಶ್ವರ್ ಖಂಡ್ರೆ

• ಉದಯವಾಹಿನಿ, ಬೀದರ



ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರಿಗೆ ಫಸಲ್ ಬಿಮಾ ಯೋಜನೆಯಿಂದ ಜಿಲ್ಲೆಯ ರೈತರಿಗೆ ಸರಿಯಾಗಿ ಲಾಭ ಕೊಡಿಸುವಲ್ಲಿ ವಿಫಲವಾಗಿ, ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಫಸಲ್ ಬಿಮಾ ಯೋಜನೆ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಸುಳ್ಳು ಮಾಹಿತಿ ನೀಡುತ್ತಿರುವುದು ನೋಡಿದರೆ ಕುಣಿಯಲು ಬಾರದವ ನೆಲ ಡೊಂಕು ಎನ್ನುವವರಂತೆ ಮಾತನಾಡುತ್ತಿರುವುದು ನಾಚಿಕೆಗೇಡು ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಇದೆ ನಿಯಮದಡಿ ನಾನು ಸಂಸದನಾಗಿದ್ದಾಗ 7 ವರ್ಷದಲ್ಲಿ 600 ಕೋಟಿಗೂ ಅಧಿಕ ಪರಿಹಾರ ಜಿಲ್ಲೆಯ ರೈತರಿಗೆ ಕೊಡಿಸಿದ್ದೆ, ಇವಾಗ ನಿಮ್ಮಿಂದ ಮತ್ತು ನಿಮ್ಮ ಮಗನಿಂದ ಯಾಕೆ ಕೊಡಿಸಲು ಆಗುತ್ತಿಲ್ಲಾ ಇದು ನಿಮ್ಮ ವೈಫಲ್ಯವೋ? ನಿಮ್ಮ ಕುತಂತ್ರವೋ? ಅಥವಾ ನಿಮ್ಮ ರೈತ ವಿರೋಧಿ ನೀತಿಯೋ? ಎಂದು ಖೂಬಾ ಪ್ರಶ್ನಿಸಿದ್ದಾರೆ. ಜೊತೆಗೆ ಈ ವರ್ಷ ಕಲ್ಬುರ್ಗಿ ಜಿಲ್ಲೆಗೂ ಸುಮಾರು 565 ಕೋಟಿಗೂ ಅಧಿಕ ಪರಿಹಾರ ಬರುವ ನಿರೀಕ್ಷೆಯಲ್ಲಿದೆ. ಖಂಡ್ರೆ ಅವರು ಯೋಜನೆ ಪ್ರಾರಂಭವಾದಾಗಿನಿಂದ ಇದರ ಬಗ್ಗೆ ನಿರಂತರ ಅಪಪ್ರಚಾರ ಮಾಡುತ್ತಾ, ರೈತರಿಗೆ ಲಾಭದಿಂದ ವಂಚಿತರಾಗಿ ಮಾಡುವ ಷಡ್ಯಂತ್ರದಿಂದ, ತಂದೆ ಮಗ ಅಧಿಕಾರದಲ್ಲಿದ್ದುಕೊಂಡು ಫಸಲ್ ಬಿಮಾ ಯೋಜನೆ ವಿಫಲ ಮಾಡುವ ಹುನ್ನಾರದಲ್ಲಿದ್ದಾರೆ ಎಂದರು.

# ಸ್ವಾರ್ಥಕ್ಕಾಗಿ ವಕೀಲ ವೃತ್ತಿ ಮಾಡದೆ ಬಡವರ ಪರ, ನಿಸ್ವಾರ್ಥ ಸೇವೆಗೆ ರಾಜು ಕೊರಳ್ಳಿ ಹೆಸರುವಾಸಿ

• ಉದಯವಾಹಿನಿ, ಚಿಂಚೋಳಿ

ಕಲಬುರ್ಗಿ ನ್ಯಾಯಾಲಯದಲ್ಲಿ ಹಿರಿಯ ವಕೀಲ ರಾಜು ಕೊರಳ್ಳಿ ಸ್ವಾರ್ಥಕ್ಕಾಗಿ ವಕೀಲ ವೃತ್ತಿ ಮಾಡದೆ ಬಡವರಿಗೆ,ದಿನದಲಿತರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದು ಇವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವಂತೆ ವಕೀಲ ಶರಣುಪಾಟೀಲ ಮೋತಕಪಳ್ಳಿ ವೃತ್ತಿಪರ ವಕೀಲರಲ್ಲಿ ಮನವಿ ಮಾಡಿದರು.




ಪಟ್ಟಣದ ನ್ಯಾಯಾಲಯದ ವಕೀಲರ ಸಭಾಂಗಣದಲ್ಲಿ ತಾಲ್ಲೂಕಾ ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆಯ ಮತಯಾಚನೆ ಕಾರ್ಯಕ್ರಮದಲ್ಲಿ ಚುನಾವಣೆ ಸ್ಪರ್ಧಿಸಲು ಕಲಬುರ್ಗಿ ಹಿರಿಯ ವಕೀಲರಾದ ರಾಜು ಕೊರಳ್ಳಿಯವರ ಮತಯಾಚನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಕೀಲ ವೃತ್ತಿಯನ್ನು ಜನಸೇವೆಯಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ, ಸ್ಥಳೀಯವರಾಗಿದ್ದು ವಕೀಲರ ಯಾವುದೇ ಸಮಸ್ಯೆಗಳಿದ್ದರೆ ಕಲಬುರ್ಗಿಯಲ್ಲಿ ಸಿಗುತ್ತಾರೆ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹರಿಸುತ್ತಾರೆ ಎಂದರು. ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆ ಆಕಾಂಕ್ಷಿ ಅಭ್ಯರ್ಥಿ ರಾಜು ಕೊರಳ್ಳಿ ಮಾತನಾಡಿ ಈಗಾಗಲೇ ವಕೀಲರು ಮೃತಪಟ್ಟರೆ ಅವರ 15ವರ್ಷ, ಅದಕ್ಕಿಂತ ಮೇಲ್ಪಟ್ಟ ಸೇವೆ ನೋಡಿ ಸಂಘದಿಂದ 4ಲಕ್ಷ ರೂ. ಮತ್ತು 8ಲಕ್ಷ ರೂ.ಪರಿಹಾರ ರೂಪದಲ್ಲಿ ನೀಡುತ್ತಿದ್ದು ಇದರಿಂದ ಯಾವುದೇ ಆರ್ಥಿಕ ನೆರವು ಆಗುವುದಿಲ್ಲ,ನನ್ನನ್ನು ಗೆಲ್ಲಿಸಿದರೆ ಈ ಮೊತ್ತ ಹೆಚ್ಚಿಸಲು ಶ್ರಮಿಸುತ್ತೇನೆ ಮತ್ತು ಕಿರಿಯ ವಕೀಲರಿಗಾಗಿ ಉತ್ತಮ ವಕೀಲ ವೃತ್ತಿ ಸೇವೆ ಮಾಡಲು ಅನುಕೂಲದ ಜೋತೆ ಹಾಗೂ ಅವರಿಗೆ ಮುಂದಿನ ಎಪಿಪಿ ಮತ್ತು ನ್ಯಾಯಾಧೀಶರಾಗಲು ಗುಣಮಟ್ಟದ ತರಬೇತಿ ನೀಡಲಾಗುವುದು. ಬೆಂಗಳೂರು ವಕೀಲರ ಪರಿಷತ್ ಸಬ್ ಬ್ರೆಂಚ್ ಕಲಬುರ್ಗಿಯಲ್ಲಿ ಸ್ಥಾಪನೆಗೆ ಪ್ರಮಾಣಿಕ ಪ್ರಯತ್ನ ಮಾಡಲಾಗುವುದು, ವಕೀಲರ ಸಮಸ್ಯೆಗಳು ಪ್ರಮಾಣಿಕವಾಗಿ ಪರಿಹರಿಸುವ ಪ್ರಯತ್ನ ಮಾಡುತ್ತೇನೆ ನಿಮ್ಮ ಬೆಂಬಲ ಬೇಕು ನನಗೆ ಬಹುಮತದಿಂದ ಗೆಲ್ಲಿಸಿ ನಿಮ್ಮ ಸಲಹೆ ಸೂಚನೆಯಂತೆ ಕೆಲಸ ಮಾಡುತ್ತೇನೆ ಎಂದರು. ವಕೀಲರ ಸಂಘದ ತಾಲ್ಲೂಕಾ ಅಧ್ಯಕ್ಷ ಶಶಿಕಾಂತ ಅಡಕಿ,ಕಲಬುರ್ಗಿಯ ವಕೀಲ ವಿವೇಕ ದೇಸಾಯಿ ಮಾತನಾಡಿದರು. ದೇವೀಂದ್ರಪ್ಪ ಜಾಬೀನ್ ಸ್ವಾಗತಿಸಿದರು, ಚಂದ್ರಶೇಖರ ಮಾಲಸಾ ನಿರೂಪಿಸಿದರು, ಸೂರ್ಯಕಾಂತ ಕರ್ಣಿಕರ್ ವಂದಿಸಿದರು.

**ಸಮಸ್ಯೆಗೆ ಶೀಘ್ರದಲ್ಲೇ ಪರಿಹಾರ**

ಈ ಸಂದರ್ಭದಲ್ಲಿ ವಸಂತಕುಮಾರ ರಾಠೋಡ, ಮಾಣಿಕರಾವ ಗುಲಗಂಜಿ, ಮಲ್ಲಿಕಾರ್ಜುನ ಸುಕಂದ, ಭೀಮಶೆಟ್ಟಿ ಪಾಟೀಲ, ಶ್ರೀನಿವಾಸ ಬಂಡಿ, ರವೀಂದ್ರ ಹೂವಿನಭಾವಿ, ಜಗನ್ನಾಥ ಗಂಜಗಿರಿ, ಸಂಜುಕುಮಾರ ಮೇತ್ರಿ, ಸೂರ್ಯಕಾಂತ ಚಿಂಚೋಳಿ, ನೀಲಕಂಠ ರಾಠೋಡ, ವಿಜಯಕುಮಾರ ರಾಠೋಡ, ಸೂರ್ಯಕಾಂತ ಗಾರಂಪಳ್ಳಿ, ವೀರಶೆಟ್ಟಿ ದೇಸಾಯಿ, ಮಲ್ಲಿಕಾರ್ಜುನ, ಸಿದ್ದು, ಅರುಣ ಹೇಗ್ಡೆ, ಮಾಣಿಕರಾವ ಅಣವಾರ, ಶರಣರೆಡ್ಡಿ, ರಾಮಲಿಂಗ, ಉಮೇಶ ನಿರಾಳ್ಕರ, ಗಿರಿಧರ ಹುಡಗಿ, ಉಮೇಶ ಪಾಟೀಲ ಅನೇಕರಿದ್ದರು.

# ವೈಯಕ್ತಿಕ ಕಾಮಗಾರಿಗಳ ಸದುಪಯೋಗ ಪಡೆದುಕೊಳ್ಳಿ

• ಉದಯವಾಹಿನಿ, ಯಲಬುರ್ಗಾ

ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗುವ ಅಕುಶಲ ಕೂಲಿಕಾರರು ಜಾಗರೂಕರಾಗಿ ಕೆಲಸ ಮಾಡಬೇಕು. ಜತೆಗೆ ಕೂಲಿಕಾರರು ಸಮುದಾಯ ಕಾಮಗಾರಿಗಳಿಗಿಂತ ವೈಯಕ್ತಿಕ ಕಾಮಗಾರಿಗಳ ಸದುಪಯೋಗಪಡಿಸಿಕೊಳ್ಳಬೇಕು ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಮಂಗಳಪ್ಪ ನಾಯಕ ಹೇಳಿದರು.

ತಾಲ್ಲೂಕಿನ ಹಿರೇಮ್ಯಾಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, 2026-27 ನೇ ಸಾಲಿನ ಕ್ರಿಯಾಯೋಜನೆಯನ್ನು ಸಿದ್ದಪಡಿಸಲಾಗುತ್ತಿದ್ದು, ಸಮುದಾಯ ಕಾಮಗಾರಿ ಜತೆಗೆ ರೈತರು ತಮ್ಮ ಜಮೀನನ್ನು ಅಭಿವೃದ್ಧಿಪಡಿಸುವಂತ ಕೃಷಿ ಇಲಾಖೆ, ತೋಟಗಾರಿಕೆ, ಅರಣ್ಯ, ರೇಷ್ಮೆ ಇಲಾಖೆಗಳಲ್ಲಿ ವೈಯಕ್ತಿಕ ಕಾಮಗಾರಿಗಳನ್ನು ಮಾಡಿಕೊಳ್ಳಲು ಅವಕಾಶವಿದೆ. ವೈಯಕ್ತಿಕ ಕಾಮಗಾರಿ ಮಾಡುವುದರಿಂದ 100 ದಿನಗಳ ಕೆಲಸವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ತಾಲ್ಲೂಕು ಐಇಸಿ ಸಂಯೋಜಕರಾದ ಶರಣಪ್ಪ ಹಾಳಕೇರಿ ಮಾತನಾಡಿ, ಕಳೆದ ಮೂರ್ನಾಲ್ಕು ತಿಂಗಳಿಂದ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುವ ಅಕುಶಲ ಕೂಲಿಕಾರರ ಜಾಬ್ ಕಾರ್ಡ್‌ಗಳ ಫಲಾನುಭವಿಗಳಿಗೆ ಇ ಕೆವೈಸಿ ಮಾಡುತ್ತಿದ್ದು, ಎಲ್ಲರೂ ಕಡ್ಡಾಯವಾಗಿ ಇ ಕೆವೈಸಿ ಮಾಡಿಸಿಕೊಳ್ಳಬೇಕು. ಇ ಕೆವೈಸಿ ಮಾಡಿಸಿಕೊಳ್ಳದಿದ್ದರೆ ಎನ್‌ಎಂಎಂಎಸ್ ಮಾಡಲು ಬರುವುದಿಲ್ಲ. ಮುಂದಿನ ವರ್ಷದ ಕ್ರಿಯಾಯೋಜನೆಯಲ್ಲಿ ಹೆಸರು ಸೇರಿಸಬೇಕಾದರೆ ಇ ಕೆವೈಸಿ ಹೊಂದಿರಬೇಕು ಎಂದು ತಿಳಿಸಿದರು.

ಈಗಾಗಲೇ ಹಿರೇಮ್ಯಾಗೇರಿ ಗ್ರಾಮದಲ್ಲಿ ಸಮುದಾಯ ಆಸ್ತಿಗಳ ಸೃಜನೆ ಮಾಡಲಾಗಿದ್ದು, ರೈತರು ವೈಯಕ್ತಿಕ ಕಾಮಗಾರಿಗಳನ್ನು ತಮ್ಮ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬಹುದು. ಮಣ್ಣಿನ ಸವಕಳಿ ತಡೆಗಟ್ಟಬಹುದು. ಅಂತರ್ಜಲ ಮಟ್ಟ ಹೆಚ್ಚಳವಾಗಲು ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಾದ ಮಹಾಂತೇಶ ಬಾಳಿಕಾಯಿ, ಬಿಎಫ್ ಟಿ ಗುರುಬಸಯ್ಯ, ಗ್ರಾಮ ಕಾಯಕ ಮಿತ್ರ ಶ್ರುತಿ ಗಾಣಿಗೇರ, ಕಾಯಕ ಬಂಧುಗಳು, ಅಕುಶಲ ಕೂಲಿಕಾರರು ಹಾಜರಿದ್ದರು.




# ಮೀನು ಮರಿಗಳ ದಾಸ್ತಾನು; ಮತ್ಸ್ಯ ಸಂಜೀವಿನಿ ಯೋಜನೆಗೆ ಚಾಲನೆ

• ಉದಯವಾಹಿನಿ, ಬೀದರ್

ಮತ್ಸ್ಯ ಸಂಜೀವಿನಿ ಯೋಜನೆಯಡಿ ಆಯ್ಕೆಯಾದ ಬೀದರ ಜಿಲ್ಲೆಯ ಚಿಮಕೋಡ ಕೆರೆಯಲ್ಲಿ ಡಾ. ಗಿರೀಶ ದಿಲೀಪ ಬದೋಲೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೀದರ ರವರ ಅಧ್ಯಕ್ಷತೆಯಲ್ಲಿ ಮೀನುಮರಿಗಳನ್ನು ದಾಸ್ತಾನು ಮಾಡುವ ಮೂಲಕ ಯೋಜನೆಗೆ ಚಾಲನೆ ನೀಡಲಾಯಿತು. ಜಿಲ್ಲಾ ಪಂಚಾಯಿತಿ ಮತ್ತು ಬೀದರ ತಾಲ್ಲೂಕು ಪಂಚಾಯಿತಿಯ ಅನುದಾನದಡಿ ಚಿಮಕೋಡ್ ಕೆರೆ ನಿರ್ಮಾಣಗೊಂಡಿದೆ.

ಈ ಕೆರೆ ಎಲ್ಲಾ ಕಾಲದಲ್ಲೂ ನೀರು ಇರುವಂತೆ ನಿರ್ಮಿಸಲಾಗಿದ್ದು, ಇಲಾಖೆಯಿಂದ ಅಭಿವೃದ್ಧಿಪಡಿಸಲಾಗಿದೆ. ಇಂದು ಹತ್ತು ಸಾವಿರ ಮೀನು ಮರಿಗಳನ್ನು ದಾಸ್ತಾನು ಮಾಡಲಾಗಿದ್ದು, ಇದರಿಂದ ಸ್ವಸಹಾಯ ಸಂಘದ ಮಹಿಳೆಯರು ವ್ಯವಸಾಯ ಮಾಡಿ ಆರ್ಥಿಕ ಜೀವನವನ್ನು ಸುಧಾರಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ತಿಳಿಸಿದರು.

# ಸಮುದಾಯದವರೊಬ್ಬರು ಪಡೆದುಕೊಂಡ ಮೊದಲ ವೈದ್ಯಕೀಯ ಪದವಿ

## ಕೊರಗ ಸಮುದಾಯದ ಮೊದಲ ವೈದ್ಯೆ ಡಾ.ಕೆ. ಸ್ನೇಹಾ, ಅಳಿವಿನಂಚಿನ ಸಮುದಾಯದಿಂದ ಸಾಧನೆ

• ಉದಯವಾಹಿನಿ, ಕುಂದಾಪುರ

ಅಳಿವಿನಂಚಿನಲ್ಲಿರುವ ಕರಾವಳಿ ಜಿಲ್ಲೆಯ ಅಪರೂಪದ ಆದಿವಾಸಿ ಬುಡಕಟ್ಟು ಕೊರಗ ಸಮುದಾಯದಲ್ಲಿ ಮೊತ್ತ ಮೊದಲ ಬಾರಿಗೆ ಯುವತಿಯೊಬ್ಬರು ವೈದ್ಯಕೀಯ ಪದವಿ ಪಡೆದು ಸಾಧನೆ ಮೆರೆದಿದ್ದಾರೆ. ತಾಲ್ಲೂಕಿನ ಉಳ್ತೂರು ನಿವಾಸಿ ಗಣೇಶ್ ವಿ. ಮತ್ತು ಜಯಶ್ರೀ ದಂಪತಿಯ ಹಿರಿಯ ಪುತ್ರಿ ಡಾ.ಕೆ. ಸ್ನೇಹಾ ಎ.ಜೆ. ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪೂರೈಸಿ ಇದೀಗ ನ್ಯೂಡೆಲ್ಲಿ ಯುನಿವರ್ಸಿಟಿ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ಎಂಡಿ ಪದವಿ ಪಡೆಯುವ ಮೂಲಕ ಸಮುದಾಯದ ಕೀರ್ತಿ ಬೆಳಗಿದ್ದಾರೆ.



ಇಲ್ಲಿನ ಜೆಎಲ್‌ಬಿ ರಸ್ತೆ ನಿವಾಸಿ ಗಣೇಶ್ ವಿ. ತಾಲ್ಲೂಕು ಕೊರಗ ಶ್ರೇಯೋಭಿವೃದ್ಧಿ ಸಮಿತಿ ಅಧ್ಯಕ್ಷರು ಕಳೆದ 4 ದಶಕಗಳಿಂದ ಸಮುದಾಯದ ಮಕ್ಕಳ ಕಲ್ಯಾಣಕ್ಕಾಗಿ ಕೆಲಸ ಮಾಡಿಕೊಂಡು ಬಂದವರು. ಕೊರಗ ಮಕ್ಕಳ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಉನ್ನತಿಗಾಗಿ ಕುಂಭಾಸಿಯಲ್ಲಿ ಕೊರಗ ಮಕ್ಕಳ ಮನೆ ಸ್ಥಾಪಿಸಿ ನಿರಂತರ ಸಮುದಾಯ ಜಾಗೃತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ವೃತ್ತಿಯಲ್ಲಿ ಶಿಕ್ಷಕಿಯಾಗಿರುವ ಅವರ ಪತ್ನಿ ಜಯಶ್ರೀ ಕೂಡ ಸಮುದಾಯದ ಕಲ್ಯಾಣ ಕಾರ್ಯದಲ್ಲಿ ತೊಡಗಿಸಿಕೊಂಡವರು.

ಸ್ನೇಹಾ ಅವರ ಹಿರಿಯ ಪುತ್ರಿ. ಬಾಲ್ಯದಿಂದಲೂ ಕಲಿಕೆಯಲ್ಲಿ ಚುರುಕಾಗಿದ್ದ ಸ್ನೇಹಾ 1 ರಿಂದ 2ನೇ ತರಗತಿವರೆಗೆ ಅಂಕೋಲಾ, 3 ಮತ್ತು 4ನೇ ತರಗತಿ ಕುಂದಾಪುರ ಹೋಲಿ ರೋಜರಿ, 6ರಿಂದ ಹೈಸ್ಕೂಲ್ ತನಕ ಹೆಬ್ರಿ ಚಾರಾ ನವೋದಯದಲ್ಲಿ ಅಧ್ಯಯನ ನಡೆಸಿದ್ದರು. ಈಕೆಯ ಪ್ರತಿಭೆ ಗುರುತಿಸಿದ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಪಿಯುಸಿಗೆ ಉಚಿತವಾಗಿ ಶಿಕ್ಷಣ ವ್ಯವಸ್ಥೆ ಕಲ್ಪಿಸಿದ್ದರು. ಪಿಯುಸಿಯಲ್ಲಿ ಶೇ.96 ಅಂಕ ಪಡೆದು ಸಿಇಟಿಯಲ್ಲಿ 2264 ರ್ಯಾಂಕ್ ಗಳಿಸಿದ್ದ ಈಕೆಗೆ ಮೆಡಿಕಲ್ ಸೀಟು ಲಭ್ಯವಾಗಿತ್ತು.

ಸರಕಾರ ಕೋಟಾದಡಿ ಕಲಿಕೆಯ ಅವಕಾಶವಿದ್ದರೂ ಹತ್ತಿರದಲ್ಲೇ ಕಲಿಕೆ ಮಾಡಬೇಕೆಂಬ ಹೆತ್ತವರ ಇಚ್ಛೆಯಿಂದ ಮಂಗಳೂರಿನ ಎ.ಜೆ. ಮೆಡಿಕಲ್ ಕಾಲೇಜಿಗೆ ದಾಖಲಿಸಿದ್ದರು. 5 ವರ್ಷದ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿ ಹೊಸದಿಲ್ಲಿಯ ಯುನಿವರ್ಸಿಟಿ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ಎಂಡಿ ಪದವಿ ಪಡೆದು ವೈದ್ಯಕೀಯ ಸೇವೆಗೆ ಧುಮುಕಿದ್ದಾರೆ. ಪುತ್ರಿಯ ಶೈಕ್ಷಣಿಕ ಉನ್ನತಿಗಾಗಿ ತಮ್ಮೆಲ್ಲವನ್ನು ಧಾರೆಯೆರೆಯುವ ಮೂಲಕ ಗಣೇಶ್ ವಿ. ದಂಪತಿ ಸಮುದಾಯದಿಂದ ಮೊದಲ ಬಾರಿಗೆ ವೈದ್ಯೆಯನ್ನು ನಾಡಿಗೆ ಸಮರ್ಪಿಸಿದ್ದಾರೆ. ಅವರ ಕಿರಿಯ ಪುತ್ರಿ ಕೆ. ಸಾಕ್ಷಿ ಸಹ ಪ್ರತಿಭಾನ್ವಿತೆ. ಪ್ರಸ್ತುತ ಗುಜರಾತ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ಸ್‌ನಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಮೈಸೂರಿನ ಕಾವಾದಿಂದ ವಿಜುವಲ್ ಆರ್ಟ್ಸ್ ಪದವಿ ಪಡೆದಿದ್ದಾರೆ. ನೀಟ್ ಬರೆದು ಐಐಟಿಯಲ್ಲಿ 2 ವರ್ಷ ಕಲಿಕೆ ನಿರ್ವಹಿಸಿದ್ದರು. ಈಕೆಯ ಶೈಕ್ಷಣಿಕ ಉನ್ನತಿಯ ಹಿಂದೆಯೂ ಆಳ್ವಾಸ್ ಫೌಂಡೇಶನ್ ಬೆನ್ನೆಲುಬಾಗಿ ನಿಂತಿದೆ.

### ಸ್ಪೀಕರ್ ಯು.ಟಿ.ಖಾದರ್ ಅಭಿನಂದನೆ

ಕೊರಗ ಸಮುದಾಯದ ಪ್ರಪ್ರಥಮ ವೈದ್ಯೆ ಡಾ.ಕೆ. ಸ್ನೇಹಾ ಅವರನ್ನು ಬೆಳಗಾವಿಯ ಚಳಿಗಾಲದ ಅವೇಶದ ವೇಳೆ ಸಭಾಪತಿ ಯು.ಟಿ. ಖಾದರ್ ವಿಡಿಯೋ ಕಾನ್ಫರೆನ್ಸ್ ಮೂಲಕ ಅಭಿನಂದಿಸಿದರು. ಸಮುದಾಯದ ಹಿರಿಮೆ ಹೆಚ್ಚಿಸಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಉಜ್ವಲ ಭವಿಷ್ಯಕ್ಕಾಗಿ ಶುಭ ಹಾರೈಸಿದರು. ಡಾ.ಕೆ. ಸ್ನೇಹಾ ಅವರ ಈ ಸಾಧನೆ ಸಮುದಾಯದ ಯುವಕ ಯುವತಿಯರಿಗೆ ಪ್ರೇರಣೆಯಾಗಲಿ ಎಂದರು.



# ವಚನಗಳಿಂದ ಈ ನೆಲದ ಸಾಂಸ್ಕೃತಿಕ ಶಕ್ತಿ, ಶ್ರೀಮಂತಿಕೆ ಹೆಚ್ಚಾಗಿದೆ

• ಉದಯವಾಹಿನಿ, ಬಸವಕಲ್ಯಾಣ

ವಚನ ಸಾಹಿತ್ಯದಿಂದ ಈ ನೆಲದ ಭಾಷಿಕ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಾಗಿದೆ ಎಂದು ಅಂತರ್ ರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ದೀಪಾ ಭಾಸ್ತಿ ಹೇಳಿದರು. ನಗರದ ಶ್ರೀ ಬಸವೇಶ್ವರ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಬೂಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ದೀಪಾ ಭಾಸ್ತಿ ಅವರೊಂದಿನ ಸಂವಾದ ಸಮಾರಂಭದಲ್ಲಿ ಮಾತನಾಡಿದ ಅವರು, ಪಠ್ಯದ ಮೂಲಕ ಲೋಕವನ್ನು ಗ್ರಹಿಸುವುದಾದರೆ, ವಚನಗಳು ಲೋಕ ಮೀಮಾಂಸೆಯ ಕುರಿತು ಮಾತನಾಡಿದ ಪಠ್ಯ ಎಂದು ಹೇಳಿದರು. ಗ್ರಂಥಾಲಯಗಳು, ಸಾಹಿತ್ಯ ಕೃತಿಗಳು ಸಮಾಜದ ಹಲವು ಮುಖಗಳನ್ನು ತೋರಿಸುವ ಶಕ್ತಿ ಪಡೆದಿವೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಓದುವ, ಓದಿದದನ್ನು ಲೋಕದ ಮೂಲಕ ಗ್ರಹಿಸುವುದು ಮಾಡಬೇಕು ಎಂದರು.


## ದೆಹಲಿಯನ್ನು ಆವರಿಸಿದ ಮಂಜು 60ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದು

**ನವದೆಹಲಿ:** ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ದಟ್ಟವಾದ ಮಂಜು ಆವರಿಸಿದ್ದು, ಕಡಿಮೆ ಗೋಚರತೆಯಿಂದಾಗಿ ಅನೇಕ ವಿಮಾನಗಳ ಕಾರ್ಯಾಚರಣೆಗೆ ತೊಡಕಾಗಿದೆ. ಒಟ್ಟು 60ಕ್ಕೂ ಹೆಚ್ಚು ವಿಮಾನಗಳನ್ನು ರದ್ದುಗೊಳಿಸಲಾಗಿದೆ ಎಂದು ವರದಿಯಾಗಿದೆ. ದೆಹಲಿಗೆ ಬರುವ, ಅಲ್ಲಿಂದ ಹೊರಡುವ 40 ವಿಮಾನಗಳನ್ನು ರದ್ದುಗೊಳಿಸುವುದಾಗಿ ಏರ್ ಇಂಡಿಯಾ ಘೋಷಿಸಿದೆ. ಏತನ್ಮಧ್ಯೆ, ಕೆಲವು ವಿಮಾನಗಳು ವಿಳಂಬವಾಗಬಹುದು ಎಂದು ಇಂಡಿಗೊ ಹೇಳಿದೆ. ದೆಹಲಿ ವಿಮಾನ ನಿಲ್ದಾಣದಲ್ಲಿ ಈವರೆಗೆ 61 ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಜತೆಗೆ 5 ವಿಮಾನಗಳ ಮಾರ್ಗ ಬದಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜತೆಗೆ 250ಕ್ಕೂ ಹೆಚ್ಚು ವಿಮಾನಗಳು ವಿಳಂಬವಾಗಿವೆ ಎಂದೂ ಅವರು ಹೇಳಿದ್ದಾರೆ. ದಟ್ಟವಾದ ಮಂಜಿನಿಂದಾಗಿ ಗೋಚರತೆ ಪ್ರಮಾಣ ಕಡಿಮೆ ಇದೆ. ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಕೆಲವು ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಸದ್ಯ ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಪರಿಸ್ಥಿತಿ ಸುಧಾರಿಸಿದ ಬಳಿಕ ವಿಮಾನಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುವುದು ಎಂದು ಏರ್ ಇಂಡಿಯಾ ಹೇಳಿದೆ. ದಟ್ಟವಾದ ಮಂಜಿನಿಂದಾಗಿ ವಿಮಾನಗಳ ಕಾರ್ಯಾಚರಣೆಗೆ ತೊಡಕಾಗಿದೆ ಎಂದು ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಕಡಿಮೆ ಗೋಚರತೆ ಇರುವುದರಿಂದ ಕೆಲವು ವಿಮಾನಗಳು ವಿಳಂಬ ಆಗಬಹುದು ಎಂದು ಇಂಡಿಗೊ ಪ್ರಕಟಣೆಯಲ್ಲಿ ಹೇಳಿದೆ.

ದಟ್ಟ ಮಂಜಿನಿಂದಾಗಿ ರಸ್ತೆ ಸಂಚಾರವೂ ನಿಧಾನವಾಗಬಹುದು. ವಿಮಾನ ನಿಲ್ದಾಣಕ್ಕೆ ಪ್ರಯಾಣ ಯೋಜಿಸುವಾಗ ಹೆಚ್ಚುವರಿ ಪ್ರಯಾಣ ಸಮಯ ಮೀಸಲಿಡುವಂತೆ ನಾಗರಿಕ ವಿಮಾನಯಾನ ಸಚಿವಾಲಯವು ಪ್ರಯಾಣಿಕರಿಗೆ ಸಲಹೆ ನೀಡಿದೆ.

## ದುಷ್ಕೃತ್ಯಗಳಿಗೆ ಉಗ್ರ ಸಂಘಟನೆಗಳಿಂದ ಎಐ ತಂತ್ರಜ್ಞಾನ ಬಳಕೆ

**ವಾಷಿಂಗ್ಟನ್:** ಇಡೀ ಜಗತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆಯತ್ತ ದಾಪುಗಾಲಿಡುತ್ತಿರುವ ನಡುವೆಯೇ, ಭಯೋತ್ಪಾದಕ ಸಂಘಟನೆಗಳು ಸಹ ತಮ್ಮ ದುಷ್ಕೃತ್ಯಗಳಿಗೆ ಎಐ ತಂತ್ರಜ್ಞಾನವನ್ನು ಬಳಕೆ ಮಾಡುತ್ತಿವೆ ಎಂಬ ಆಘಾತಕಾರಿ ವಿಷಯ ತಿಳಿದುಬಂದಿದೆ. ಉಗ್ರ ಸಂಘಟನೆಗಳು ಯಾವ ರೀತಿಯಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿವೆ ಎಂಬ ಮಾಹಿತಿ ಲಭ್ಯವಾಗಿಲ್ಲ. 'ಹೊಸ ಸದಸ್ಯರ ನೇಮಕಾತಿ, ಡೀಪ್ ಫೇಕ್ ಚಿತ್ರಗಳ ಸೃಷ್ಟಿ, ಸೈಬರ್ ದಾಳಿ ಮುಂತಾದ ಉದ್ದೇಶಗಳಿಗೆ ಉಗ್ರ ಸಂಘಟನೆಗಳು ಎಐ ತಂತ್ರಜ್ಞಾನವನ್ನು ಪ್ರಮುಖ ಸಾಧನವಾಗಿ ಬಳಸಿಕೊಳ್ಳುವ ಅಪಾಯವಿದೆ ಎಂದು ರಾಷ್ಟ್ರೀಯ ಭದ್ರತಾ ತಜ್ಞರು ಮತ್ತು ಗುಪ್ತಚರ ದಳದವರು ಎಚ್ಚರಿಕೆ ನೀಡಿದ್ದಾರೆ.




ಆರ್ಥಿಕವಾಗಿ ಅಷ್ಟೇನೂ ಶಕ್ತವಿರದ, ಹೆಚ್ಚು ಸದಸ್ಯ ಬಲವನ್ನೂ ಹೊಂದಿರದ ಉಗ್ರ ಸಂಘಟನೆಯೂ ಎಐ ತಂತ್ರಜ್ಞಾನದ ಬಲದಿಂದ ತನ್ನ ಕಬಂಧಬಾಹುವನ್ನು ವಿಸ್ತರಿಸುವ ಅಪಾಯವಿದೆ ಎಂದು ತಿಳಿಸಿವೆ. ಎಐ ತಂತ್ರಜ್ಞಾನವನ್ನು ಉಗ್ರ ಕಾರ್ಯಾಚರಣೆಗಳ ಭಾಗವಾಗಿಸಲು 'ಇಸ್ಲಾಮಿಕ್ ಸ್ಟೇಟ್' ಸಂಘಟನೆಯ ಬೆಂಬಲಿಗರಿಗೆ ಇತ್ತೀಚೆಗೆ ವೆಬ್‌ಸೈಟ್ ಮೂಲಕ ಕರೆ ನೀಡಲಾಗಿದೆ. ಉಗ್ರರ ನೇಮಕಾತಿಗೆ ಎಐ ಬಳಸಬಹುದು ಎಂದು ಕೆಲ ಗುಪ್ತಚರ ಸಂಸ್ಥೆಗಳು ಕಳವಳ ವ್ಯಕ್ತಪಡಿಸಿವೆ. ಅವರ ದುಃಸ್ವಪ್ನವನ್ನು ನಿಜವಾಗಿಸೋಣ ಎಂದು ಹೇಳಲಾಗಿದೆ.

# ನಿಮ್ಮ ಫೇಸ್‌ಬುಕ್ ಸೆಟ್ಟಿಂಗ್ ಹೀಗಿರಲಿ

## H-1B ವೀಸಾ ಅರ್ಜಿದಾರರ ಸೋಶಿಯಲ್ ಮಿಡಿಯಾ ಸ್ಕ್ರೀನಿಂಗ್ ಶುರು

**ವಾಷಿಂಗ್ಟನ್:** H-1B ವೀಸಾ ಅರ್ಜಿದಾರರು ಮತ್ತು ಅವರ ಅವಲಂಬಿತರ H-4 ವೀಸಾ ಅರ್ಜಿದಾರರ ಸಾಮಾಜಿಕ ಮಾಧ್ಯಮ ಪರಿಶೀಲನೆಗೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಸೋಮವಾರ ಅಧಿಕೃತವಾಗಿ ಚಾಲನೆ ನೀಡಿದೆ. ಹೊಸ ನಿಯಮದ ಪ್ರಕಾರ H-1Bಮತ್ತು H-4 ಅರ್ಜಿದಾರರ ಸೋಶಿಯಲ್ ಮಿಡಿಯಾಗಳನ್ನು, ರಾಯಭಾರ ಕಚೇರಿಗಳು ಕೂಲಂಕುಶವಾಗಿ ಪರಿಶೀಲನೆ ನಡೆಸಲಿವೆ.




H-1B ಮತ್ತು ಅದರ ಅವಲಂಬಿತ H-4 ವೀಸಾ ಅರ್ಜಿದಾರರ ವರ್ಧಿತ ಪರಿಶೀಲನೆ ಇಂದಿನಿಂದ ಆರಂಭವಾಗಲಿದ್ದು, ಈ ನಿಟ್ಟಿನಲ್ಲಿ ಜಾಗತಿಕ ಅಮೆರಿಕನ್ ರಾಯಭಾರ ಕಚೇರಿಗಳು ವೀಸಾ ಅರ್ಜಿದಾರರ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳ ಪರಿಶೀಲನೆಯನ್ನು ಚುರುಕುಗೊಳಿಸಬೇಕು ಎಂದು ಯುಎಸ್ ವಿದೇಶಾಂಗ ಇಲಾಖೆ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಹೊಸ ಆದೇಶದಲ್ಲಿ ಡಿಸೆಂಬರ್ 15 ರಿಂದ, ಎಲ್ಲಾ H-1B ಅರ್ಜಿದಾರರು ಅವರ ಅವಲಂಬಿತರಿಗೆ ಆನ್‌ಲೈನ್ ಉಪಸ್ಥಿತಿಯ ಪರಿಶೀಲನೆಯನ್ನು ನಡೆಸಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ.

> 1 ಇಂದಿನಿಂದ H-1B ವೀಸಾ ಅರ್ಜಿದಾರರ ಸಾಮಾಜಿಕ ಮಾಧ್ಯಮ ಪ್ರೊಫೈಲ್ ಪರಿಶೀಲನೆ ಕಡ್ಡಾಯ.
>
> 2 H-1B ಮತ್ತು H-4 ವೀಸಾ ಅರ್ಜಿದಾರರ ಸೋಶಿಯಲ್ ಮಿಡಿಯಾ ಸೆಟ್ಟಿಂಗ್ ಬದಲಾಗಬೇಕು.
>
> 3 ಅಮೆರಿಕದ ಕಠಿಣ ವೀಸಾ ಹಂಚಿಕೆ ನಿಯಮಗಳಿಂದ ಸುಸ್ತಾದ ಭಾರತೀಯ ಅರ್ಜಿದಾರರು.

H-1B ವೀಸಾ ಕಾರ್ಯಕ್ರಮದಡಿ ಅಮೆರಿಕದಲ್ಲಿ ನೆಲೆಸುವ ಕನಸು ಕಾಣುವ ಭಾರತೀಯರು, ಇನ್ನು ಮುಂದೆ ತಮ್ಮ ಸಾಮಾಜಿಕ ಮಾಧ್ಯಮ ಅಕೌಂಟ್‌ಗಳ ಎಲ್ಲಾ ಮಾಹಿತಿಯನ್ನು ಹಂಚಿಕೊಳ್ಳಬೇಕು.

**ಸೆಟ್ಟಿಂಗ್ ಬದಲಾಗಬೇಕು:** ವಿದ್ಯಾರ್ಥಿಗಳು, ವಿನಿಮಯ ಸಂದರ್ಶಕರು ಈಗಾಗಲೇ ಸಾಮಾಜಿಕ ಮಾಧ್ಯಮ ಪರಿಶೀಲನೆ ನಿಯಮಕ್ಕೆ ಒಳಪಟ್ಟಿದ್ದರು. ಈಗ ಅಮೆರಿಕದ ವಲಸೆ ಇಲಾಖೆಯು H-1B ಅರ್ಜಿದಾರರು, H-4 ವೀಸಾಗಳ ಮೇಲಿನ ಅವರ ಅವಲಂಬಿತರನ್ನೂ, ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳ ಪರಿಶೀಲನೆಗೆ ಗುರಿಪಡಿಸುವ ನಿರ್ಧಾರ ಕೈಗೊಂಡಿದೆ. ಈ ಪರಿಶೀಲನೆಯನ್ನು ಸುಗಮಗೊಳಿಸಲು H-1B, ಅವರ H-4 ಅವಲಂಬಿತರಿಗೆ, F, M ಮತ್ತು J ವಲಸೆ ರಹಿತ ವೀಸಾಗಳಿಗೆ ಅರ್ಜಿ ಸಲ್ಲಿಸುವ ಎಲ್ಲಾ ಅರ್ಜಿದಾರರು ತಮ್ಮ ಎಲ್ಲಾ ಸಾಮಾಜಿಕ ಮಾಧ್ಯಮ ಪ್ರೊಫೈಲ್ ಗಳಲ್ಲಿನ ಗೌಪ್ಯತಾ ಸೆಟ್ಟಿಂಗ್‌ಗಳನ್ನು ಸಾರ್ವಜನಿಕಕ್ಕೆ ಹೊಂದಿಸಲು ಸೂಚಿಸಲಾಗಿದೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ. ಈ ಹೊಸ ಮಾರ್ಗಸೂಚಿಯ ಹಿನ್ನೆಲೆಯಲ್ಲಿ ಅನೇಕ H-1B ವೀಸಾದಾರರು ತಮ್ಮ ಸಾಮಾಜಿಕ ಮಾಧ್ಯಮ ಪ್ರೊಫೈಲ್ ಪರಿಶೀಲನೆಗೆ, ಭಾರತದಲ್ಲಿ ತಮ್ಮ ಸಂದರ್ಶನಗಳನ್ನು ಮರು ನಿಗದಿಪಡಿಸಿದ್ದಾರೆ. ಹೀಗಾಗಿ H-1B ವೀಸಾ ಸಂದರ್ಶನ ವಿಳಂಬ ಕೂಡ ಆಗುತ್ತಿದೆ. ಹೈದರಾಬಾದ್, ಚೆನ್ನೈ ನಗರಗಳಲ್ಲಿರುವ ಅಮೆರಿಕ ರಾಯಭಾರ ಕಚೇರಿಗಳು, ವೀಸಾ ಸಂದರ್ಶನವನ್ನು ಹೆಚ್ಚಿನ ಪ್ರಮಾಣದಲ್ಲಿ ಮುಂದೂಡುತ್ತಿವೆ.

> **ಸ್ಕ್ರೀನಿಂಗ್ ಏಕೆ?**
> **ಯುಎಸ್ ವೀಸಾ ಒಂದು ಸವಲತ್ತು, ಹಕ್ಕಲ್ಲ ಎಂದು ಪದೇ ಪದೇ ಹೇಳುತ್ತಿರುವ ಅಮೆರಿಕ ವಿದೇಶಾಂಗ ಇಲಾಖೆ, ದೇಶದ ರಾಷ್ಟ್ರೀಯ ಭದ್ರತೆ, ಸಾರ್ವಜನಿಕ ಸುರಕ್ಷತೆಗೆ ಅಪಾಯವನ್ನುಂಟುಮಾಡುವವರು ಸೇರಿದಂತೆ, ಅಮೆರಿಕಕ್ಕೆ ಪ್ರವೇಶಿಸಬಾರದ ವೀಸಾ ಅರ್ಜಿದಾರರನ್ನು ಗುರುತಿಸಲು ಸೋಶಿಯಲ್ ಮಿಡಿಯಾ ಸ್ಕ್ರೀನಿಂಗ್ ಆರಂಭಿಸಿದೆ.**

ಅಮೆರಿಕದ ರಾಯಭಾರ ಕಚೇರಿಗಳು ಪರಿಶೀಲನೆ ವೇಳೆ, ಅರ್ಜಿದಾರರ ಲಭ್ಯವಿರುವ ಎಲ್ಲಾ ಸಾಮಾಜಿಕ ಜಾಲತಾಣಗಳ ಮಾಹಿತಿಯನ್ನು ಕ್ರೋಢೀಕರಿಸುತ್ತದೆ. ಅಲ್ಲದೇ ಪ್ರತಿಯೊಂದು ವೀಸಾ ಅರ್ಜಿಗಳ ಕುರಿತು ತೆಗೆದುಕೊಳ್ಳುವ ನಿರ್ಧಾರವು, ಅಮೆರಿಕದ ರಾಷ್ಟ್ರೀಯ ಭದ್ರತೆಗೆ ಪೂರಕವಾಗಿರುತ್ತದೆ ಎಂದು ವಲಸೆ ಇಲಾಖೆ ಸ್ಪಷ್ಟಪಡಿಸಿದೆ.

ಅಮೆರಿಕಕ್ಕೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸುವವರು, ಅಮೆರಿಕನ್ನರಿಗೆ,ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾನಿ ಮಾಡುವ ಉದ್ದೇಶವನ್ನು ಹೊಂದಿಲ್ಲ ಎಂಬುದನ್ನು ನಾವು ಖಾತರಿಪಡಿಸಿಕೊಳ್ಳುತ್ತೇವೆ.

ಎಲ್ಲಾ ಅರ್ಜಿದಾರರು ತಮ್ಮ ಪ್ರವೇಶದ ನಿಯಮಗಳಿಗೆ ಅನುಗುಣವಾಗಿ ಅಮೆರಿಕದಲ್ಲಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಇದೇ ವೇಳೆ ರಾಯಭಾರ ಕಚೇರಿಗಳಿಗೂ ವೀಸಾ ಅನುಮತಿ ನೀಡುವ ಪ್ರಕ್ರಿಯೆಯಲ್ಲಿ ನಿರ್ದಿಷ್ಟ ನಿಯಮಾವಳಿಗಳನ್ನು ಅನುಸರಿಸುವಂತೆ ಹೊಸ ಅಧಿಸೂಚನೆ ಸಲಹೆ ನೀಡಿದೆ. ಅರ್ಜಿದಾರರು ವೀಸಾಕ್ಕೆ ತಮ್ಮ ಅರ್ಹತೆಯನ್ನು ವಿಶ್ವಾಸಾರ್ಹವಾಗಿ ಸ್ಥಾಪಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳುವಲ್ಲಿ ಹೆಚ್ಚಿನ ಜಾಗರೂಕತೆಯನ್ನು ವಹಿಸುವಂತೆ ರಾಯಭಾರ ಕಚೇರಿಗಳಿಗೆ ನಿರ್ದೇಶನ ನೀಡಲಾಗಿದೆ. ತನ್ನ ವಲಸೆ ನೀತಿಗೆ ಅನುಗುಣವಾಗಿ ಟ್ರಂಪ್ ಆಡಳಿತವು ತೆಗೆದುಕೊಂಡಿರುವ ಇತ್ತೀಚಿನ ಅತ್ಯಂತ ಕಠಿಣ ಕ್ರಮ ಎಂದು ಈ ಹೊಸ ನಿಯಮವನ್ನು ಬಣ್ಣಿಸಲಾಗಿದೆ.

> **ಸೂಕ್ತ ಪರಿಶೀಲನೆಗೆ ಗುರಿ**
> **ಅಮೆರಿಕದಲ್ಲಿ ವಿದೇಶಿ ಕಾರ್ಮಿಕರನ್ನು ನೇಮಿಸಿಕೊಳ್ಳಲು, ತಂತ್ರಜ್ಞಾನ ಕಂಪನಿಗಳು ಬಳಸುವ H-1B ವೀಸಾ ಕಾರ್ಯಕ್ರಮದಲ್ಲಿ ದುರುಪಯೋಗವನ್ನು ಪರಿಶೀಲಿಸಲು, ಟ್ರಂಪ್ ಆಡಳಿತವು ಬೃಹತ್ ಕಠಿಣ ಕ್ರಮವನ್ನು ಪ್ರಾರಂಭಿಸಿದೆ. ಈ ನಿರ್ಧಾರದಿಂದಾಗಿ H-1B ವೀಸಾ ಸಂದರ್ಶನ ಮುಂದೂಡಿಕೆ ಪ್ರಕರಣಗಳು ಹೆಚ್ಚುತ್ತಿದ್ದು, ಭಾರತೀಯ ಅರ್ಜಿದಾರರು ಈ ಕುರಿತು ತಮ್ಮ ತೀವ್ರ ಅಸಮಾಧಾನವನ್ನು ಹೊರಹಾಕುತ್ತಿದ್ದಾರೆ. ಅನೇಕರು ತಮ್ಮ ಭವಿಷ್ಯ ನಿರ್ನಾಮವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ಟ್ರಂಪ್ ಆಡಳಿತವು ಹೊಸ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ರಾಯಭಾರ ಕಚೇರಿಗಳಿಗೆ ಸಂದೇಶ ರವಾನಿಸಿದೆ. ಒಟ್ಟಿನಲ್ಲಿ H-1B, H-4 ವೀಸಾ ಅರ್ಜಿದಾರರು ಇಂದಿನಿಂದ ತಮ್ಮ ಎಲ್ಲಾ ಸೋಶಿಯಲ್ ಮಿಡಿಯಾ ಅಕೌಂಟ್‌ಗಳ ಸೆಟ್ಟಿಂಗ್‌ನ್ನು ಬದಲಾಯಿಸಿ, ಸೂಕ್ತ ಪರಿಶೀಲನೆಗೆ ಗುರಿಯಾಗಬೇಕಿದೆ.**

## ಮಿನಿ ನ್ಯೂಸ್

### ಸಿಡ್ನಿ ಹತ್ಯಾಕಾಂಡ ನಡೆಸಿದ್ದು ಪಾಕ್ ಮೂಲದ ಅಪ್ಪ ಮಗ..!

**ಸಿಡ್ನಿ:** ಆಸ್ಟ್ರೇಲಿಯಾದ ಬೊಂಡಿ ಬೀಚ್‌ನಲ್ಲಿ ಯಹೂದಿಗಳ ಮೇಲೆ ಮನ ಬಂದಂತೆ ಗುಂಡಿನ ದಾಳಿ ನಡೆಸಿ 16 ಜನರನ್ನು ಕೊಂದ ಆರೋಪಿಗಳನ್ನು ಪಾಕ್ ಮೂಲದ ತಂದೆ ಮತ್ತು ಮಗ ಎಂದು ಗುರುತಿಸಲಾಗಿದೆ. ಯಹೂದಿಗಳ ಹನುಕ್ಕಾ ಹಬ್ಬದ ಆಚರಣೆ ವೇಳೆ ನಡೆದ ಗುಂಡಿನ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 16ಕ್ಕೇರಿದ್ದು, ಹಲವು ಮಂದಿ ಗಾಯಗೊಂಡಿದ್ದು ಈ ಘಟನೆಯನ್ನು ಆಸ್ಟ್ರೇಲಿಯಾ ಸರ್ಕಾರ ಭಯೋತ್ಪದನಾ ಕೃತ್ಯ ಎಂದು ಪರಿಗಣಿಸಿದ್ದು 50 ವರ್ಷದ ಸಾಜಿದ್ ಅಕ್ರಮ್ ಎಂಬಾತನನ್ನು ಪೊಲೀಸರು ಹತ್ಯೆ ಮಾಡಿದ್ದಾರೆ. ಆತನ 24 ವರ್ಷದ ಮಗ ನವೀದ್ ಅಕ್ರಮ್‌ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ನ್ಯೂ ಸೌತ್ ವೇಲ್ಸ್ ಪೊಲೀಸ್ ಆಯುಕ್ತ ಮಾಲ್ ಲ್ಯಾನ್ಯನ್ ಹೇಳಿದ್ದಾರೆ.

ಸಾಜಿದ್ ಅಕ್ರಮ್‌ಹಣ್ಣಿನ ಅಂಗಡಿ ಇಟ್ಟುಕೊಂಡಿದ್ದ. ನವೀದ್ ಅಕ್ರಮ್ ಸಿಡ್ನಿಯ ಸೆಂಟ್ರಲ್ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯ, ಇಸ್ಲಾಮಾಬಾದ್‌ನ ಹಮ್‌ದರ್ದ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದ. ಪಶ್ಚಿಮ ಸಿಡ್ನಿಯಲ್ಲಿರುವ ಹೆಕೆನ್‌ಬರ್ಗ್‌ನಲ್ಲಿರುವ ಅರೇಬಿಕ್ ಮತ್ತು ಕುರಾನ್ ಅಧ್ಯಯನಗಳನ್ನು ಕಲಿಸುವ ಅಲ್-ಮುರಾದ್‌ಸಂಸ್ಥೆಯಲ್ಲಿ ನವೀದ್ ಅಕ್ರಮ್‌ಕುರಾನ್ ಅಧ್ಯಯನ ಮಾಡಿದ್ದ ಆಸ್ಟ್ರೇಲಿಯಾ ಕಠಿಣ ಬಂದೂಕು ನಿಯಂತ್ರಣ ಕಾನೂನುಗಳನ್ನು ಹೊಂದಿದೆ. ಸುಮಾರು ಮೂರು ದಶಕಗಳಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಅತ್ಯಂತ ಮಾರಕ ಗುಂಡಿನ ದಾಳಿ ಎಂದು ಪರಿಗಣಿಸಲಾಗಿದೆ. 10 ನಿಮಿಷಗಳ ಕಾಲ ಈ ದಾಳಿ ನಡೆದಿದೆ. ಬೀಚ್‌ನ ಹೊರಗಿನ ಒಂದು ಸಣ್ಣ ಉದ್ಯಾನವನದಲ್ಲಿ ನಡೆದ ಹನುಕ್ಕಾ ಕಾರ್ಯಕ್ರಮದಲ್ಲಿ ಸುಮಾರು 1,000 ಜನರು ಭಾಗವಹಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.


### ಮೂವರು ಹೆಣ್ಣು ಮಕ್ಕಳೊಂದಿಗೆ ಆತ್ಮಹತ್ಯೆಗೆ ಶರಣಾದ ತಂದೆ

**ಮುಜಫರ್‌ಪುರ್:** ಬಿಹಾರದ ಮುಜಫರ್‌ಪುರ ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿ, ಆತನ ಮೂವರು ಹೆಣ್ಣುಮಕ್ಕಳ ಶವಗಳು ಅವರ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರನ್ನು ಅಮರನಾಥ್ ರಾಮ್, ಅವರ ಮೂವರು ಹೆಣ್ಣುಮಕ್ಕಳಾದ ರಾಧಾ ಕುಮಾರಿ, ರಾಧಿಕಾ, ಶಿವಾನಿ ಎಂದು ಗುರುತಿಸಲಾಗಿದೆ. ಸ್ಥಳೀಯರ ಪ್ರಕಾರ, ಹುಡುಗಿಯರು 9-12 ವರ್ಷ ವಯಸ್ಸಿನವರು ಸಂಜೆ ಸಕ್ರಾ ಪೊಲೀಸ್ ಠಾಣೆ ವ್ಯಾಪ್ತಿಯ ನವಲ್ಪುರ್ ಮಿಶ್ರಾಲಿಯಾ ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಅಮರ್ನಾಥ್ ರಾಮ್ ತನ್ನ ಮೂವರು ಹೆಣ್ಣುಮಕ್ಕಳನ್ನು ನೇಣು ಹಾಕಿಕೊಂಡು ತಾವೇ ಈ ಕಠಿಣ ಕ್ರಮ ಕೈಗೊಂಡಿದ್ದಾರೆ ಎಂದು ಗ್ರಾಮಸ್ಥರು ಪೊಲೀಸರಿಗೆ ತಿಳಿಸಿದ್ದಾರೆ. ಆದಾಗ್ಯೂ, ರಾಮ್ ಅವರ ಇಬ್ಬರು ಗಂಡು ಮಕ್ಕಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾದರು ಮತ್ತು ಅವರು ಘಟನೆಯ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿ ನೀಡಿದರು. ಸ್ಥಳೀಯರು ಈ ಘಟನೆಯನ್ನು ಸಾಮೂಹಿಕ ಆತ್ಮಹತ್ಯೆ ಪ್ರಕರಣ ಎಂದು ಕರೆದರು, ರಾಮ್ ತೀವ್ರ ಆರ್ಥಿಕ ಒತ್ತಡದಲ್ಲಿದ್ದರು, ಅವರ ಪತ್ನಿಯ ಮರಣದ ನಂತರ ಕುಟುಂಬ ವ್ಯವಹಾರಗಳನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗಲಿಲ್ಲ ಎಂದು ಪೊಲೀಸರಿಗೆ ಮಾಹಿತಿ ನೀಡಿದರು.

### ಮೋದಿ ವಿದೇಶಿ ಪ್ರವಾಸ; ಜೋರ್ಡಾನ್, ಇಥಿಯೋಪಿಯಾ, ಒಮಾನ್‌ಗೆ ಭೇಟಿ


**ನವದೆಹಲಿ:** ಮೂರು ದಿನಗಳ ಕಾಲ ಪ್ರಧಾನಿ ಮೋದಿ ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಸದ್ಯ ಜೋರ್ಡಾನ್ ತಲುಪಿರುವ ಮೋದಿ ಬಳಿಕ ಇಥಿಯೋಪಿಯಾ, ಒಮಾನ್‌ಗೆ ಭೇಟಿ ನೀಡಲಿದ್ದಾರೆ. ಈ ಕುರಿತು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಮಾಹಿತಿ ನೀಡಿದ್ದರು. ರಾಜ ಅಬ್ದುಲ್ಲಾ II ಬಿನ್ ಅಲ್ ಹುಸೇನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಭೇಟಿ ಕೈಗೊಂಡಿದ್ದು, ಡಿ.16ರವರೆಗೆ ಜೋರ್ಡಾನ್ ಪ್ರವಾಸದಲ್ಲಿರಲಿದ್ದಾರೆ. ಈಗಾಗಲೇ ಜೋರ್ಡಾನ್‌ನ ಅಮ್ಮನ್ ಪ್ರದೇಶಕ್ಕೆ ತಲುಪಿರುವ ಮೋದಿ ಅವರನ್ನು ಪ್ರಧಾನಿ ಜಾಫರ್ ಹಸನ್ ಅವರು ಸ್ವಾಗತಿಸಿದರು.



ಪ್ರಧಾನಿ ಮೋದಿ ಜೋರ್ಡಾನ್‌ಗೆ ನೀಡುತ್ತಿರುವ ಮೊದಲ ಭೇಟಿಯಿದಾಗಿದೆ. ಇನ್ನೂ ಡಿ.16ರಿಂದ 17ರವರೆಗೆ ಇಥಿಯೋಪಿಯಾಗೆ ಭೇಟಿ ನೀಡಲಿದ್ದು, ಇಥಿಯೋಪಿಯನ್ ಕೌಂಟರ್ ಡಾ. ಅಬಿಯ್ ಅಹ್ಮದ್ ಅಲಿ ಅವರನ್ನು ಭೇಟಿಯಾಗಿ, ಮಾತುಕತೆ ನಡೆಸಲಿದ್ದಾರೆ. ಬಳಿಕ ಡಿ.17ರಿಂದ 18ರವರೆಗೆ ಒಮಾನ್‌ಗೆ ತೆರಳಲಿದ್ದು, ವಿಶೇಷ ಪಾಲುದಾರಿಕೆ, ವ್ಯಾಪಾರ ಸಂಪರ್ಕ, ಹಲವು ದಾಖಲೆಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ ಎಂದು ಹೇಳಿದರು.

## ಕ್ರೀಡಾಂಗಣದಲ್ಲಿ ದಾಂದಲೆ: ನ್ಯಾಯಾಂಗ ತನಿಖೆಗೆ ಒತ್ತಾಯ

**ಕೋಲ್ಕತ್ತ:** ಫುಟ್‌ಬಾಲ್ ಆಟಗಾರ ಅರ್ಜೆಂಟೀನಾದ ಲಿಯೋನೆಲ್ ಮೆಸ್ಸಿ ಅವರನ್ನು ನೋಡಲು ಸಾಧ್ಯವಾಗದ ಕಾರಣ ಅಭಿಮಾನಿಗಳು ದಾಂದಲೆ ನಡೆಸಿದ ಸಾಲ್ಟ್‌ಲೇಕ್ ಕ್ರೀಡಾಂಗಣಕ್ಕೆ ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ನ್ಯಾಯಾಂಗ ತನಿಖೆಗೆ ಕರೆ ನೀಡಿದರು. ದಾಂದಲೆಗೆ ಕಾರಣರಾದವರನ್ನು ತಕ್ಷಣವೇ ಬಂಧಿಸಬೇಕು. ಈ ಕಾರ್ಯಕ್ರಮಕ್ಕೆ ಟಿಕೆಟ್ ಖರೀದಿಸಿದ್ದವರಿಗೆ ಆಯೋಜಕರು ಟಿಕೆಟ್‌ನ ಸಂಪೂರ್ಣ ಮೊತ್ತವನ್ನು ಮರುಪಾವತಿಸಬೇಕು.



ಭವಿಷ್ಯದಲ್ಲಿ ಇಂತಹ ಕಾರ್ಯಕ್ರಮಗಳನ್ನು ನಿರ್ವಹಿಸಲು ಪ್ರಮಾಣಿತ ಕಾರ್ಯಾಚರಣೆ ವಿಧಾನವೊಂದನ್ನು ರೂಪಿಸಬೇಕು ರಾಜ್ಯಪಾಲರು ಸರ್ಕಾರವನ್ನು ಒತ್ತಾಯಿಸಿದರು. ನಗರದಲ್ಲಿ ಆಯೋಜಿಸುವ ಸಾರ್ವಜನಿಕ ಕಾರ್ಯಕ್ರಮಗಳಿಗೆ ಸ್ಪಷ್ಟವಾದ ಶಿಷ್ಟಾಚಾರ ಇರಬೇಕು. ಖಾಸಗಿ ಸಂಸ್ಥೆಗಳಿಗೆ ಕ್ರೀಡೆಯನ್ನು ವಾಣಿಜ್ಯೀಕರಣಗೊಳಿಸಿ ಹಣ ಮಾಡಲು ಸರ್ಕಾರ ಅವಕಾಶ ಕಲ್ಪಿಸುವಾಗ, ಸಾರ್ವಜನಿಕರು ಇದರ ಬಲಿಪಶುಗಳಾದಂತೆ ಎಚ್ಚರಿಕೆ ವಹಿಸಬೇಕು ಎಂದು ರಾಜ್ಯಪಾಲರು ಎಚ್ಚರಿಕೆ ನೀಡಿದರು.

ಶನಿವಾರ ನಾನು ಸಾಲ್ಟ್‌ಲೇಕ್ ಕ್ರೀಡಾಂಗಣಕ್ಕೆ ಪರಿಶೀಲನೆಗೆ ಬಂದಾಗ, ಕ್ರೀಡಾಂಗಣದ ಬಾಗಿಲು ಮುಚ್ಚಲಾಗಿತ್ತು ಮತ್ತು ದೀಪಗಳನ್ನು ಆರಿಸಲಾಗಿತ್ತು. ನನ್ನ ಭೇಟಿಯನ್ನು ಉದ್ದೇಶಪೂರ್ವಕವಾಗಿ ತಡೆಯುವ ಉದ್ದೇಶದಿಂದ ಹೀಗೆ ಮಾಡಲಾಗಿದೆ. ಕೋಲ್ಕತ್ತದ ಕ್ರೀಡಾಭಿಮಾನಿಗಳ ಪಾಲಿಗೆ ಕಪ್ಪು ದಿನ ಎಂದು ಅವರು ಆರೋಪಿಸಿದ್ದಾರೆ.

**ತನಿಖಾ ಸಮಿತಿ ರಚನೆ:** ಸರ್ಕಾರ ಘಟನೆಯ ಕುರಿತ ತನಿಖೆಗಾಗಿ ಕೋಲ್ಕತ್ತ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆಶಿಮ್ ಕುಮಾರ್‌ರವರ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖಾ ಸಮಿತಿ ರಚಿಸಿದೆ.

ಮೂವರು ಸದಸ್ಯರ ಈ ಸಮಿತಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್, ಗೃಹ ಇಲಾಖೆ ಕಾರ್ಯದರ್ಶಿ ನಂದಿನಿ ಚಕ್ರವರ್ತಿಯೂ ಇದ್ದಾರೆ. ಕ್ರೀಡಾಂಗಣಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಸಮಿತಿ ಸದಸ್ಯರು, ಕ್ರೀಡಾಂಗಣದ ಅಧಿಕಾರಿಗಳಿಂದ ಹಾನಿಯ ವಿವರವನ್ನು ಪಡೆದರು. ವಿಡಿಯೋ ಚಿತ್ರೀಕರಣ ನಡೆಸಲಾಯಿತು.

> **ದಾಂದಲೆಯಲ್ಲಿ ತೊಂದರೆಗೆ ಒಳಗಾದವರ ಜತೆಗೂ ಮಾತುಕತೆ ನಡೆಸುತ್ತೇನೆ. ಬಳಿಕ ಶಿಫಾರಸುಗಳೊಂದಿಗೆ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತೇನೆ**
> -ಸಿ.ವಿ. ಆನಂದ ಬೋಸ್, ಪಶ್ಚಿಮ ಬಂಗಾಳದ ರಾಜ್ಯಪಾಲ

## 3 ವರ್ಷದ ಬಳಿಕ ಪ್ರಿಯಾಂಕಾ, ಪ್ರಶಾಂತ್ ಕಿಶೋರ್ ಮಾತುಕತೆ ಮತ್ತೆ ಕಾಂಗ್ರೆಸ್ ಪರ ರಣತಂತ್ರ

**ನವದೆಹಲಿ:** ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರಾ, ಚುನಾವಣಾ ತಂತ್ರಗಾರ, ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಮೂರು ವರ್ಷದ ಬಳಿಕ ಮಾತುಕತೆ ನಡೆಸಿದ್ದು ಮತ್ತೆ ಕಾಂಗ್ರೆಸ್ ಪರ ಪಿಕೆ ರಣತಂತ್ರ ರೂಪಿಸುತ್ತಾರಾ ಎಂಬ ಪ್ರಶ್ನೆ ಎದ್ದಿದೆ. ಬಿಹಾರ ಚುನಾವಣೆ ನಡೆದ ಒಂದು ತಿಂಗಳ ನಂತರ ಈ ಮಹತ್ವದ ಭೇಟಿ ನಡೆದಿದೆ.



ಬಿಹಾರದಲ್ಲಿ ಕಾಂಗ್ರೆಸ್ ಪಕ್ಷದ ಟೀಕೆ ಮಾಡಿದ್ದ ಪ್ರಶಾಂತ್ ಕಿಶೋರ್ ಈಗ ಪ್ರಿಯಾಂಕಾ ಅವರನ್ನು ಭೇಟಿ ಮಾಡಿ ಮಾತನಾಡಿದ್ದು ಯಾವ ವಿಚಾರದ ಬಗ್ಗೆ ಮಾತುಕತೆ ನಡೆಸಿದ್ದಾರೆ ಎನ್ನುವುದು ತಿಳಿದುಬಂದಿಲ್ಲ. ಬಿಹಾರ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್‌ನ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ, ರಾಹುಲ್ ಗಾಂಧಿಯವರ ಮತ ಕಳ್ಳತನ ಅಭಿಯಾನ ರಾಜ್ಯದ ಜನತೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದಿದ್ದರು. ಹಾಗೆ ನೋಡಿದರೆ ಈ ಹಿಂದೆ ಪ್ರಶಾಂತ್ ಕಿಶೋರ್ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಕೆಲಸ ಮಾಡಿದ್ದರು. ಆದರೆ ಇವರ ಸಲಹೆಗಳು ಕಾಂಗ್ರೆಸ್ ಹಿರಿಯ ನಾಯಕರಿಗೆ ಹಿಡಿಸದ ಕಾರಣ ಇವರ ವಿರುದ್ಧ ಮಾತುಗಳು ಕೇಳಿ ಬಂದಿತ್ತು.

ಏಪ್ರಿಲ್ 2022 ರಲ್ಲಿ ಸೋನಿಯಾ ಗಾಂಧಿಯವರ 10, ಜನಪಥ್ ನಿವಾಸದಲ್ಲಿ ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಪಕ್ಷವನ್ನು ಮತ್ತೆ ಸಂಘಟಿಸುವುದು ಹೇಗೆ ಎನ್ನುವುದರ ಬಗ್ಗೆ ವಿವರವಾದ ವಿವರಣೆ ನೀಡಿದ್ದರು.

## 1,597 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ

**ಶ್ರೀನಗರ:** ಏಪ್ರಿಲ್ 22ರಂದು ಕಾಶ್ಮೀರದಲ್ಲಿ ನಡೆದ ಪೆಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣದ ತನಿಖೆ ನಡೆಸಿದ ರಾಷ್ಟ್ರೀಯ ತನಿಖಾ ಸಂಸ್ಥೆ ಸೋಮವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ. ಎನ್‌ಐಎ ವಿಶೇಷ ಕೋರ್ಟ್‌ಗೆ 1597 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಾಗಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.



ತನಿಖಾಧಿಕಾರಿಗಳ ಪ್ರಕಾರ, ಆಪರೇಷನ್ ಮಹಾದೇವ್‌ನಲ್ಲಿ ಹತ್ಯೆಯಾದ ಲಷ್ಕರ್-ಎ-ತೈಬಾ ಗುಂಪಿನ ಉಗ್ರರ ಹೆಸರನ್ನ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ. ಪೆಹಲ್ಗಾಮ್ ದಾಳಿಯು ಪ್ರತ್ಯೇಕ ಘಟನೆಯಾಗಿರಲಿಲ್ಲ. ಕಾಶ್ಮೀರದಲ್ಲಿ ಲಷ್ಕರ್ ಸಾಮ್ರಾಜ್ಯ ವಿಸ್ತರಿಸುವ, ಸಂಘಟಿತ ಭಯೋತ್ಪಾದನಾ ಕಾರ್ಯತಂತ್ರದ ಭಾಗವಾಗಿತ್ತು ಎಂದು ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

ಆಪರೇಷನ್ ಮಹಾದೇವ್‌ನಲ್ಲಿ ಹತ್ಯೆಗೀಡಾದ ಉಗ್ರರಲ್ಲಿ ಇಬ್ಬರು, ಗುಜ್ಜರ್, ಬಕ್ಕರ್‌ವಾಲ್ ಸಮುದಾಯಕ್ಕೆ ಸೇರಿದ ಸ್ಥಳೀಯರಿಂದ ನಿರಂತರ ಸಹಾಯ ಪಡೆದುಕೊಂಡಿದ್ದರು. ಇಡೀ ಸಮಯದಾಯದ ಜನ ಇದರಲ್ಲಿ ಭಾಗಿಯಾಗಿರಲಿಲ್ಲ. ಆಶ್ರಯ ನೀಡಿದ್ದ ಸ್ಥಳೀಯರು, ವ್ಯವಸ್ಥಿತ ಬೆಂಬಲ ನೀಡಿದ್ದರು. ಅಲ್ಲದೇ ನಿರ್ಣಾಯಕ ಮಾರ್ಗಗಳ ಬಗ್ಗೆ ಎಲ್ಲಾ ವಿವರ ಕೊಟ್ಟಿದ್ದರು. ಇದು ಉಗ್ರರು ಭದ್ರತಾಪಡೆಗಳಿಂದ ತಪ್ಪಿಸಿಕೊಂಡು ಅರಣ್ಯ ಪ್ರದೇಶದಲ್ಲಿ ಅಡಿಗಿಕೊಳ್ಳಲು ಸಹಾಯವಾಗಿತ್ತು ಎಂದು ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

**ಗಡಿಯಾಚೆಗಿನ ಹ್ಯಾಂಡ್ಲರ್ ನಿರ್ದೇಶನದಂತೆ ಕೃತ್ಯ**

ಇನ್ನೂ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾದ 3ನೇ ಆರೋಪಿ ಸಾಜಿದ್ ಜಾಟ್. ಗಡಿಯಾಚೆಗಿನ ಹ್ಯಾಂಡ್ಲರ್‌ಗಳ ನಿರ್ದೇಶನದಂತೆ ದೇಶದ ಒಳಗೆ ಕೆಲಸ ಮಾಡುವ ಸಕ್ರಿಯ ಲಷ್ಕರ್ ಕಾರ್ಯಕರ್ತನಾಗಿದ್ದ.

ಸಾಜಿದ್‌ಜಾಟ್ ನಿರ್ದಿಷ್ಟ ಮಾಡ್ಯೂಲ್ ಸಂಘಟಿಸುತ್ತಿದ್ದ. ಅಲ್ಲದೇ ಭಾರತಕ್ಕೆ ಬರುತ್ತಿದ್ದ ದಾಳಿಕೋರರಿಗೆ ಇಲ್ಲಿನ ಭದ್ರತಾಪಡೆಗಳ ಕಾರ್ಯಾಚರಣೆ ಬಗ್ಗೆ ಮಾಹಿತಿ ನೀಡುತ್ತಿದ್ದ ಎಂದು ತನಿಖಾಧಿಕಾರಿ ಮೂಳಗಳು ತಿಳಿಸಿವೆ.

## ಕೇರಳದ ಹಲವು ಭಾಗಗಳಲ್ಲಿ ಭುಗಿಲೆದ್ದ ಹಿಂಸಾಚಾರ

**ಕೇರಳ:** ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದ ಬೆನ್ನಲ್ಲೇ ಕೇರಳದ ಹಲವು ಜಿಲ್ಲೆಗಳಲ್ಲಿ ರಾತ್ರಿಯಿಡೀ ಹಿಂಸಾಚಾರ ವರದಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೋಯಿಕ್ಕೋಡ್ ಜಿಲ್ಲೆಯ ಏರಾಮಲದಲ್ಲಿ ಕಾಂಗ್ರೆಸ್ ಕಚೇರಿ ಇಂದಿರಾ ಗಾಂಧಿ ಭವನದ ಮೇಲೆ ಸಿಪಿಎಂ ಕಾರ್ಯಕರ್ತರು ದಾಳಿ ಮಾಡಿದ ಆರೋಪ ಕೇಳಿಬಂದಿದ್ದರಿಂದ ರಾತ್ರಿಯಿಡೀ ಉದ್ವಿಗ್ನತೆ ನೆಲೆಸಿತ್ತು. ಸುಮಾರು 200 ಮಂದಿಯ ಗುಂಪು ಮಾರಕಾಸ್ತ್ರಗಳನ್ನು ಹಿಡಿದು ಕಾಂಗ್ರೆಸ್ ಕಚೇರಿಯತ್ತ ಮೆರವಣಿಗೆ ನಡೆಸಿ ಕಟ್ಟಡಕ್ಕೆ ಹಾನಿ ಉಂಟುಮಾಡಿದ್ದಾರೆ. ಇದರಿಂದ ಸುಮಾರು 5 ಲಕ್ಷ ನಷ್ಟ ಉಂಟಾಗಿದೆ ಎಂದು ಎಡಚೇರಿ ಠಾಣೆಯಲ್ಲಿ ದಾಖಲಾದ ಎಫ್ ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪ್ರತಿಮೆಗೂ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸುದ್ದಿ ಹರಡಿದ ಬೆನ್ನಲ್ಲೇ ಯುಡಿಎಫ್ ಕಾರ್ಯಕರ್ತರು ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಉದ್ವಿಗ್ನತೆ ನೆಲೆಸಿತು. ಸ್ಥಳಕ್ಕೆ ಇನ್ನಷ್ಟು ಪೊಲೀಸರನ್ನು ಕರೆಸಿ ಪರಿಸ್ಥಿತಿಯನ್ನು ನಿಯಂತ್ರಿಸಲಾಯಿತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಕಣ್ಣೂರು ಜಿಲ್ಲೆಯ ಪಾನೂರಿನಲ್ಲಿ ಮುಸ್ಲಿಂ ಲೀಗ್‌ನ ಹಲವು ಕಾರ್ಯಕರ್ತರ ಮನೆಗಳನ್ನು ಗುರಿಯಾಗಿಸಿ ಸಿಪಿಎಂ ಕಾರ್ಯಕರ್ತರು ದಾಳಿ ನಡೆಸಿದ್ದಾಗಿ ಆರೋಪಿಸಲಾಗಿದೆ. ಮನೆಗಳ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಹಾನಿಗೊಳಿಸಿದ್ದಾರೆ. ಯುಡಿಎಫ್ ವಿಜಯೋತ್ಸವಕ್ಕೆ ಸಿಪಿಎಂ ಕಾರ್ಯಕರ್ತರು ಅಡ್ಡಿಪಡಿಸಿದ್ದು ಸಂಘರ್ಷ ಉಂಟಾಗಲು ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

**ಹಲವರ ವಿರುದ್ಧ ಪ್ರಕರಣ:**

- **ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿಯಲ್ಲಿ ಯುಡಿಎಫ್ ಕಾರ್ಯಕರ್ತ, ಆತನ ಕುಟುಂಬ ಸದಸ್ಯರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಸಿಪಿಎಂ ಕಾರ್ಯಕರ್ತರು ದಾಳಿ ನಡೆಸಿದ್ದಾಗಿ ಆರೋಪಿಸಲಾಗಿದೆ. 40 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.**
- **ಸುಲ್ತಾನ್ ಬತ್ತೇರಿಯಲ್ಲಿ ಸಿಪಿಎಂ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಕೆಲವು ಯುಡಿಎಫ್ ಕಾರ್ಯಕರ್ತರ ವಿರುದ್ಧವೂ ಪ್ರಕರಣ ದಾಖಲಾಗಿದೆ.**
- **ಕಣ್ಣೂರು ಜಿಲ್ಲೆಯ ಉಳಿಕ್ಕಲ್‌ನಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ಕಾರ್ಯಕರ್ತರ ಮಧ್ಯೆ ಸಂಘರ್ಷ ನಡೆದಿದೆ.**
- **ಕಾಸರಗೋಡು ಜಿಲ್ಲೆಯ ಬೇಡಗಂನಲ್ಲಿ ಎಲ್‌ಡಿಎಫ್ ವಿಜಯೋತ್ಸವಕ್ಕೆ ಯುಡಿಎಫ್ ಕಾರ್ಯಕರ್ತರು ಅಡ್ಡಿ ಪಡಿಸಿದ ಘಟನೆ ನಡೆದಿದೆ.**

# ಬಿಜೆಪಿ ಕಾರ್ಯಕಾರಿ ಅಧ್ಯಕ್ಷರಾಗಿ ಬಿಹಾರದ ನಿತಿನ್ ನಬಿನ್ ನೇಮಕ

## ಬಿಜೆಪಿ ಭವಿಷ್ಯದ ಯೋಜನೆ; ಕಾರ್ಯಕಾರಿ ಅಧ್ಯಕ್ಷ ನಿತಿನ್ ನಬಿನ್ ರಾಷ್ಟ್ರೀಯ ಮುಖ್ಯಸ್ಥರಾಗಲು ಮೋದಿ-ಶಾ ಅನುಮೋದನೆ

**ಹೊಸದಿಲ್ಲಿ:** ಬಿಜೆಪಿಯ ಹೊಸ ಕಾರ್ಯಕಾರಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ನಿತಿನ್ ನಬಿನ್, ಪಕ್ಷದ ಇತಿಹಾಸದಲ್ಲಿ ಈ ಹುದ್ದೆಯನ್ನು ಅಲಂಕರಿಸಿದ ಎರಡನೇ ವ್ಯಕ್ತಿ ಎಂಬ ಹೆಗ್ಗಳಿಕೆಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಪಕ್ಷದ ಹಾಲಿ ಮುಖ್ಯಸ್ಥ ಜಗತ್ ಪ್ರಕಾಶ್ ನಡ್ಡಾ ಅವರು ಈ ಹಿಂದೆ ಕಾರ್ಯಕಾರಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು ಕುತೂಹಲಕಾರಿಯಾಗಿ ಬಿಜೆಪಿಯ ಸಂವಿಧಾನವು ಕಾರ್ಯಕಾರಿ ಅಧ್ಯಕ್ಷರನ್ನು ನೇಮಿಸುವ ನಿಬಂಧನೆಯನ್ನು ಹೊಂದಿಲ್ಲ. ಆದರೆ 2019ರಿಂದ ಈ ಹುದ್ದೆಯು ಬಿಜೆಪಿ ಮುಖ್ಯಸ್ಥರ ಪಾತ್ರವನ್ನು ವಹಿಸಿಕೊಳ್ಳುವವರಿಗೆ ಒಂದು ರೀತಿಯ ಮೆಟ್ಟಿಲಾಗಿ ಕಾಣಿಸಿಕೊಂಡಿದೆ. ಜೂನ್ 2019ರಲ್ಲಿ ಅಮಿತ್ ಶಾ ಅವರು ಕೇಂದ್ರ ಗೃಹ ಸಚಿವರಾದ ನಂತರ, ಜೆಪಿ ನಡ್ಡಾ ಅವರನ್ನು ಬಿಜೆಪಿ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಸುಮಾರು ಆರು ತಿಂಗಳ ಕಾಲ ಬಿಜೆಪಿ ಕಾರ್ಯಕಾರಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ ಜೆಪಿ ನಡ್ಡಾ, 2020ರ ಜನವರಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಔಪಚಾರಿಕವಾಗಿ ಆಯ್ಕೆಯಾದರು. ನಡ್ಡಾ ಈಗ ಸುಮಾರು ಆರು ವರ್ಷಗಳ ಕಾಲ ಪಕ್ಷದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಬಿಜೆಪಿಯ ಸಂವಿಧಾನದ ಪ್ರಕಾರ ಒಬ್ಬ ನಾಯಕ ತಲಾ ಮೂರು ವರ್ಷಗಳ ಎರಡು ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಬಹುದು.

**ಮಧ್ಯಂತರ ವ್ಯವಸ್ಥೆ:** ಬಿಜೆಪಿ ನಾಯಕರ ಪ್ರಕಾರ ಕಾರ್ಯಕಾರಿ ಅಧ್ಯಕ್ಷರ ನೇಮಕವು ಮಧ್ಯಂತರ ವ್ಯವಸ್ಥೆಯಾಗಿದೆ. ಅಂದರೆ ಈ ಹುದ್ದೆಗೆ ನೇಮಕಗೊಂಡವರು ಭವಿಷ್ಯದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗುವುದು ಖಚಿತ. ಈ ಹಿನ್ನೆಲೆಯಲ್ಲಿ ನಿತಿನ್ ನಬಿನ್ ಅವರು ಕಾರ್ಯಕಾರಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿರುವುದು, ಶೀಘ್ರದಲ್ಲೇ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಲಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಮತ್ತೊಂದು ವಿಶೇಷವೆಂದರೆ, ಹಿಂದೂಗಳು ಅಶುಭವೆಂದು ಪರಿಗಣಿಸುವ ಒಂದು ತಿಂಗಳ ಅವಧಿಯಾದ ಖಾರ್ ಮಾಸ್ ಮಂಗಳವಾರದಿಂದ ಪ್ರಾರಂಭವಾಗುತ್ತದೆ. ಇದೇ ಕಾರಣಕ್ಕೆ ನಿತಿನ್ ನಬಿನ್ ಅವರನ್ನು ಭಾನುವಾರ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಖಾರ್ ಮಾಸ್ ಅವಧಿ ಜನವರಿ 14ರ ಮಕರ ಸಂಕ್ರಾಂತಿಯಂದು ಕೊನೆಗೊಂಡ ಬಳಿಕ, ಆಡಳಿತಾರೂಢ ಬಿಜೆಪಿ ರಾಷ್ಟ್ರೀಯ ಮುಖ್ಯಸ್ಥರ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗಬಹುದು. ಬಿಜೆಪಿ ಈಗಾಗಲೇ 37 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ 30ರಲ್ಲಿ ಸಾಂಸ್ಥಿಕ ಚುನಾವಣಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದೆ.



ದೇಶದ ಕನಿಷ್ಠ ಅರ್ಧದಷ್ಟು ರಾಜ್ಯಗಳಲ್ಲಿ ಸಾಂಸ್ಥಿಕ ಚುನಾವಣೆಗಳನ್ನು ಪೂರ್ಣಗೊಳಿಸುವುದು, ಪಕ್ಷದ ಮುಖ್ಯಸ್ಥರ ಚುನಾವಣೆಯನ್ನು ಪ್ರಾರಂಭಿಸುವ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ.



> **ನಿತಿನ್ ನಬಿನ್ ಅವರು ತಮ್ಮ ವಿನಮ್ರ ಸ್ವಭಾವ ಮತ್ತು ಸ್ಥಾಪಿತ ಕಾರ್ಯ ಶೈಲಿಗೆ ಹೆಸರುವಾಸಿ ಆಗಿದ್ದಾರೆ. ಅವರ ಶಕ್ತಿ ಮತ್ತು ಸಮರ್ಪಣೆ ಮುಂದಿನ ದಿನಗಳಲ್ಲಿ ನಮ್ಮ ಪಕ್ಷವನ್ನು ಬಲಪಡಿಸುತ್ತದೆ ಎಂದು ನನಗೆ ವಿಶ್ವಾಸವಿದೆ.**
> -ನರೇಂದ್ರ ಮೋದಿ, ಪ್ರಧಾನಮಂತ್ರಿ

> **26ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ಶಾಸಕರಾದರು.**
> **ಬಿಹಾರದ ಕಾರ್ಯಸ್ಥ ಸಮುದಾಯದಕ್ಕೆ ಸೇರಿದ ನಿತಿನ್ ನಬಿನ್, ಬಿಹಾರ ಮತ್ತು ಪೂರ್ವ ಭಾರತದ ಮೊದಲ ಬಿಜೆಪಿ ಮುಖ್ಯಸ್ಥರಾಗಲಿರುವುದು ಬಹುತೇಕ ಖಚಿತವಾಗಿದೆ. ಮುಂದಿನ ವರ್ಷ ಅವರು ಪಕ್ಷದ ರಾಷ್ಟ್ರೀಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರೆ, ಪಕ್ಷದ ಇತಿಹಾಸದಲ್ಲಿ ಅತ್ಯಂತ ಕಿರಿಯ ಬಿಜೆಪಿ ಅಧ್ಯಕ್ಷ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಈ ಮೂಲಕ ಅವರು ನಿತಿನ್ ಗಡ್ಕರಿ ಅವರ ದಾಖಲೆ ಮುರಿಯಲಿದ್ದಾರೆ.**

**ಯಾರು ನಿತಿನ್ ನಬಿನ್?:** 45 ವರ್ಷದ ನಿತಿನ್ ನಬಿನ್ ಪ್ರಸ್ತುತ ಬಿಹಾರ ಸರ್ಕಾರದಲ್ಲಿ ರಸ್ತೆ ನಿರ್ಮಾಣ ಸಚಿವರಾಗಿದ್ದಾರೆ ಮತ್ತು ಪಾಟ್ನಾದ ಬಂಕಿಪುರದಿಂದ ಐದು ಬಾರಿ ಶಾಸಕರಾಗಿದ್ದಾರೆ. ಅವರ ತಂದೆ ಮತ್ತು ಬಿಜೆಪಿಯ ಹಿರಿಯ ನಾಯಕ ನವೀನ್ ಕಿಶೋರ್ ಸಿನ್ಹಾ ಅವರ ನಿಧನ ಬಳಿಕ, ನಿತಿನ್ ನಬಿನ್ ತಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಿತಿನ್ ನಬಿನ್ ಅವರನ್ನು ಶ್ಲಾಘಿಸಿದ್ದು, ಯುವ ಮತ್ತು ಶ್ರಮಶೀಲ ನಾಯಕ ಹಾಗೂ ಸಂಘಟನಾ ಚತುರ ಎಂದು ಬಣ್ಣಿಸಿದ್ದಾರೆ. ಬಿಹಾರದಲ್ಲಿ ಶಾಸಕರಾಗಿ ಮತ್ತು ಸಚಿವರಾಗಿ ಹಲವು ಅವಧಿಗಳಿಗೆ ಪ್ರಭಾವಶಾಲಿ ದಾಖಲೆಯನ್ನು ಹೊಂದಿದ್ದಾರೆ. ಜನರ ಆಕಾಂಕ್ಷೆಗಳನ್ನು ಈಡೇರಿಸಲು ಅವರು ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ ಎಂದು ಪ್ರಧಾನಿ ಮೋದಿ ಕೊಂಡಾಡಿದ್ದಾರೆ. ನಿತನ್ ನಬಿನ್ ಛತ್ತೀಸ್‌ಗಢ ಮತ್ತು ಸಿಕ್ಕಿಂನಲ್ಲಿ ಬಿಜೆಪಿ ಉಸ್ತುವಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಒಟ್ಟಿನಲ್ಲಿ ನಿತಿನ್ ನಬಿನ್ ಅವರಲ್ಲಿ ತನ್ನ ಭವಿಷ್ಯದ ರಾಷ್ಟ್ರೀಯ ಅಧ್ಯಕ್ಷರನ್ನು ಕಂಡುಕೊಂಡಿರುವ ಬಿಜೆಪಿ, ಸದ್ಯಕ್ಕೆ ಅವರನ್ನು ಕಾರ್ಯಕಾರಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಜೆಪಿ ನಡ್ಡಾ ಆರು ವರ್ಷಗಳ ಕಾಲ ಬಿಜೆಪಿಯನ್ನು ಮುನ್ನಡೆಸಿದ್ದು, ಒಂದು ವೇಳೆ ನಿತಿನ್ ನಬಿನ್ ಭವಿಷ್ಯದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹುದ್ದೆ ಅಲಂಕರಿಸಿದರೆ, ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಹಯೋಗದಲ್ಲಿ ಪಕ್ಷವನ್ನು ಮುನ್ನಡೆಸುವ ಅವಕಾಶವನ್ನು ಪಡೆದುಕೊಳ್ಳಲಿದ್ದಾರೆ.

## ಮಾರ್ಕ್ ಮಸ್ತ್ ಮಲೈಕಾ ಸಾಂಗ್ ರಿಲೀಸ್



ಕಿಚ್ಚನ ಕಿಕ್ ನಿಶ್ವಿಕಾ ಝಲಕ್

ಸುದೀಪ್ ಅಭಿನಯದ ಮಾರ್ಕ್ ಸಿನಿಮಾದ ಮಸ್ತ್ ಮಲೈಕಾ ಹಾಡು ರಿಲೀಸ್ ಆಗಿದೆ. ಈ ಹಾಡಿನಲ್ಲಿ ನಿಶ್ವಿಕಾ ನಾಯ್ಡು ಮಸ್ತ್ ಆಗಿ ಕುಣಿದಿದ್ದಾರೆ. ಮಲೈಕಾ ಆಗಿಯೇ ಕಾಣಿಸಿಕೊಂಡಿದ್ದಾರೆ. ಮಾರ್ಕ್ ಆಗಿಯೇ ಕಿಚ್ಚ ಸುದೀಪ್ ಇಲ್ಲಿ ಹೊಸ ಕಿಕ್ ಕೊಟ್ಟಿದ್ದಾರೆ.

ಮಸ್ತ್ ಮಲೈಕಾ ಸಾಂಗ್ ಇಂಟ್ರಸ್ಟಿಂಗ್ ಆಗಿದೆ. ಸುದೀಪ್ ಮಗಳು ಸಾನ್ವಿ ಸುದೀಪ್ ಇದನ್ನ ಹಾಡಿದ್ದಾರೆ. ನಕಾಶ್ ಅಜೀಜ್ ಕಿಚ್ಚನ ಪಾತ್ರಕ್ಕೆ ಧ್ವನಿ ಆಗಿದ್ದಾರೆ. ಅಜನೀಶ್ ಲೋಕನಾಥ್ ಈ ಚಿತ್ರಕ್ಕೆ ಸಂಗೀತ ಕೊಟ್ಟಿದ್ದಾರೆ.

ನಾಲ್ಕು ದಿನದಲ್ಲಿ ತಯಾರಾದ ಸೆಟ್ ಅಲ್ಲಿಯೇ ಇಡೀ ಹಾಡನ್ನ ತೆಗೆಯಲಾಗಿದೆ. ಇದಕ್ಕಾಗಿಯೇ ನಿಶ್ವಿಕಾ ನಾಯ್ಡು ಹೆವಿ ಕಾಸ್ಟೂಮ್ ತೊಟ್ಟಿದ್ದಾರೆ. ಅಷ್ಟೆ ಮಸ್ತ್ ಆಗಿಯೇ ಡ್ಯಾನ್ಸ್ ಮಾಡಿದ್ದಾರೆ. ಈ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಮಾರ್ಕ್ ಚಿತ್ರದ ಈ ಒಂದು ಹಾಡನ್ನ ದೊಡ್ಡ ದೋಣಿ ಸೆಟ್ ಅಲ್ಲಿಯೇ ತೆಗೆಯಲಾಗಿದೆ. ಲೈಟ್‌ಗಳಿಂದಲೇ ಅಲಂಕಾರಗೊಂಡ ಈ ದೋಣಿಯಲ್ಲಿಯೇ ಕಿಚ್ಚ ಸುದೀಪ್ ಹಾಗೂ ನಿಶ್ವಿಕಾ ನಾಯ್ಡು ಸಖತ್ ಸ್ಟೆಪ್ಸ್ ಆಗಿದ್ದಾರೆ. ಸಾಕಷ್ಟು ಜನರು ಇರೋ ಈ ಒಂದು ದೋಣಿಯಲ್ಲಿ ಸುದೀಪ್ ಮತ್ತು ನಿಶ್ವಿಕಾ ನಾಯ್ಡು ಸೂಪರ್ ಆಗಿಯೇ ಡ್ಯಾನ್ ಮಾಡಿದ್ದಾರೆ. ಭುಜ ಕುಣಿಸೋ ಸ್ಟೆಪ್ ಇಲ್ಲಿ ಗಮನ ಸೆಳೆಯುತ್ತದೆ.ಸುದೀಪ್ ಸಾಮಾನ್ಯವಾಗಿ ಡ್ಯಾನ್ಸ್ ಮಾಡೋಕೆ ಇಷ್ಟಪಡೋದಿಲ್ಲ. ಆದರೆ, ಈ ಮಸ್ತ್ ಮಲೈಕಾ ಹಾಡಿನಲ್ಲಿ ಮಸ್ತ್ ಆಗಿಯೇ ಭುಜ ಕುಣಿಸಿದ್ದಾರೆ. ಸ್ಟೆಪ್ ಕೂಡ ಹಾಕಿದ್ದಾರೆ.

ಈ ಒಂದು ಹಾಡಿನಲ್ಲಿ ನಿಶ್ವಿಕಾ ನಾಯ್ಡು ಚೆನ್ನಾಗಿ ಕಾಣಿಸುತ್ತಿದ್ದಾರೆ. ಗ್ರ್ಯಾಂಡ್ ಆದ ಕಾಸ್ಟೂಮ್ ಅನ್ನೆ ತೊಟ್ಟಿದ್ದಾರೆ. ಹೆವಿ ಅನಿಸೋ ಈ ಉಡುಗೆಯಲ್ಲಿಯೇ ಅಷ್ಟೆ ಜೋಶ್‌ನಿಂದ ಡ್ಯಾನ್ಸ್ ಮಾಡಿದ್ದಾರೆ.

**ಅನೂಪ್ ಭಂಡಾರಿ ಲಿರಿಕ್ಸ್:** ಅನೂಪ್ ಭಂಡಾರಿ ಈ ಹಾಡನ್ನ ಬರೆದಿದ್ದಾರೆ. ಈಗಾಗಲೇ ಹೇಳಿದಂತೆ ಸುದೀಪ್ ಪುತ್ರ, ಸಾನ್ವಿ ಸುದೀಪ್ ಅಷ್ಟೆ ಇಂಟ್ರಸ್ಟಿಗ್ ಆಗಿಯೇ ಹಾಡಿದ್ದಾರೆ.

ಈ ಹಾಡು ಒಟ್ಟು 3.32 ಸೆಕೆಂಡ್ ಇದೆ. ಅಷ್ಟೆ ಕಲರ್ ಫುಲ್ ಆಗಿದೆ. ಆದರೆ, ಇದರಲ್ಲಿ ವಿಲನ್ ಮತ್ತು ವಿಲನ್ ಲವರ್ ಸ್ಟೋರಿನೂ ಇದೆ. ಅದರ ಝಲಕ್ ಕೂಡ ಇಲ್ಲಿ ರಿವೀಲ್ ಆಗುತ್ತದೆ.

## ಮದ್ವೆ ಬಳಿಕ ಕಾಣಿಸಿಕೊಂಡ ಸಮಂತಾ ನಿಡಿಮೋರು!

ಟಾಲಿವುಡ್‌ನ ನಟಿ ಸಮಂತಾ ರುತ್‌ಪ್ರಭು ಹಾಗೂ ನಿರ್ದೇಶಕ ರಾಜ್ ನಿಡಿಮೋರು ಡಿಸೆಂಬರ್ 1ರಂದು ಹಸೆಮಣೆ ಏರಿದ್ದರು. ಮದ್ವೆಯಾದ ಬಳಿಕ ಇಬ್ಬರೂ ಒಟ್ಟಿಗೆ ಹೈದರಾಬಾದ್‌ನ ಏರ್‌ಪೋರ್ಟ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇಬ್ಬರೂ ಏರ್‌ಪೋರ್ಟ್‌ನಲ್ಲಿ ಕೈಹಿಡಿದುಕೊಂಡು ಬರುತ್ತಿರೋ ವಿಡಿಯೋ ಜಾಲತಾಣದಲ್ಲಿ ಸಖತ್ ವೈರಲ್ ಆಗ್ತಿದೆ.

ಇದೇ ಡಿಸೆಂಬರ್ 1ರಂದು ಕೊಯಮತ್ತೂರಿನ ಯೋಗ ಕೇಂದ್ರದಲ್ಲಿರುವ ಲಿಂಗ ಭೈರವಿ ದೇವಸ್ಥಾನದಲ್ಲಿ ಸರಳವಾಗಿ ಮರು ವಿವಾಹವಾಗಿದ್ದರು ಸಮಂತಾ. ಕಳೆದ ವರ್ಷವಷ್ಟೇ ತಮ್ಮ ಮಾಜಿ ಪತಿ ನಾಗಚೈತನ್ಯ ಶೋಭಿತಾ ಧುಲಿಪಾಲ ಜೊತೆ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಫ್ಯಾಮಿಲಿ ಮ್ಯಾನ್-2 ಹಾಗೂ ಸಿಟಡೆಲ್ ಹನಿಬನಿ ವೆಬ್ ಸಿರೀಸ್‌ಗಳಲ್ಲಿ ಇಬ್ಬರೂ ಒಟ್ಟಿಗೆ ಕೆಲಸ ಮಾಡಿದ್ದ ಜೋಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿದೆ.

ನಿರ್ದೇಶಕ ರಾಜ್ ನಿಡಿಮೋರು ಹಾಗೂ ಸಮಂತಾ ಮದ್ವೆ ಆದ ಬಳಿಕ ಇದೇ ಫಸ್ಟ್ ಟೈಂ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಏರ್‌ಪೋರ್ಟ್‌ನಲ್ಲಿ ನಡೆದುಕೊಂಡು ಹೋಗ್ತಿರುವ ಅವರ ವಿಡಿಯೋ ಸಖತ್ ವೈರಲ್ ಆಗಿದ್ದು, ಸಮಂತಾ ಫ್ಯಾನ್ಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ವಿಡಿಯೋ ಸಖತ್ ವೈರಲ್

## ಹವಾ ಸೃಷ್ಟಿಸಿದ್ದ ಉಪ್ಪಿ ಸಿನಿಮಾ ಒಟಿಟಿಗೆ!


ರಾಮ್ ಪೋತಿನೇನಿ, ಉಪೇಂದ್ರ, ಭಾಗ್ಯ ಶ್ರೀ ಬೋರ್ಸೆ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ತೆಲುಗು ಸಿನಿಮಾ 'ಆಂಧ್ರ ಕಿಂಗ್ ತಾಲೂಕ' ನವೆಂಬರ್ 27ಬಿಡುಗಡೆ ಆಗಿತ್ತು. ಕನ್ನಡದನಟ ಉಪೇಂದ್ರ, ಪ್ರಮುಖ ಪಾತ್ರದಲ್ಲಿ ನಟಿಸಿರುವ ಕಾರಣಕ್ಕೆ ಈ ಸಿನಿಮಾ ಅನೇಕ ಜನರಲ್ಲಿ ನಿರೀಕ್ಷೆ ಮೂಡಿಸಿತ್ತು. ಆದರೆ ಆಂಧ್ರ, ಕಿಂಗ್ ತಾಲೂಕ ಚಿತ್ರವು ಅಷ್ಟೇನೂ ಒಳ್ಳೆಯ ವಿಮರ್ಶೆಗಳನ್ನು ಪಡೆಯಲಿಲ್ಲ, ಆದರೆ ಅದು ಉತ್ತಮ ಚಿತ್ರ, ಎಂಬ ಮಾತು ಕೇಳಿಬಂತು.



ಸಾಮಾನ್ಯವಾಗಿ, ನವೆಂಬರ್ ತಿಂಗಳನ್ನು ಅನ್-ಸೀಸನ್' ಎಂದು ಪರಿಗಣಿಸಲಾಗುತ್ತದೆ. ಹಾಗೆಯೇ 'ಆಂಧ್ರ ಕಿಂಗ್ ತಾಲೂಕ' ಉತ್ತಮ ಸಮಯದಲ್ಲಿ ಬಿಡುಗಡೆಯಾಯಿತು. ಚಿತ್ರವು ಮೊದಲ ದಿನದಿಂದಲೇ ಒಳ್ಳೆಯ ಆರಂಭ ಪಡೆದ ಸಿನಿಮಾ ಪ್ರೇಕ್ಷಕರ ಮನಮೆಚ್ಚಿಸಿತು.

ಹಾಗೆಯೇ ಚಿತ್ರದ ಕಥೆಯಲ್ಲಿ ಕೆಲವು ತರ್ಕಗಳು ಕಾಣೆಯಾಗಿವೆ ಎಂದು ಅನೇಕ ಜನರು ಭಾವಿಸಿದರು. ಕಲೆಕ್ಷನ್‌ಗಳು ಸಹ ದೊಡ್ಡ ಪರಿಣಾಮ ಬೀರುವಲ್ಲಿ ವಿಫಲವಾದವು. ಬಿಡುಗಡೆಗೂ ಮುನ್ನವೇ ಚಿತ್ರದ ಮೇಲಿನ ನಿರೀಕ್ಷೆಗಳು ದೊಡ್ಡದಾಗಿದ್ದವು. ಇದಲ್ಲದೆ, ಈ ಚಿತ್ರವನ್ನು ಮೈತ್ರಿ ಮೇಕರ್ಸ್‌ನಂತಹ ಪ್ರತಿಷ್ಠಿತ ಬ್ಯಾನರ್ ನಿರ್ಮಿಸಿರುವುದರಿಂದ, ವ್ಯಾಪಾರ ವಲಯಗಳಲ್ಲಿ ಆರಂಭದಿಂದಲೂ ಅದರ ಬಗ್ಗೆ ಆಸಕ್ತಿ ಇತ್ತು. ಸಾಮಾನ್ಯವಾಗಿ, ರಾಮ್ ಪೋಥಿನೇನಿ ಚಿತ್ರವು ಸಕಾರಾತ್ಮಕ ಚರ್ಚೆಯನ್ನು ಪಡೆದರೆ, ಅದು ಗಲ್ಲಾಪೆಟ್ಟಿಗೆಯಲ್ಲಿ ಸುನಾಮಿ ಸೃಷ್ಟಿಸಬೇಕು.

## ಜೈಲರ್-2 ಸಿನಿಮಾಗೆ ವಿದ್ಯಾ ಬಾಲನ್ ಎಂಟ್ರಿ!



ಸೂಪರ್‌ಸ್ಟಾರ್ ರಜನಿಕಾಂತ್ ಹಾಗೂ ನೆಲ್ಸನ್ ದಿಲೀಪ್ ಕುಮಾರ್ ಕಾಂಬಿನೇಷನ್‌ನ ಜೈಲರ್ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಟ್ರೇಡ್ ಮಾರ್ಕ್ ಕ್ರಿಯೇಟ್ ಮಾಡಿದೆ. ಇದೀಗ ಪಾರ್ಟ್-2 ಸಿನಿಮಾ ಸದ್ದಿಲ್ಲದೇ ಶೂಟಿಂಗ್ ಮುಗಿಸುವತ್ತ ಪ್ಲ್ಯಾನ್ ಮಾಡಿಕೊಂಡಿದೆ. ಇನ್ನು ಈ ಸಿನಿಮಾಗೆ ಒಬ್ಬೊಬ್ಬರೇ ಕಲಾವಿದರು ಸೇರಿಕೊಳ್ಳುತ್ತಾ ಟೀಂ ದಿನದಿಂದ ದಿನಕ್ಕೆ ದೊಡ್ಡದಾಗುತ್ತಿದೆ.

ಜೈಲರ್ ಸಿನಿಮಾದಲ್ಲಿ ಸೌತ್‌ನ ಸ್ಟಾರ್ ನಟರು ಸಖತ್ ವೇಟೇಜ್ ನೀಡಿದ್ದಾರೆ. ಇದೀಗ ಪಾರ್ಟ್-2 ಸಿನಿಮಾದಲ್ಲೂ ದೊಡ್ಡ ತಾರಾಗಣವಿರಲಿದೆ. ಈ ಸಿನಿಮಾದಲ್ಲಿ ಸ್ಯಾಂಡಲ್‌ವುಡ್‌ನ ನಟ ಶಿವರಾಜ್‌ಕುಮಾರ್ ಕೂಡಾ ಮೊದಲ ಪಾರ್ಟ್‌ನಂತೆ ಪಾರ್ಟ್-2 ಚಿತ್ರದಲ್ಲೂ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅಂದಹಾಗೆ ಜೈಲರ್-2 ಸಿನಿಮಾದ ವಿಶೇಷ ಪಾತ್ರದಲ್ಲಿ ವಿದ್ಯಾ ಬಾಲನ್ ಅಭಿನಯಿಸುತ್ತಿದ್ದಾರಂತೆ.

ವಿದ್ಯಾ ಬಾಲನ್ ಅವರನ್ನ ಬಾಲಿವುಡ್‌ನಿಂದ ಕರೆತರೋಕೆ ಮುಖ್ಯ ಕಾರಣ ಕೂಡಾ ಇದೆ.

ಈ ಸಿನಿಮಾದಲ್ಲಿ ಟ್ವಿಸ್ಟ್ ಅಂಡ್ ಟರ್ನ್ ಕೊಡು ಒಂದು ಇಂಪಾರ್ಟೆಂಟ್ ರೋಲ್‌ನಲ್ಲಿ ವಿದ್ಯಾ ಬಾಲನ್ ಕಾಣಿಸಿಕೊಳ್ಳಲಿದ್ದಾರಂತೆ. ಈ ಸಿನಿಮಾ ಈಗಿರುವ ಮಾಹಿತಿ ಪ್ರಕಾರ ಸದ್ಯದಲ್ಲಿಯೇ ಶೂಟಿಂಗ್ ಮುಗಿಸಿ, ಆಗಸ್ಟ್ 14ರಂದು ವರ್ಲ್ಡ್ ವೈಡ್ ರಿಲೀಸ್ ಆಗಲಿದೆಯಂತೆ.

## ಇಷ್ಟ ಆದೆ ನೀನು ಅಂತಿದ್ದಾರೆ

ದಿಯಾ ಖ್ಯಾತಿಯ ಪೃಥ್ವಿ ಅಂಬಾರ್ ಹಾಗೂ ದೊಡ್ಮನೆ ಹುಡ್ಗಿ ಧನ್ಯ ರಾಮ್‌ಕುಮಾರ್ ನಟನೆಯ ಚೌಕಿದಾರ್ ಸಿನಿಮಾದ ಮೂರನೇ ಹಾಡು ಬಿಡುಗಡೆಯಾಗಿದೆ. ಈ ಹಿಂದೆ ರಿಲೀಸ್ ಆಗಿದ್ದ ಎರಡು ಹಾಡುಗಳಿಗೆ ಭರ್ಜರಿ ಪ್ರತಿಕ್ರಿಯೆ ಸಿಕ್ಕಿದ್ದು, ಇದೀಗ ಚಿತ್ರತಂಡ ಇಷ್ಟ ಆದೆ ನೀನು ಎಂಬ ಮೆಲೋಡಿ ಗೀತೆಯನ್ನು ಅನಾವರಣ ಮಾಡಿದೆ. ಎಂಟಿಆರ್ ಮ್ಯೂಸಿಕ್ ಯೂಟ್ಯೂಬ್ ನಲ್ಲಿ ಬಿಡುಗಡೆಯಾಗಿರುವ ಇಷ್ಟ ಆದೆ ನೀನು ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯ ಬರೆದಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಒದಗಿಸುವುದರ ಜೊತೆಗೆ ಪೃಥ್ವಿ ಭಟ್ ಜೊತೆಗೂಡಿ ಧ್ವನಿಯಾಗಿದ್ದಾರೆ.



ರಥಾವರ ಸಿನಿಮಾ ಖ್ಯಾತಿಯ ಚಂದ್ರಶೇಖರ ಬಂಡಿಯಪ್ಪ ಕಥೆ ಬರೆದು ಚೌಕಿದಾರ್ ಸಿನಿಮಾವನ್ನು ನಿರ್ದೇಶನ ಮಾಡಿದ್ದಾರೆ. ಹಿರಿಯ ನಟ ಸಾಯಿ ಕುಮಾರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಹಿರಿಯ ನಟಿ ಶ್ವೇತಾ, ಸುಧಾರಾಣಿ, ಧರ್ಮ, ಬಿಗ್ ಬಾಸ್ ಖ್ಯಾತಿಯ ಗಿಲ್ಲಿ ನಟ ಸೇರಿದಂತೆ ಹಲವರು ತಾರಾ ಬಳಗದಲ್ಲಿದ್ದಾರೆ. ವಿ ಎಸ್ ಎಂಟರ್ಟೈನ್ಮೆಂಟ್ ಬ್ಯಾನರ್‌ಡಿ ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡಿದ್ದಾರೆ.

ವಿದ್ಯಾದೇವಿ ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ. 'ಚೌಕಿದಾರ್' ಬಹುಭಾಷೆಯಲ್ಲಿ ಮೂಡಿ ಬರುತ್ತಿದ್ದು, ಈ ಚಿತ್ರದ ಮೂಲಕ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಯಾವುದೋ ಹೊಸ ಕಥೆಯನ್ನು ಹೇಳಲು ಸಜ್ಜಾಗಿದ್ದಾರೆ. ಚೌಕಿದಾರ್ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಈಗಾಗಲೇ ಸೆನ್ಸಾರ್ ನಿಂದ ಯು/ಎ ಸರ್ಟಿಫಿಕೇಟ್ ಪಡೆದಿರುವ ಚಿತ್ರದ ಬಿಡುಗಡೆ ದಿನಾಂಕವನ್ನು ಚಿತ್ರರಂಗದ ಖ್ಯಾತ ತಾರೆಯೊಬ್ಬರು ಬಿಡುಗಡೆ ಮಾಡಲಿದ್ದಾರೆ.

## ಪಾಕ್ ವೇಗಿಗೆ ಇದೆಂಥಾ ಅವಮಾನ!

ಬಿಗ್ ಬ್ಯಾಷ್ ಲೀಗ್ 2025-26 ರ ಎರಡನೇ ಪಂದ್ಯದಲ್ಲಿ, ಬ್ರಿಸ್ಬೇನ್ ಹೀಟ್ ಮತ್ತು ಮೆಲ್ಬೋರ್ನ್ ರೆನೆಗೇಡ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದೊಂದಿಗೆ, ಪಾಕಿಸ್ತಾನದ ಸ್ಟಾರ್ ವೇಗಿ ಶಾಹೀನ್ ಶಾ ಅಫ್ರಿದಿ ಕೂಡ ಬ್ರಿಸ್ಬೇನ್ ಹೀಟ್ ಪರ ತಮ್ಮ ಮೊದಲ ಬಿಬಿಎಲ್ ಪಂದ್ಯವನ್ನು ಆಡಿದರು. ಆದರೆ ಬಿಬಿಎಲ್‌ನ ಚೊಚ್ಚಲ ಪಂದ್ಯದಲ್ಲಿಯೇ ಅಫ್ರಿದಿ ಮುಜುಗರಕ್ಕೊಳಗಾಗುವಂತಹ ಘಟನೆ ನಡೆದಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮೆಲ್ಬೋರ್ನ್ ರೆನೆಗೇಡ್ಸ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗಳನ್ನು ಕಳೆದುಕೊಂಡು 212 ರನ್ ಕಲೆಹಾಕಿತು. ಇತ್ತ ಬ್ರಿಸ್ಬೇನ್ ಹೀಟ್ ಪರ ಕಣಕ್ಕಿಳಿದಿದ್ದ ಶಾಹೀನ್ ಶಾ ಅಫ್ರಿದಿ ಸರಾಗವಾಗಿ ರನ್ ಬಿಟ್ಟುಕೊಟ್ಟರು. ಇದು ಮಾತ್ರವಲ್ಲದೆ ನಿಯಮ ಮುರಿದ ಅಫ್ರಿದಿಯನ್ನು ಓವರ್ ಮಧ್ಯದಲ್ಲೇ ಬೌಲಿಂಗ್ ಮಾಡದಂತೆ ತಡೆದ ಘಟನೆಯೂ ನಡೆಯಿತು.



ಓವರ್ ಮಧ್ಯದಲ್ಲಿಯೇ ಬೌಲಿಂಗ್ ನಿಲ್ಲಿಸಿದ ಅಂಪೈರ್

ಈ ಪಂದ್ಯದಲ್ಲಿ ತುಂಬಾ ದುಬಾರಿಯಾದ ಶಾಹೀನ್ ಶಾ ಅಫ್ರಿದಿ ಬೌಲ್ ಮಾಡಿದ್ದು ಕೇವಲ 2.4 ಓವರ್‌ಗಳಾದರೂ ಒಂದೇ ಒಂದು ವಿಕೆಟ್ ಪಡೆಯದೆ 43 ರನ್ ಬಿಟ್ಟುಕೊಟ್ಟರು. ಇದಲ್ಲದೆ ತಮ್ಮ ಖೋಟಾದ ಮೂರನೇ ಓವರ್‌ನಲ್ಲಿ ಅಫ್ರಿದಿ ಎರಡು ಹೈ ಫುಲ್ ಟಾಸ್ ಚೆಂಡುಗಳನ್ನು ಎಸೆದಿದ್ದರಿಂದ ಅಂಪೈರ್ ಅವರನ್ನು ಬೌಲಿಂಗ್ ಮಾಡದಂತೆ ತಡೆದರು.

ವಾಸ್ತವವಾಗಿ ಕ್ರಿಕೆಟ್ ನಿಯಮಗಳ ಪ್ರಕಾರ, ಬೌಲರ್ ಒಂದು ಓವರ್‌ನಲ್ಲಿ ಎರಡು ಅಪಾಯಕಾರಿ ಹೈ ಫುಲ್ ಟಾಸ್‌ಗಳನ್ನು (ಬೀಮರ್‌ಗಳು) ಎಸೆದರೆ ಅವರ ಬೌಲಿಂಗ್ ಅನ್ನು ಅಲ್ಲಿಗೆ ನಿಲ್ಲಿಸಲಾಗುತ್ತದೆ.

ಈ ನಿಯಮದ ಪ್ರಕಾರ ಅಂಪೈರ್, ಶಾಹೀನ್ ಅಫ್ರಿದಿ ಅವರನ್ನು ಓವರ್ ಮಧ್ಯದಲ್ಲೇ ಬೌಲಿಂಗ್ ಮಾಡದಂತೆ ತಡೆದರು. ಕ್ರಿಕೆಟ್‌ನಲ್ಲಿ ನಿಯಮ ಇದ್ದರೂ, ಹೆಚ್ಚಿನ ಸಂದರ್ಭಗಳಲ್ಲಿ ಈ ನಿಯಮವನ್ನು ಅಂಪೈರ್‌ಗಳು ಪಾಲಿಸುವುದಿಲ್ಲ. ಆದರೆ ಶಾಹೀನ್ ಅಫ್ರಿದಿ ವಿಚಾರದಲ್ಲಿ ಅಂಪೈರ್ ತೆಗೆದುಕೊಂಡ ನಿರ್ಧಾರ, ಅಫ್ರಿದಿಗೆ ಮುಜುಗುರವನ್ನುಂಟುಮಾಡಿದೆ ಎಂಬುದರಲ್ಲಿ ಸುಳ್ಳಿಲ್ಲ.

## ವಿಶ್ವಕಪ್ ಫೈನಲ್‌ನಲ್ಲಿ ಮಿಂಚಿದ ಶೆಫಾಲಿಗೆ ಐಸಿಸಿ ಪ್ರಶಸ್ತಿ!

ಭಾರತ ಮಹಿಳಾ ತಂಡ ವಿಶ್ವಕಪ್ ಗೆಲ್ಲುವಲ್ಲಿ ಶೆಫಾಲಿ ವರ್ಮಾ ಪ್ರಮುಖ ಪಾತ್ರ ವಹಿಸಿದ್ದರು. ಇದಕ್ಕಾಗಿ ಫೈನಲ್ ನಂತರ ಶೆಫಾಲಿ ವರ್ಮಾ ಅವರಿಗೆ ಪಂದ್ಯ ಶ್ರೇಷ್ಠ ಪ್ರಶಸ್ತಿ ಸಿಕ್ಕಿತ್ತು. ಇದೀಗ ಶೆಫಾಲಿ ಅವರಿಗೆ ಐಸಿಸಿಯ ಪ್ರಮುಖ ಪ್ರಶಸ್ತಿ ಲಭಿಸಿದೆ. ಶೆಫಾಲಿ ಅವರನ್ನು ನವೆಂಬರ್ 2025 ರ ಐಸಿಸಿ ತಿಂಗಳ ಆಟಗಾರ್ತಿ ಎಂದು ಹೆಸರಿಸಲಾಯಿತು. ದಕ್ಷಿಣ ಆಫ್ರಿಕಾ ವಿರುದ್ಧದ ಮಹಿಳಾ ವಿಶ್ವಕಪ್ ಫೈನಲ್‌ನಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಮೂಲಕ ಶೆಫಾಲಿ ಮನಮೋಹಕ ಪ್ರದರ್ಶನ ನೀಡಿದ್ದರು.

ಅವಾರ್ಡ್ ಯಾರಿಗೆ ಅರ್ಪಿಸಿದ್ರು ಗೊತ್ತಾ ಲೇಡಿ ಸೆಹ್ವಾಗ್

ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ 2025 ರ ಫೈನಲ್ ಪಂದ್ಯ ನಡೆದಿತ್ತು. ಈ ಹೈವೋಲ್ಟೇಜ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಶೆಫಾಲಿ ವರ್ಮಾ 78 ಎಸೆತಗಳಲ್ಲಿ 87 ರನ್ ಗಳಿಸಿದರು. ಇದು ಮಹಿಳಾ ವಿಶ್ವಕಪ್ ಫೈನಲ್ ಇತಿಹಾಸದಲ್ಲಿ ಭಾರತ ಆರಂಭಿಕ ಆಟಗಾರ್ತಿಯೊಬ್ಬರ ಅತ್ಯಧಿಕ ಸ್ಕೋರ್ ಆಗಿದೆ. ಬಳಿಕ ಬೌಲಿಂಗ್ ದಾಳಿಗಿಳಿದ ಶೆಫಾಲಿ 7 ಓವರ್‌ಗಳಲ್ಲಿ 36 ರನ್ ನೀಡಿ 2 ಪ್ರಮುಖ ವಿಕೆಟ್‌ಗಳನ್ನು ಉರುಳಿಸಿದ್ದರು.



ಶೆಫಾಲಿ ಸುನೆ ಲೂಸ್ ಮತ್ತು ಮರಿಜಾನ್ನೆ ಕಪ್ ಅವರ ವಿಕೆಟ್‌ಗಳನ್ನು ಪಡೆದು ಪಂದ್ಯಕ್ಕೆ ತಿರುವು ಕೊಟ್ಟಿದ್ದರು. ಈ ಎರಡು ವಿಕೆಟ್ ಭಾರತದ ವಿಶ್ವಕಪ್ ಗೆಲುವಿಗೆ ಪ್ರಮುಖ ಪಾತ್ರವಹಿಸಿ. ಲೂಸ್ ಮತ್ತು ಲಾರಾ ವೋಲ್ವಾರ್ಡ್ ನಡುವಿನ ಡೇಂಜರ್ಸ್ ಜೊತೆಯಾಟವನ್ನು ಶೆಫಾಲಿ ಮುರಿಯುವಲ್ಲಿ ಯಶಸ್ವಿಯಾಗಿದ್ದರು.

**ಅದೃಷ್ಟದ ಬಾಗಿಲು ತೆರೆದ ಗಾಯ**

ಮಹಿಳಾ ವಿಶ್ವಕಪ್ ಭಾರತ ತಂಡದಲ್ಲಿ ಶೆಫಾಲಿ ವರ್ಮಾ ಆಯ್ಕೆಯಾಗಿರಲಿಲ್ಲ. ಅವರ ಸ್ಥಾನದಲ್ಲಿ ಪ್ರತಿಕಾ ರಾವಲ್ ಅವರನ್ನು ಆರಂಭಿಕ ಬ್ಯಾಟರ್ ಆಗಿ ಆಯ್ಕೆ ಮಾಡಲಾಗಿತ್ತು. ಸೆಮಿಫೈನಲ್‌ಗೂ ಮುನ್ನ ಅಂತಿಮ ಲೀಗ್ ಪಂದ್ಯದಲ್ಲಿ ಪ್ರತೀಕಾ ಗಾಯಗೊಂಡು ಟೂರ್ನಿಯಿಂದ ಹೊರಗುಳಿಬೇಕಾಯಿತು.

## ಶಿಖರ್ ಧವನ್ ಆತ್ಮಚರಿತ್ರೆ ಬುಕ್ ಬಿಡುಗಡೆ!

ವೃತ್ತಿಜೀವನ ಬದಲಿಸಿದ ಅದೊಂದು ಘಟನೆ

ಶಿಖರ್ ಧವನ್ ಇತ್ತೀಚೆಗೆ ತಮ್ಮ ಆತ್ಮಚರಿತ್ರೆ 'ದಿ ಒನ್: ಕ್ರಿಕೆಟ್, ಮೈ ಲೈಫ್ ಅಂಡ್ ಮೋರ್' ಬುಕ್ ಅನ್ನು ಬಿಡುಗಡೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರು ತಮ್ಮ ಕ್ರಿಕೆಟ್‌ವೃತ್ತಿಜೀವನದ ಬಗ್ಗೆ ಅನೇಕ ಆಸಕ್ತಿದಾಯಕ ವಿಷಯಗಳನ್ನು ಹಂಚಿಕೊಂಡಿದ್ದಾರೆ. ತಮ್ಮ ಕ್ರಿಕೆಟ್ ವೃತ್ತಿಜೀವನಕ್ಕೆ ತಿರುವು ನೀಡಿದ ಘಟನೆಯ ಬಗ್ಗೆ ತಮ್ಮ ಪುಸ್ತಕದಲ್ಲಿ ಬರೆದಿರುವುದಾಗಿ ಧವನ್ ಬಹಿರಂಗಪಡಿಸಿದ್ದಾರೆ. ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ಹೋಟೆಲ್ ಒಂದರಲ್ಲಿ ಬ್ರಿಟಿಷ್ ಮಹಿಳೆ ಎಲೆನ್ ಜೊತೆ ಕೈ ಹಿಡಿದ ಘಟನೆ ಆ ಸಮಯದಲ್ಲಿ ಬಿಸಿ ಚರ್ಚೆಯ ವಿಷಯವಾಯಿತು ಎಂದು ಧವನ್ ಹೇಳಿಕೊಂಡಿದ್ದಾರೆ.

ಧವನ್ ಅವರ ಆತ್ಮಚರಿತ್ರೆಯ ಬುಕ್ ಅವರ ಆರಂಭಿಕ ಆಸ್ಟ್ರೇಲಿಯಾ ಪ್ರವಾಸದ ಒಂದು ಕ್ಷಣವನ್ನು ಒಳಗೊಂಡಿದೆ. ಅದು ಅವರ ಯುವ ವೃತ್ತಿಜೀವನವನ್ನು ಹಳಿತಪ್ಪಿಸುವ ಬೆದರಿಕೆ ಹಾಕಿದ್ದರ ಬಗ್ಗೆ ಬಹಿರಂಗಪಡಿಸಲಿದೆ. ಆಸ್ಟ್ರೇಲಿಯಾಕ್ಕೆ ಭಾರತ ಎ ತಂಡದ ಪ್ರವಾಸವನ್ನು ನೆನಪಿಸಿಕೊಂಡ ಧವನ್ ತಮ್ಮ ವೃತ್ತಿ ಜೀವನವನ್ನೇ ಬದಲಿಸಿದ ಘಟನೆವೊಂದರನ್ನು ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ಒಂದು ಸಂಜೆ, ನಾನು ಬ್ರಿಟಿಷ್ ಗೆಳತಿ ಎಲೆನ್ ಜೊತೆ ಊಟಕ್ಕೆ ಹೋಗಿದ್ದೆ. ಈ ಸುದ್ದಿ ಇಡೀ ತಂಡಕ್ಕೆ ಕಾಡ್ಗಿಚ್ಚಿನಂತೆ ಹರಡಿತು. ನಮ್ಮೊಂದಿಗೆ ಪ್ರವಾಸದಲ್ಲಿದ್ದ ಹಿರಿಯ ರಾಷ್ಟ್ರೀಯ ಆಯ್ಕೆದಾರರು, ನಾವು ಕೈಗಳನ್ನು ಹಿಡಿದುಕೊಂಡು ಲಾಬಿಯಲ್ಲಿ ನಡೆದು ಹೋಗುವುದನ್ನು ಗಮನಿಸಿದರು.

ಆ ಆಸ್ಟ್ರೇಲಿಯಾ ಪ್ರವಾಸದಲ್ಲಿ ನಾನು ಸ್ಥಿರವಾಗಿ ಪ್ರದರ್ಶನ ನೀಡಿದ್ದರೆ, ನಾನು ಹಿರಿಯರ ಭಾರತ ತಂಡಕ್ಕೆ ಸೇರುವ ಸಾಧ್ಯತೆ ಹೆಚ್ಚಿತ್ತು. ಆದರೆ, ನನ್ನ ಪ್ರದರ್ಶನ ಕುಸಿಯುತ್ತಲೇ ಇತ್ತು' ಎಂದು ಹೇಳಿದ್ದಾರೆ. ಆಗ ನಾನು ತುಂಬಾ ಚಿಕ್ಕವನಾಗಿದ್ದೆ. ನಾನು ವಿಮಾನ ನಿಲ್ದಾಣದಲ್ಲಿ ಒಬ್ಬ ಹುಡುಗಿಯನ್ನು ಭೇಟಿಯಾದೆ, ಆ ಪರಿಚಯ ಅಂತಿಮವಾಗಿ ನನ್ನನ್ನು ಪ್ರವಾಸಕ್ಕೆ ಕರೆದೊಯ್ಯಲು ಕಾರಣವಾಯಿತು. ಅದರಿಂದಾಗಿ ನಾನು ಅನೇಕ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಯಿತು. ಆ ಘಟನೆಯ ನಂತರ, ನನ್ನ ಪ್ರದರ್ಶನ ಬಹಳಷ್ಟು ಕುಸಿಯಿತು. ನನ್ನ ವೃತ್ತಿಜೀವನವೂ ಎರಡು ವರ್ಷಗಳಷ್ಟು ಹಿಂದಕ್ಕೆ ಹೋಯಿತು. ಇದು ಯಾರನ್ನೂ ದೂಷಿಸಲು ಸಾಧ್ಯವಿಲ್ಲ. ಯುವ ಆಟಗಾರರು ಇದನ್ನು ತಿಳಿದುಕೊಂಡು ಸ್ವಲ್ಪ ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಂಡರೆ ಸಾಕು ಎಂದು ಧವನ್ ವಿವರಿಸಿದ್ದಾರೆ.



## ಭಾರತ ಹೆಣೆದ ಬಲೆಗೆ ಬಿದ್ದೆವು!

ಧರ್ಮಶಾಲಾದಲ್ಲಿ ನಡೆದ 3ನೇ ಟಿ20 ಪಂದ್ಯದಲ್ಲಿ ಭಾರತ 7 ವಿಕೆಟ್‌ಗಳಿಂದ ಗೆದ್ದು ಸರಣಿಯಲ್ಲಿ 2-1ರಲ್ಲಿ ಮುನ್ನಡೆ ಸಾಧಿಸಿತು. ಭಾರತದ ಬೌಲರ್‌ಗಳು ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿ ಹರಿಣ ಪಡೆಯನ್ನ ಕೇವಲ 117 ರನ್‌ಗಳಿಗೆ ನಿಯಂತ್ರಿಸಿತು. ಈ ಗುರಿಯನ್ನ ಭಾರತ ತಂಡ 15.5 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಭಾರತೀಯ ಬೌಲರ್‌ಗಳ ಅಸಾಧಾರಣ ಪ್ರದರ್ಶನದ ಜೊತೆಗೆ ಸತತ ವಿಕೆಟ್‌ಗಳ ನಷ್ಟವು ನಮ್ಮ ಸೋಲಿಗೆ ಕಾರಣವಾಯಿತು ಎಂದು ದಕ್ಷಿಣ ಆಫ್ರಿಕಾ ನಾಯಕ ಏಡೆನ್ ಮಾರ್ಕ್ರಾಮ್ ಹೇಳಿದ್ದಾರೆ. ತಮ್ಮ ತಂಡವು 140-150 ಗುರಿಯನ್ನು ನಿಗದಿಪಡಿಸಿದ್ದರೆ ಪಂದ್ಯವು ಹೆಚ್ಚು ಆಸಕ್ತಿದಾಯಕವಾಗುತ್ತಿತ್ತು ಎಂದು ಹೇಳಿದ್ದಾರೆ.



ಪಂದ್ಯದ ನಂತರ ತಮ್ಮ ಸೋಲಿಗೆ ಪ್ರತಿಕ್ರಿಯಿಸಿದ ಮಾರ್ಕ್ರಮ್, ನಮ್ಮ ಬ್ಯಾಟಿಂಗ್ ವೈಫಲ್ಯವು ಯಶಸ್ಸಿನ ಸಾಧ್ಯತೆಗಳನ್ನು ಹಾನಿಗೊಳಿಸಿತು ಎಂದು ಹೇಳಿದರು. ಭಾರತೀಯ ಬೌಲರ್‌ಗಳೊಂದಿಗೆ ಅಭಿಷೇಕ್ ಶರ್ಮಾ ಅವರ ವಿನಾಶಕಾರಿ ಬ್ಯಾಟಿಂಗ್ ಕೂಡ ನಮ್ಮನ್ನ ಪಂದ್ಯದಲ್ಲಿ ಹಿಂದುಳಿಯುವಂತೆ ಮಾಡಿತು ಎಂದು ತಿಳಿಸಿದ್ದಾರೆ. 'ಬ್ಯಾಟಿಂಗ್‌ಗೆ ಕಠಿಣ ಪರಿಸ್ಥಿತಿ ಇತ್ತು, ಭಾರತೀಯ ಬೌಲರ್‌ಗಳು ಅತ್ಯುತ್ತಮವಾದ ಲೆಂತ್‌ಗಳಲ್ಲಿ ಬೌಲಿಂಗ್ ಮಾಡಿದರು. ನಾವು ಸತತವಾಗಿ 4-5 ವಿಕೆಟ್‌ಗಳನ್ನು ಕಳೆದುಕೊಂಡೆವು. ಭಾರತದ ಬೌಲರ್‌ಗಳು ಟೆಸ್ಟ್ ಪಂದ್ಯದ ಎಸೆತಗಳನ್ನು ಪ್ರಯೋಗಿಸಿ ನಮ್ಮ ಬ್ಯಾಟರ್‌ಗಳನ್ನ ತಮ್ಮ ಬಲೆಗೆ ಕೆಡವಿದರು. ಅಂತಹ ಎಸೆತಗಳನ್ನ ನಿಭಾಯಿಸುವುದು ನಮಗೆ ಸವಾಲಾಗಿ ಪರಿಣಮಿಸಿತು. ಭವಿಷ್ಯದಲ್ಲಿ ಅಂತಹ ಸಂದರ್ಭಗಳು ಉದ್ಭವಿಸಿದರೆ. ಅವುಗಳನ್ನು ಎದುರಿಸಲು ಮತ್ತು ಎದುರಾಳಿಯ ಮೇಲೆ ಮತ್ತೆ ಒತ್ತಡ ಹೇರಲು ನಾವು ಮಾರ್ಗಗಳನ್ನು ಕಂಡುಕೊಳ್ಳಬೇಕು.

ಭಾರತ ನಮಗಿಂತ ಉತ್ತಮವಾಗಿ ಪ್ರದರ್ಶನ ನೀಡಿತು. ಈ ಗೆಲುವಿನ ಶ್ರೇಯ ಅವರಿಗೆ ಸಲ್ಲುತ್ತದೆ. ಅವರು ನಮಗೆ ರನ್ ಗಳಿಸಲು ಅವಕಾಶ ನೀಡಲಿಲ್ಲ. ನಾನು ಕೊನೆಯವರೆಗೂ ಇನ್ನಿಂಗ್ಸ್ ತೆಗೆದುಕೊಳ್ಳಲು ಪ್ರಯತ್ನಿಸಿದೆ. ನಾನು ತಂಡಕ್ಕೆ 140-150 ರನ್‌ಗಳ ಸ್ಕೋರ್ ನೀಡಿದ್ದರೆ, ಪಂದ್ಯವು ಹೆಚ್ಚು ಆಸಕ್ತಿದಾಯಕವಾಗಿರುತ್ತಿತ್ತು.

ಸೋಲಿಗೆ ಕಾರಣ ಬಿಚ್ಚಿಟ್ಟ ಏಡೆನ್

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966